# ಕರ್ನಾಟಕ ಅರಣ್ಯ ಅಧಿನಿಯಮ, 1963


ಉದ್ದೇಶ ಮತ್ತು ಕಾರಣಗಳ ಹೇಳಿಕೆಗಳು

ಪ್ರಕರಣಗಳು ಪ್ರಕರಣಗಳ ಅನುಕ್ರಮಣಿಕೆ

**ಅಧ್ಯಾಯ-I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ-II**

3. ಮೀಸಲು ಅರಣ್ಯಗಳನ್ನು ನಿರ್ಮಿಸಲು ಅಧಿಕಾರ
4. ಸರ್ಕಾರದಿಂದ ಅಧಿಸೂಚನೆ
5. ಅರಣ್ಯ ವ್ಯವಸ್ಥಾಪನಾ ಅಧಿಕಾರಿಯಿಂದ ಉದ್ಘೋಷಣೆ
6. ಅರಣ್ಯ ಹಕ್ಕು ಪ್ರಾಪ್ತಿಗೆ ಪ್ರತಿಬಂಧ
7. ಅರಣ್ಯ ವ್ಯವಸ್ಥಾಪನಾ ಅಧಿಕಾರಿಯಿಂದ ವಿಚಾರಣೆ
8. ಅರಣ್ಯ ವ್ಯವಸ್ಥಾಪನಾ ಅಧಿಕಾರಿಯ ಅಧಿಕಾರಗಳು
9. ಹಕ್ಕುಗಳ ಅಳಿವು
10. ಸರದಿ ಸಾಗುವಳಿಯ ಸಂಬಂಧದಲ್ಲಿ ಕ್ಲೇಮುಗಳ ಬಗ್ಗೆ ವ್ಯವಹರಿಸುವುದು
11. ಹಕ್ಕನ್ನು ಕ್ಲೇಮು ಮಾಡಲಾದ ಭೂಮಿಯನ್ನು ಆರ್ಜಿಸಲು ಅಧಿಕಾರ
12. ದಾರಿಯ ಅಥವಾ ಹುಲ್ಲುಗಾವಲಿನ ಅಥವಾ ಅರಣ್ಯ ಉತ್ಪನ್ನದ ಅಥವಾ ನೀರಿನ ಹಕ್ಕುಗಳ ಕ್ಲೇಮುಗಳ ಮೇಲೆ ಆದೇಶ
13. ಕ್ಲೇಮನ್ನು ಒಪ್ಪಿಕೊಂಡಲ್ಲಿ ದಾಖಲ್ಮಾಡುವುದು
14. ಒಪ್ಪಿಕೊಂಡ ಹಕ್ಕುಗಳ ಚಲಾವಣೆ
15. ಹಕ್ಕುಗಳ ಬಗ್ಗೆ ಪರಿಹಾರ
16. 11ನೇ ಪ್ರಕರಣದ, 12ನೇ ಪ್ರಕರಣದ, 14ನೇ ಪ್ರಕರಣದ ಅಥವಾ 15ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶದ ಮೇಲೆ ಅಪೀಲು
17. ಅರಣ್ಯವನ್ನು ಮೀಸಲು ಅರಣ್ಯವನ್ನಾಗಿ ಘೋಷಿಸುವ ಅಧಿಸೂಚನೆ
18. ಅಧಿಸೂಚನೆಯ ಪ್ರಕಟಣೆ

19. 14ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ವ್ಯವಸ್ಥೆಗಳನ್ನು ಪರಿಷ್ಕರಿಸುವುದಕ್ಕೆ ಮತ್ತು ಕೆಲವು ಸಂದರ್ಭಗಳಲ್ಲಿ ಮೀಸಲು ಅರಣ್ಯಗಳ ಗಡಿಗಳನ್ನು ಪುನಃ ನಿಗದಿಪಡಿಸುವುದಕ್ಕೆ ಅಧಿಕಾರ

20. ಉಪಬಂಧಿಕರಿಸುವುದನ್ನು ಹೊರತುಪಡಿಸಿ ಮೀಸಲು ಅರಣ್ಯದ ಮೇಲೆ ಯಾವ ಹಕ್ಕನ್ನು ಆರ್ಜಿಸುವಂತಿಲ್ಲ

21. ಮೀಸಲು ಅರಣ್ಯದಲ್ಲಿರುವ ಹಕ್ಕಿನ ಪರಭಾರೆ

22. ಮೀಸಲು ಅರಣ್ಯಗಳಲ್ಲಿ ದಾರಿಗಳನ್ನು ಮತ್ತು ಜಲಮಾರ್ಗಗಳನ್ನು ನಿಲ್ಲಿಸಿಬಿಡುವ ಅಧಿಕಾರ

23. ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮೊದಲು ನಿರ್ಮಿಸಲಾಗಿದ್ದ ಮೀಸಲು ಅರಣ್ಯಗಳು

24. ಮೀಸಲು ಅರಣ್ಯಗಳಲ್ಲಿ ನಿಷೇಧಿಸಲಾಗಿರುವ ಕಾರ್ಯಗಳು

25. 24ನೇ ಪ್ರಕರಣದಿಂದ ಹೊರತುಪಡಿಸಲಾದ ಕಾರ್ಯಗಳು

26. ಮೀಸಲು ಅರಣ್ಯಗಳಲ್ಲಿ ವಿಶೇಷಾಧಿಕಾರಗಳನ್ನು ನೀಡಬಹುದು

27. ಮೀಸಲು ಅರಣ್ಯದಲ್ಲಿ ಹಕ್ಕುಳ್ಳ ವ್ಯಕ್ತಿಗಳು ಮಾಡಿದ ಅಪರಾಧಗಳ ಬಗ್ಗೆ ದಂಡಗಳು

28. ಅರಣ್ಯಗಳು ಇನ್ನು ಮುಂದೆ ಮೀಸಲು ಅರಣ್ಯಗಳಾಗಿರುವುದಿಲ್ಲವೆಂದು ಘೋಷಿಸಲು ಅಧಿಕಾರ


**ಅಧ್ಯಾಯ- III**

**ಗ್ರಾಮ ಅರಣ್ಯಗಳು**


29. ಗ್ರಾಮ ಅರಣ್ಯಗಳ ನಿರ್ಮಾಣ

30. ಗ್ರಾಮ ಅರಣ್ಯಗಳ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರಿ

31. ಹಕ್ಕುಗಳ ವಿಚಾರಣೆ ಮತ್ತು ಇತ್ಯರ್ಥ

31ಎ. ಜಂಟಿ ಅರಣ್ಯಯೋಜನೆ ಮತ್ತು ಅರಣ್ಯದ ವ್ಯವಸ್ಥಾಪನೆಗಾಗಿ ಗ್ರಾಮ ಅರಣ್ಯ ಸಮಿತಿಯ ರಚನೆ


**ಅಧ್ಯಾಯ – IV**

**ಜಿಲ್ಲಾ ಅರಣ್ಯಗಳು**


32. ಜಿಲ್ಲಾ ಅರಣ್ಯಗಳಲ್ಲಿ ವಿಶೇಷಾಧಿಕಾರಗಳನ್ನು ಮಂಜೂರು ಮಾಡಲು ಅಧಿಕಾರ

33. ಜಿಲ್ಲಾ ಅರಣ್ಯಗಳ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ

34. ಉದ್ದೇಶಪೂರ್ವಕವಾಗಿ ಅಥವಾ ಕೇವಲ ನಿರ್ಲಕ್ಷದಿಂದ ಬೆಂಕಿ ತಗಲಿದ ಸಂಧರ್ಭಗಳಲ್ಲಿ ಹಕ್ಕುಗಳನ್ನು

ಅಮಾನತುಗೊಳಿಸುವುದು

35. ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚಿತವಾಗಿ ನಿರ್ಮಿಸಲಾಗಿರುವ ಸಣ್ಣ ಅರಣ್ಯಗಳು

## ಅಧ್ಯಾಯ-V

## ಸರ್ಕಾರದ ಸ್ವತ್ತಾಗಿರದ ಅರಣ್ಯಗಳ ಮತ್ತು ಭೂಮಿಗಳ ಮೇಲೆ ನಿಯಂತ್ರಣ

36. ಅರ್ಥೈಸುವಿಕೆ

37. ಖಾಸಗಿ ಅರಣ್ಯಗಳ ರಕ್ಷಣೆ

38. ನಿಯಮಗಳ ರಚನಾಧಿಕಾರ

39. ವಿಶೇಷ ಉದ್ದೇಶಗಳಿಗಾಗಿ ಅರಣ್ಯಗಳ ರಕ್ಷಣೆ

40. ಅಪೀಲುಗಳು

41. ದಂಡಗಳು

42. ದಾವೆಗಳಿಗೆ ಪ್ರತಿಬಂಧ

43. ಅರಣ್ಯಗಳ ಆಡಳಿತವನ್ನು ವಹಿಸಿಕೊಳ್ಳಲು ಅಧಿಕಾರ

44. ಆಡಳಿತವನ್ನು ವಹಿಸಿಕೊಂಡುದರ ಪರಿಣಾಮಗಳು

45. ಆಡಳಿತದ ಅವಧಿ

46. ಆಡಳಿತ ಕೊನೆಗೊಳಿಸುವಿಕೆ

47. ಮಾಲೀಕರ ಕೋರಿಕೆಯಂತೆ ಅರಣ್ಯಗಳ ಸಂಬಂಧದಲ್ಲಿ ಸರ್ಕಾರದ ಆಡಳಿತ

48. ಕೆಲವು ಸಂದರ್ಭಗಳಲ್ಲಿ ಅರಣ್ಯಗಳ ಆರ್ಜನೆ

49. ತೊಂದರೆಗಳನ್ನು ನಿವಾರಿಸಲು ಅಧಿಕಾರ

## ಅಧ್ಯಾಯ-VI

## ಸಾಗಣೆಯಲ್ಲಿರುವ ಚೌಬೀನೆಯ ಮತ್ತು ಇತರ ಅರಣ್ಯ ಉತ್ಪನ್ನದ ನಿಯಂತ್ರಣ

50. ಅರಣ್ಯ ಉತ್ಪನ್ನದ ಸಾಗಾಣಿಕೆಯನ್ನು ನಿಯಂತ್ರಿಸುವ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ

51. ರಾಜ್ಯ ಸರ್ಕಾರವು ಮತ್ತು ಅರಣ್ಯ ಅಧಿಕಾರಿಯು ಕೋಠಿಯಲ್ಲಿ ಅರಣ್ಯ ಉತ್ಪನ್ನಕ್ಕೆ ಉಂಟಾದ ನಷ್ಟದ ಬಗ್ಗೆ ಹೊಣೆಯಾಗಿರತಕ್ಕದ್ದಲ್ಲ

52. ಕೋಠಿಯಲ್ಲಿ ಅಪಘಾತ ಸಂಭವಿಸಿದ ಸಂಧರ್ಭದಲ್ಲಿ ನೆರವು ನೀಡಲು ಎಲ್ಲ ವ್ಯಕ್ತಿಗಳು ಬದ್ಧರಿರತಕ್ಕದ್ದು

# ಅಧ್ಯಾಯ-VII
## ತೇಲಿ ಬಂದ ಮತ್ತು ದಡದಲ್ಲಿ ಸಿಕ್ಕ ಚೌಬೀನೆಯ ಸಂಗ್ರಹಣೆ


53. ಕೆಲವು ಬಗೆಗಳ ಚೌಬೀನೆಗಳು ಅದರ ಬಗ್ಗೆ ಹಕ್ಕು ರುಜುವಾತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತಾಗಿದೆ ಎಂದು ಭಾವಿಸತಕ್ಕದ್ದು

54. ತೇಲಿಬಂದ ಚಾಬೀನೆಯ ಕ್ಲೇಮುದಾರರಿಗೆ ನೋಟೀಸು

55. ಅಂತಹ ಚೌಬೀನೆಯ ಕ್ಲೇಮಿನ ಬಗ್ಗೆ ಪ್ರಕ್ರಿಯೆ

56. ಕ್ಲೇಮು ಮಾಡದೆ ಇರುವ ಚೌಬೀನೆಯ ವಿಲೆ

57. ರಾಜ್ಯ ಸರ್ಕಾರವು ಮತ್ತು ಅದರ ಅಧಿಕಾರಿಗಳು ಅಂಥ ಚೌಬೀನೆಗೆ ಉಂಟಾದ ಯಾವುದೇ ಹಾನಿಗೆ ಹೊಣೆಗಾರರಾಗಿರತಕ್ಕದ್ದಲ್ಲ

58. ಚೌಬೀನೆಯನ್ನು ಕ್ಲೇಮುದಾರನ ವಶಕ್ಕೆ ಕೊಡುವುದಕ್ಕೆ ಮೊದಲು ಅವನು ಮಾಡಬೇಕಾದ ಸಂದಾಯಗಳು

59. ನಿಯಮಗಳ ರಚನಾಧಿಕಾರ


# ಅಧ್ಯಾಯ-VIII
## ಜಾನುವಾರುಗಳ ಅತಿಕ್ರಮ ಪ್ರವೇಶ


60. ಜಾನುವಾರುಗಳ ಅತಿಕ್ರಮ ಪ್ರವೇಶ ಅಧಿನಿಯಮ, 1871

61. ಆ ಅಧಿನಿಯಮದ ಅಡಿಯಲ್ಲಿ ನಿಗದಿಪಡಿಸಲಾದ ಜುಲ್ಮಾನೆಗಳನ್ನು ಬದಲಾಯಿಸಲು ಅಧಿಕಾರ


# ಅಧ್ಯಾಯ IX
## ದಂಡಗಳು ಮತ್ತು ಪ್ರಕ್ರಿಯೆ


62. ಮುಟ್ಟುಗೋಲಾಗಬಹುದಾದ ಸ್ವತ್ತಿನ ಜಪ್ತಿ

62ಎ. ತನಿಖೆಯ ವಿಷಯದಲ್ಲಿ ಅರಣ್ಯಾಧಿಕಾರಿಯ ಅಧಿಕಾರಗಳು

62ಬಿ. ತನಿಖಾಧಿಕಾರಿಯಿಂದ ವರದಿ

62ಸಿ. ಅಧಿಕಾರಿಗಳ ಪ್ರಮಾಣ ಪತ್ರ ಒಂದು ಸಾಕ್ಷ್ಯವಾಗಿರುವುದು

63. 62ನೇ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಲಾದ ಸ್ವತ್ತಿನ ಬಿಡುಗಡೆಗೆ ಅಧಿಕಾರ

64. ಬಿಟ್ಟುಬಿಡಲಾಗಿದೆ

64ಎ. ಮೀಸಲು ಅರಣ್ಯ, ಜಿಲ್ಲಾ ಅರಣ್ಯ, ಗ್ರಾಮ ಅರಣ್ಯ, ಸಂರಕ್ಷಿತ ಅರಣ್ಯವಾಗಿ ರಚಿತವಾದ ಭೂಮಿಯನ್ನು ಮತ್ತು ಅರಣ್ಯ

ಇಲಾಖೆಯ ನಿಯಂತ್ರಣದಲ್ಲಿ ಇರುವ ಯಾವುದೇ ಇತರ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನತೆಗೆ ತೆಗೆದುಕೊಂಡದಕ್ಕೆ ದಂಡ

65. ಅರಣ್ಯ ಉತ್ಪನ್ನ, ಉಪಕರಣ ಇತ್ಯಾದಿಗಳು ಮುಟ್ಟುಗೋಲಿಗೆ ಗುರಿಯಾಗುವ ಸಂದರ್ಭಗಳು

66. ಅರಣ್ಯ ಅಪರಾಧದ ವಿಚಾರಣೆಯು ಮುಗಿದ ಮೇಲೆ ಅಪರಾಧವನ್ನು ಯಾವ ಉತ್ಪನ್ನದ ಸಂಬಂಧವಾಗಿ ಮಾಡಲಾಗಿತ್ತೋ ಆ ಉತ್ಪನ್ನದ ವಿಲೆ

67. ಅಪರಾಧಿ ಯಾರೆಂದು ತಿಳಿಯದ ಅಥವಾ ಪತ್ತೆಯಾಗದ ಸಂಧರ್ಭದಲ್ಲಿ ಅನುಸರಿಸತಕ್ಕ ಪ್ರಕ್ರಿಯೆ

68. 62ನೇ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಿಕೊಳ್ಳಲಾದ ನಾಶ ಹೊಂದುವ ಸ್ವತ್ತಿನ ಬಗ್ಗೆ ಅನುಸರಿಸತಕ್ಕ ಪ್ರಕ್ರಿಯೆ

69. 65,66 ಮತ್ತು 67ನೇ ಪ್ರಕರಣದ ಅಡಿಯಲ್ಲಿನ ಆದೇಶಗಳ ಬಗ್ಗೆ ಅಪೀಲು

70. ಮುಟ್ಟುಗೋಲಾದ ಸ್ವತ್ತು ರಾಜ್ಯ ಸರ್ಕಾರದಲ್ಲಿ ನಿಹಿತವಾಗುವುದು

71. ಜಪ್ತಿ ಮಾಡಲಾದ ಸ್ವತ್ತನ್ನು ಬಿಡುಗಡೆ ಮಾಡಲು ಅಧಿಕಾರದ ಉಳಿಸುವಿಕೆ

71ಎ. ಕೆಲವು ಸಂದರ್ಭಗಳಲ್ಲಿ ಅರಣ್ಯ ಅಧಿಕಾರಿಯಿಂದ ಮುಟ್ಟುಗೋಲು

71ಬಿ. 71ಎ ಪ್ರಕರಣದ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಮೊದಲು - ಕಾರಣ ತೋರಿಸಲು ಕೇಳಿ ನೋಟೀಸು ನೀಡುವುದು

71ಸಿ. ಪರಿಷ್ಕರಣೆ

71ಡಿ. ಅಪೀಲು

71ಇ. ಮುಟ್ಟುಗೋಲಿನ ಐತೀರ್ಪು ಇತರ ಶಿಕ್ಷೆಗಳೊಂದಿಗೆ ಹಸ್ತಕ್ಷೇಪ ಮಾಡಕೂಡದು

71ಎಫ್. ಮುಟ್ಟುಗೋಲಾದ ಸ್ವತ್ತು ಸರ್ಕಾರದಲ್ಲಿ ಯಾವಾಗ ನಿಹಿತವಾಗುತ್ತದೆ

71ಜಿ. ಕೆಲವು ಪ್ರಕರಣಗಳಲ್ಲಿ ಅಧಿಕಾರ ವ್ಯಾಪ್ತಿಯ ಪ್ರತಿಷೇಧ

72. ದೋಷಪೂರಿತ ಜಪ್ತಿಗಾಗಿ ದಂಡನೆ

73. ಮರಗಳ ಅಥವಾ ಚೌಬೀನೆಯ ಮೇಲಿನ ಗುರುತುಗಳನ್ನು ಖೋಟಾಗೊಳಿಸುವ ಅಥವಾ ವಿರೂಪಗೊಳಿಸಿದಕ್ಕಾಗಿ ಮತ್ತು ಮೇರೆ ಗುರುತುಗಳನ್ನು ಬದಲಾಯಿಸಿದಕ್ಕಾಗಿ ದಂಡ

74. ವಾರೆಂಟು ಇಲ್ಲದೆ ದಸ್ತಗಿರಿ ಮಾಡುವ ಅಧಿಕಾರ

| | |
|---|---|
| 75. | ದಸ್ತಗಿರಿಯಾದ ವ್ಯಕ್ತಿಯನ್ನು ಮುಚ್ಚಳಿಕೆ ಆಧಾರದ ಮೇಲೆ ಬಿಡುಗಡೆ ಮಾಡುವ ಅಧಿಕಾರ |
| 76. | ಅಪರಾಧ ಮಾಡುವುದನ್ನು ತಡೆಯಲು ಅಧಿಕಾರ |
| 76ಎ. | ಅಪರಾಧಗಳು ನಡೆಯುವುದನ್ನು ತಡೆಯುವುದು ಇತ್ಯಾದಿ |
| 77. | ಅಪರಾಧಗಳನ್ನು ಕ್ಷಿಪ್ರ ರೀತಿಯಲ್ಲಿ ವಿಚಾರಿಸಲು ಅಧಿಕಾರ |
| 78. | ಇತರ ಕಾನೂನುಗಳ ಪ್ರವರ್ತನೆಗೆ ಪ್ರತಿಬಂಧವಿಲ್ಲ |
| 79. | ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಅಧಿಕಾರ |
| 80. | ಅರಣ್ಯ ಉತ್ಪನ್ನವು ಸರ್ಕಾರಕ್ಕೆ ಸೇರಿದೆ ಎಂಬ ಪೂರ್ವಭಾವನೆ |
| 81. | ಅಪರಾಧ ಮಾಡಿರುವುದರಿಂದ ಉಂಟಾದ ನಷ್ಟಕ್ಕಾಗಿ ಪರಿಹಾರ |
| 82. | ಗುತ್ತಿಗೆಗಳ ಮುಟ್ಟುಗೋಲು |
| 82ಎ. | ನೌಕರರು ಮಾಡಿದ ಕೃತ್ಯಗಳಿಗೆ ಲೈಸೆನ್ಸುದಾರನ ಕ್ರಿಮಿನಲ್ ಬಾಧ್ಯತೆಗಳು |
| 82ಬಿ. | ಕಂಪನಿಗಳಿಂದ ಅಪರಾಧಗಳು ಇತ್ಯಾದಿ |

## ಅಧ್ಯಾಯ X

## ಗಂಧದ ಮರಕ್ಕೆ ಸಂಬಂಧಿಸಿದ ಉಪಬಂಧಗಳು

| | |
|---|---|
| 83. | ಗಂಧದ ಮರಗಳಿಗೆ ಹಕ್ಕುಳ್ಳ ಕೆಲವು ವ್ಯಕ್ತಿಗಳ ಹಕ್ಕುಗಳು |
| 84. | ಗಂಧದ ಮರದ ಬಗ್ಗೆ ಪೂರ್ವ ಭಾವನೆ |
| 85. | ಗಂಧದ ಮರಗಳು ಇತ್ಯಾದಿಗಳನ್ನು ಕಾಪಾಡುವುದು ಭೂಮಿಯ ಅಧಿಭೋಗದಾರರ ಮತ್ತು ಹಿಡುವಳಿದಾರರ ಜವಬ್ದಾರಿಯಾಗಿರತಕ್ಕದ್ದು |
| 86. | ಗಂಧದ ಮರ, ಸಂಬಂಧಿಸಿದ ಅಪರಾಧಕ್ಕೆ ದಂಡನೆ |
| 87. | ಗಂಧದ ಮರದ ಅಥವಾ ಗಂಧದೆಣ್ಣೆಯ ಮಾರಾಟ ಮತ್ತು ತಯಾರಿಕೆಯ ನಿಯಂತ್ರಣ |

## ಅಧ್ಯಾಯ XI

## ಕಾಚುವಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು

| | |
|---|---|
| 88. | ಪರಿಭಾಷೆಗಳು |
| 89. | ಅನುಮತಿ ಇಲ್ಲದ ಕಾಚು ಮರಗಳನ್ನು ಕೆಡವುವುದು, ಇತ್ಯಾದಿಗಳ ನಿಷೇಧ |
| 90. | ಅರಣ್ಯ ಅಥವಾ ಕಂದಾಯ ಇಲಾಖೆಯಿಂದ ಅಥವಾ ಯಾರೇ ವ್ಯಕ್ತಿಯಿಂದ ಕಾಚು ಮರಗಳ ಕೆಡವುವಿಕೆ, ಪರಿವರ್ತಿಸುವಿಕೆ ಅಥವಾ ಸಾಗಿಸುವಿಕೆ |

91. ಕಾಚು ಮರಗಳನ್ನು ಕಡವಲು ರಹದಾರಿಗಾಗಿ ಅರ್ಜಿ ಸಲ್ಲಿಸುವುದು

92. ರಹದಾರಿಯನ್ನು ಪಡೆಯದ ಕಾಚು ಮರಗಳನ್ನು ಅಥವಾ ಚೌಬೀನೆಯನ್ನು ಸಾಗಿಸುವುದು - ಇತ್ಯಾದಿಗಳ ನಿಷೇಧ

93. ರಹದಾರಿ ಇಲ್ಲದೆ ಕಾಚಿನ ಕೊಳ್ಳುವಿಕೆ ಅಥವಾ ಸಾಗಾಣಿಕೆ ನಿಷೇಧ

94. ನಿರ್ದಿಷ್ಟ ಸ್ಥಳಗಳಲ್ಲಿ ಕಾಚಿನ ತಯಾರಿಕೆಯನ್ನು ಮಾಡುವುದು

95. ಲೆಕ್ಕಪತ್ರಗಳ ನಿರ್ವಹಣೆ

96. ಮುಟ್ಟುಗೋಲು ಆಗಬಹುದಾದ ಸ್ವತ್ತನ್ನು ಶೋಧಿಸುವ ಮತ್ತು ವಶಪಡಿಸಿಕೊಳ್ಳುವ ಬಗ್ಗೆ ಕಂದಾಯ, ಅರಣ್ಯ ಮತ್ತು ಪೊಲೀಸ್ ಅಧಿಕಾರಿಗಳ ಅಧಿಕಾರ

97. ನಿಯಮಗಳ ರಚನಾಧಿಕಾರ

98. ದಂಡ

## ಅಧ್ಯಾಯ XIಎ

## ಅರಣ್ಯಾಭಿವೃದ್ಧಿ ಶುಲ್ಕ

98ಎ. ಅರಣ್ಯ ಅಭಿವೃದ್ಧಿ ಶುಲ್ಕವನ್ನು ವಿಧಿಸುವುದು

98ಬಿ. ಅರಣ್ಯ ಅಭಿವೃದ್ಧಿ ನಿಧಿ

98ಸಿ. ಅರಣ್ಯ ಅಭಿವೃದ್ಧಿ ಶುಲ್ಕವನ್ನು ವಿನಾಯಿತಿಗೊಳಿಸಲು ಅಥವಾ ಇಳಿಸಲು ರಾಜ್ಯ ಸರ್ಕಾರಕ್ಕಿರುವ ಅಧಿಕಾರ

## ಅಧ್ಯಾಯ XII

## ಸಂಕೀರ್ಣ

99. ರಾಜ್ಯ ಸರ್ಕಾರವು ಅರಣ್ಯ ಅಧಿಕಾರಿಗಳಲ್ಲಿ ಕೆಲವು ಅಧಿಕಾರಗಳನ್ನು ನಿಹಿತಗೊಳಿಸಬಹುದು

100. ಇನಾಮು ಭೂಮಿಗಳಿಂದ ಅರಣ್ಯೋತ್ಪನ್ನವನ್ನು ಸಾಗಿಸುವುದು

101. ಮೀಸಲು ಮರಗಳ ಮೇಲೆ ನಿಯಂತ್ರಣ

101ಎ. ಸರ್ಕಾರಿ ಪಾಲು ತೆರುವಳಿ (Seigniorage) ದರದ ಮೇಲೆ ಅರಣ್ಯ ಉತ್ಪನ್ನದ ಮಂಜೂರು

101ಬಿ. ರಾಜ್ಯ ಸರ್ಕಾರದ ಕರಾರಿನಂತೆ ಅರಣ್ಯ ಉತ್ಪನ್ನದ ಸರಬರಾಜು

102. ನಿಯಮಗಳನ್ನು ರಚಿಸಲು ಸಾಮಾನ್ಯ ಅಧಿಕಾರಗಳು

103. ನಿಯಮಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು

104. ಅಧಿನಿಯಮದ ಅಥವಾ ನಿಯಮಗಳ ಉಲ್ಲಂಘನೆಗಾಗಿ ದಂಡನೆಗಳು

104ಎ. ಕರೀಮರ ಅಥವಾ ಬೀಟೆ ಮರಗಳ ಮತ್ತು ಅದರ ಚೌಬೀನೆಯ ಮಾರಾಟ ಮತ್ತು ಸಾಗಣೆ ಮೇಲಣ ನಿರ್ಬಂಧ

104ಬಿ. ಕೆಲವು ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು

104ಸಿ. ದುಷ್ಪ್ರೇರಣೆ

104ಡಿ. ಜಾಮೀನು ಕುರಿತ ವಿಶೇಷ ಉಪಬಂಧಗಳು

104ಇ. ಬಿಟ್ಟುಬಿಡಲಾಗಿದೆ

104ಎಫ್. ಪರಿವೀಕ್ಷಣೆಯ ಮೇಲೆ ವ್ಯಕ್ತಿಗಳನ್ನು ಬಿಡುಗಡೆ ಮಾಡಕೂಡದು

104ಜಿ. ಕೆಲವೊಂದು ಅಪರಾಧಗಳಿಗೆ ಅಪರಾಧ ನಿರ್ಣಿತ ವ್ಯಕ್ತಿಗಳನ್ನು ಬೇರೆಡೆಗೆ ಕಳುಹಿಸುವುದು

105. ಅರಣ್ಯ ಅಧಿಕಾರಿಗಳಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ನೆರವಾಗಲು ವ್ಯಕ್ತಿಗಳ ಬದ್ಧತೆ

106. ರಾಜ್ಯ ಸರ್ಕಾರದ ಮತ್ತು ಇತರ ವ್ಯಕ್ತಿಗಳ ಸಂಯುಕ್ತ ಸ್ವತ್ತಾಗಿರುವ ಅರಣ್ಯಗಳ ಆಡಳಿತ ನಿರ್ವಹಣೆ

107. ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಕೆಲವು ಭೂಮಿಗಳಿಗೆ ಈ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಲು ರಾಜ್ಯ ಸರ್ಕಾರದ ಅಧಿಕಾರ

108. ಯಾವ ಸೇವೆ ಸಲ್ಲಿಸುವುದಕ್ಕಾಗಿ ಸರ್ಕಾರದ ಅರಣ್ಯ ಉತ್ಪನ್ನದಲ್ಲಿನ ಪಾಲನ್ನು ಅನುಭೋಗಿಸಲಾಗುತ್ತಿದೆಯೋ ಅದನ್ನು ನಿರ್ವಹಿಸಲು ತಪ್ಪುವಿಕೆ

109. ಸರ್ಕಾರಕ್ಕೆ ಬರಬೇಕಾದ ಹಣದ ವಸೂಲಿ

110. ಅಂಥ ಹಣಕ್ಕಾಗಿ ಅರಣ್ಯ ಉತ್ಪನ್ನದ ಮೇಲೆ ಹಕ್ಕು

111. ಈ ಅಧಿನಿಯಮದ ಅಡಿಯಲ್ಲಿ ಅಗತ್ಯವಿರುವ ಭೂಮಿಯು ಭೂ-ಆರ್ಜನೆ ಅಧಿನಿಯಮದ ಅಡಿಯಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಅವಶ್ಯವಿರುವ ಭೂಮಿಯೆಂದು ಭಾವಿಸುವುದು

112. ಮುಚ್ಚಳಿಕೆ ಅಡಿಯಲ್ಲಿ ಬರಬೇಕಾದ ದಂಡಗಳ ವಸೂಲಿ

113. ಅರಣ್ಯ ಅಧಿಕಾರಿಗಳನ್ನು ಸಾರ್ವಜನಿಕ ನೌಕರರೆಂದು ಭಾವಿಸುವುದು

114. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ರಕ್ಷಣೆ

114ಎ. ಕರ್ತವ್ಯವೆಂಬ ಸೋಗಿನಲ್ಲಿ ಮಾಡಲಾದ ಕೃತ್ಯಗಳ

ಸಂಬಂಧದಲ್ಲಿ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನನ್ನು ರಾಜ್ಯ ಸರ್ಕಾರದ ಮಂಜೂರಾತಿಯಿಲ್ಲದೇ ಪುರಸ್ಕರಿಸತಕ್ಕದ್ದಲ್ಲ

115. ಅರಣ್ಯ ಅಧಿಕಾರಿಯು ವ್ಯಾಪಾರ ಮಾಡಕೂಡದು

116. 1957ರ ಕೇಂದ್ರ ಅಧಿನಿಯಮ 67 ಪ್ರಭಾವವುಳ್ಳದ್ದಾಗಿರತಕ್ಕದ್ದು

117. ನಿರಸನ ಮತ್ತು ಉಳಿಸುವಿಕೆಗಳು

118. ತೊಂದರೆಗಳನ್ನು ನಿವಾರಿಸುವ ಅಧಿಕಾರ

*****

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**1964ರ ಅಧಿನಿಯಮ 5-** ಮೈಸೂರು ರಾಜ್ಯದ ಐದು ಸಂಯೋಜಿತ ಭಾಗಗಳಲ್ಲಿ ವಿವಿಧ ಅರಣ್ಯ ಕಾನೂನುಗಳು ಪ್ರಸ್ತುತ ಜಾರಿಯಲ್ಲಿವೆ. ವಿವಿಧ ಭಾಗಗಳಲ್ಲಿ ವಿವಿಧ ಕಾನೂನುಗಳನ್ನು ಜಾರಿಗೊಳಿಸುವುದು ಆಡಳಿತಾತ್ಮಕವಾಗಿ ಕಷ್ಟಕರ ಮತ್ತು ಅನಾನುಕೂಲವಾಗಿದ್ದು, ಪ್ರಸ್ತುತ ವಿಧೇಯಕವನ್ನು ರಾಜ್ಯಾದ್ಯಂತ ಅರಣ್ಯ ಕಾನೂನುಗಳಿಗೆ ಏಕರೂಪತೆಯನ್ನು ತರಲು ಸಿದ್ಧಪಡಿಸಿದೆ.

ವಿಧೇಯಕದಲ್ಲಿನ ಅತಿ ಪ್ರಮುಖವಾದ ಉಪಬಂಧಗಳು ಈ ಮುಂದಿನಂತಿದೆ:-

ಅರಣ್ಯಗಳು ಮತ್ತು ಭೂಮಿಗಳನ್ನು ಸರ್ಕಾರದ ಸ್ವತ್ತುಗಳನ್ನಾಗಿ ನಿಯಂತ್ರಿಸಲು **V**ನೇ ಅಧ್ಯಾಯದಲ್ಲಿ ಬಾಂಬೆ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಈಗ ಜಾರಿಯಲ್ಲಿರುವ ಉಪಬಂಧಗಳ ರೀತಿಯಲ್ಲಿ ಉಪಬಂಧವನ್ನು ಮಾಡಲಾಗಿದೆ. ಮುಂದಿನ ಪೀಳಿಗೆಯ ಪ್ರಯೋಜನಕ್ಕಾಗಿ ಸುಸ್ಥಿರ ಉತ್ಪತ್ತಿಗಳನ್ನು ಖಚಿತಪಡಿಸಿಕೊಳ್ಳುವ ಕುರಿತಲ್ಲದೆ, ತತ್ ಕ್ಷಣದ ಮತ್ತು ಭಾರಿ ಲಾಭಗಳನ್ನು ಮಾಡುವ ಏಕ ಮಾತ್ರ ಯೋಜನೆಯೊಂದಿಗೆ ಮರಗಳ ಬೆಳವಣಿಗೆ ಮತ್ತು ಅರಣ್ಯ ಉತ್ಪನ್ನವನ್ನು ಅಜಾಗರೂಕತೆಯಲ್ಲಿ ಬಳಸುವುದರಿಂದ ಖಾಸಗಿ ಮಾಲೀಕರನ್ನು ಪ್ರತಿಬಂಧಿಸುವ ಉದ್ದೇಶವಿದೆ. ಕೆಲವು ಸನ್ನಿವೇಶಗಳಲ್ಲಿ ಅರಣ್ಯಗಳ ವ್ಯವಸ್ಥಾಪನೆಯನ್ನು ಪರಿಭಾವಿಸುವ ಅಧಿಕಾರವಿರುತ್ತದೆ. **X**ನೇ ಅಧ್ಯಾಯದಲ್ಲಿ ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ ಯಾವುದೇ ಭೂಮಿಯಲ್ಲಿ ಬೆಳೆಯಬಹುದಾದ ಎಲ್ಲಾ ಗಂಧದ ಮರಗಳನ್ನು ಸರ್ಕಾರದ ಅನನ್ಯ ಸ್ವತ್ತು ಎಂಬುದಾಗಿ ಹಾಗೂ ಎಲ್ಲಾ ಗಂಧದ ಮರಗಳ ಬಳಕೆಯನ್ನು ಮಾಲೀಕನ ಪರವಾಗಿ ಅರಣ್ಯ ಇಲಾಖೆಯೇ ಪರಭಾರೆ ಮಾಡುವ ಹಕ್ಕುಗಳಿಗಾಗಿ ಉಪಬಂಧವನ್ನು ಮಾಡಲಾಗಿದೆ. ಈ ಉಪಬಂಧಗಳನ್ನು ಗಂಧದ ಕಳ್ಳಸಾಗಾಣಿಕೆಯನ್ನು ಪ್ರತಿಬಂಧಿಸಲು ಮಾಡಲಾಗಿದೆ. ಕಾಚು ಎಂಬ ಪ್ರಮುಖ ವಾಣಿಜ್ಯ ಉತ್ಪನ್ನಕ್ಕೆ ಸಂಬಂಧಪಟ್ಟಂತೆ **XI**ನೇ ಅಧ್ಯಾಯದಲ್ಲಿ ವಿಶೇಷ ಉಪಬಂಧಗಳನ್ನು ಮಾಡಲಾಗಿದೆ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ 384ನೇ ಪುಟದಲ್ಲಿ 1962ರ ಜುಲೈ 26ನೇ ದಿನಾಂಕದಂದು ಪ್ರಕಟಿಸಲಾಗಿದೆ).

II

**1974ರ ತಿದ್ದುಪಡಿ ಅಧಿನಿಯಮ 23-** ಅರಣ್ಯ ಉತ್ಪನ್ನಗಳ ಪರಿಭಾಷೆಯೊಳಗೆ ರಾಮಪತ್ರ ಮತ್ತು ಸೀಗೆಕಾಯಿಯನ್ನು ಸೇರಿಸಲು ಪ್ರಸ್ತಾಪಿಸಲಾಗಿದೆ.

ಸರ್ಕಾರಿ ಮರಗಳ ಕಳ್ಳತನ ಮತ್ತು ಅಕ್ರಮ ಕಟಾವಣೆಯನ್ನು ತಡೆಗಟ್ಟುವುದಕ್ಕಾಗಿ ಕೆಲವು ಅರಣ್ಯ ಅಪರಾಧಗಳನ್ನು ಸಂಜ್ಞೇಯವಾಗಿಸುವುದು ಮತ್ತು ದಂಡನೆಯನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಬೀಟೆ ಮರಕ್ಕೆ (ಕರಿಬೀಟೆ ಅಥವಾ ಕೆಚ್ಚು) ಸಂಬಂಧಿಸಿದ ಅಪರಾಧಗಳ ಕುರಿತಂತೆ ಪ್ರತ್ಯೇಕವಾದ ಉಪಬಂಧವನ್ನು ಮಾಡಲಾಗಿದೆ ಹಾಗೂ ಅಂಥ ಮರಗಳ ಕಟಾವಣೆ, ಮಾರಾಟ ಇತ್ಯಾದಿಗಳನ್ನು ನಿಯಮಗಳ ಮೂಲಕ ನಿಯಂತ್ರಿಸಲು ಅಧಿಕಾರವನ್ನು ತೆಗೆದುಕೊಳ್ಳಲಾಗಿದೆ.

ಕೆಲವು ನಿರ್ದಿಷ್ಟ ಸ್ಥಳೀಯ ಮಿತಿಗಳೊಳಗೆ ಮತ್ತು ರಾಜ್ಯದಾದ್ಯಂತವಲ್ಲದೆ ಸಾಮಿಲ್ಲುಗಳು ಇತ್ಯಾದಿಗಳ ಸ್ಥಾಪನೆಯನ್ನು ಪೂರ್ಣವಾಗಿ ಅಥವಾ ಷರತ್ತಿಗೊಳಪಟ್ಟು ನಿಷೇಧಿಸುವ ನಿಯಮಗಳ ರಚನೆಯನ್ನು 50 (2) (ಕೆ) ಪ್ರಕರಣವು ಅಧಿಕಾರ ನೀಡಿದೆ ಎಂಬುದನ್ನು ನ್ಯಾಯಾಲಯಗಳು ಅಭಿಪ್ರಾಯ ಪಟ್ಟಿವೆ. ಅಂಥ ನಿಯಮಗಳನ್ನು ಇಡೀ ಮೈಸೂರು ರಾಜ್ಯಕ್ಕೆ ಸಂಬಂಧಿಸಿದಂತೆ ರಚಿಸುವ ಅಧಿಕಾರವನ್ನು ನೀಡುವುದು ಅವಶ್ಯಕವೆಂದು ಪರಿಗಣಿಸಿದೆ.

ಅಸ್ತಿತ್ವದಲ್ಲಿರುವ ಗರಗಸಗುಂಡಿಗಳು ಮತ್ತು ಸಾಮಿಲ್ಲುಗಳನ್ನು ಮತ್ತು ಗರಗಸಗುಂಡಿ ಮತ್ತು ಸಾಮಿಲ್ಲುಗಳ ಲೈಸನ್ಸುಗಳಿಗೆ ಸಂಬಂಧಿಸಿದಂತೆ ಲೈಸನ್ಸು ಶುಲ್ಕ ವಿಧಿಸುವುದನ್ನು ನಿಯಂತ್ರಿಸಲು ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಿರುವುದಿಲ್ಲವೆಂದು ನ್ಯಾಯಾಲಯಗಳು ಅಭಿಪ್ರಾಯಪಟ್ಟಿವೆ. ಅಸ್ತಿತ್ವದಲ್ಲಿರುವ ಸಾಮಿಲ್ಲುಗಳು ಮತ್ತು ಗರಗಸಗುಂಡಿಗಳ ಕಾರ್ಯನಿರ್ವಹಿಸುವಿಕೆಯನ್ನು ನಿಯಂತ್ರಿಸುವುದು ಹಾಗೂ ಅಗತ್ಯ ಲೈಸನ್ಸು ಶುಲ್ಕವನ್ನು ವಿಧಿಸುವುದು ಅವಶ್ಯಕವೆಂದು ಪರಿಗಣಿಸಿದೆ.

ಸಂರಕ್ಷಿತ ಅರಣ್ಯವು ಸಂರಕ್ಷಿತ ಅರಣ್ಯವಾಗಿರುವುದು ನಿಂತು ಹೋಗುವುದನ್ನು ಘೋಷಿಸಿ 28ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮುನ್ನ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮೂಲಕ ಆ ಪರಿಣಾಮಕ್ಕಾಗಿ ಅಂಗೀಕರಿಸುವ ನಿರ್ಣಯವೊಂದನ್ನು ಪಡೆಯುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರ ಪುಟ ಸಂ:5ರಲ್ಲಿ ಸಂ 760ರಂತೆ 1973ರ ಸೆಪ್ಟೆಂಬರ್ 27ನೇ ದಿನಾಂಕದಂದು ಪ್ರಕಟಿಸಲಾಗಿದೆ).

**III**

**1976ರ ತಿದ್ದುಪಡಿ ಅಧಿನಿಯಮ 15-** ರಾಜ್ಯ ಸರ್ಕಾರವು ಮಾರಾಟ ಅಥವಾ ಅನ್ಯಥಾ ಮೂಲಕ ವಿಲೇವಾರಿಗೊಳಿಸಿದ ಅರಣ್ಯ ಉತ್ಪನ್ನದ ಸಂಬಂಧದಲ್ಲಿ ಪಾವತಿಸಿದ ಪ್ರತಿಫಲನ ಮೊತ್ತದ ಮೇಲೆ ಶೇಕಡ 5 ದರದಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆಯ ವಸೂಲಾತಿಯನ್ನು ಕರ್ನಾಟಕ ಅರಣ್ಯ (ತಿದ್ದುಪಡಿ) ಅಧ್ಯಾದೇಶ, 1975ನ್ನು 1975ರ ಡಿಸೆಂಬರ್ 24ರಂದು ಪ್ರಖ್ಯಾಪಿಸುವ ಹಾಗೂ ಅದೇ ದಿನಾಂಕದಿಂದ ಅದನ್ನು ಜಾರಿಗೆ ತರುವ ಮೂಲಕ ವಿಧಿಸಲಾಗಿದೆ. ಈ ಅಧ್ಯಾದೇಶದ ಮೂಲಕ ವಸೂಲು ಮಾಡಲಾದ ಮತ್ತು ಸಂಗ್ರಹಿಸಲಾದ ತೆರಿಗೆಯನ್ನು ಮೊದಲ ಬಾರಿಗೆ ರಾಜ್ಯ ಸಂಚಿತ ನಿಧಿಗೆ ಜಮೆ ಮಾಡಲಾಗುವುದು ಹಾಗೂ ತದನಂತರ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ಅದನ್ನು ವರ್ಗಾಯಿಸಲಾಗುವುದು. ಈ ನಿಧಿಯಲ್ಲಿ ಜಮೆಯಾಗುವ ಮೊತ್ತವನ್ನು ಅರಣ್ಯ ನೆಡುತೋಪುಗಳನ್ನು ಬೆಳೆಸಲು ಮತ್ತು ಇತರ ಪೂರಕ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುವುದು.

ನೆಡುತೋಪುಗಳನ್ನು ಬೆಳೆಸುವುದಕ್ಕಾಗಿ ಅರಣ್ಯ ಇಲಾಖೆಯ ಆಯವ್ಯಯದಲ್ಲಿ ಮಾಡಲಾದ ಉಪಬಂಧಗಳು ಸಾಕಾಗುವುದಿಲ್ಲ. ಸಧ್ಯದಲ್ಲಿ ಮರಮುಟ್ಟು, ಸೌದೆ ಮತ್ತು ಅರಣ್ಯ ಆಧಾರಿತ ಕೈಗಾರಿಕೆಗಳಿಗಾಗಿ ಕಚ್ಚಾವಸ್ತುಗಳ ತೀವ್ರ ಕೊರತೆಯಿರುವುದು. ಮುಂಬರುವ ಭವಿಷ್ಯತ್ತಿನಲ್ಲಿ ಮರಮುಟ್ಟು, ಉರುವಲಿಗಾಗಿ ಸೌದೆ ಮತ್ತು ಇತರ ಕೈಗಾರಿಕಾ ಕಚ್ಚಾ ವಸ್ತುಗಳನ್ನೊಳಗೊಂಡು ಅರಣ್ಯ ಕಚ್ಚಾ ವಸ್ತುಗಳ ಕ್ಷಾಮವುಂಟಾಗುವುದನ್ನು ನಿರೀಕ್ಷಿಸಲಾಗಿದೆ. ಆದ್ದರಿಂದ ಸುಸ್ಥಿರ ಇಳುವರಿ ಆಧಾರದ ಮೇಲೆ ಕಚ್ಚಾವಸ್ತುಗಳ ಲಭ್ಯತೆಯನ್ನು ಹೆಚ್ಚಿಸುವ ಸಲುವಾಗಿ ಹೆಚ್ಚು ತೀವ್ರತರವಾಗಿ ನೆಡುತೋಪುಗಳನ್ನು ಬೆಳೆಸಲು ಕಾಲಿಕ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆಯಿದೆ.

ಆದ್ದರಿಂದ ಅರಣ್ಯ ನೆಡುತೋಪುಗಳನ್ನು ಬೆಳೆಸುವುದಕ್ಕಾಗಿ ವಿಶಿಷ್ಟವಾಗಿ ಅರಣ್ಯ ಅಭಿವೃದ್ಧಿ ನಿಧಿಯನ್ನು ಸೃಜಿಸುವುದು ಅವಶ್ಯಕವಾಗಿದೆ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಪುಟ ಸಂ:45-46ರಲ್ಲಿ 1976ರ ಜನವರಿ 22ನೇ ದಿನಾಂಕದಂದು ಪ್ರಕಟಿಸಲಾಗಿದೆ).

**IV**

**1976ರ ತಿದ್ದುಪಡಿ ಅಧಿನಿಯಮ, 50-** ಅರಣ್ಯ ಉತ್ಪನ್ನದ ಕಳ್ಳಸಾಗಾಣಿಕೆಯನ್ನು ತೀವ್ರತರವಾಗಿ ನಿಯಂತ್ರಿಸಲು ಅರಣ್ಯ ಇಲಾಖೆಯು ಹಲವು ಕ್ರಮಗಳನ್ನು ಕೈಗೊಂಡಿದೆ. ಅರಣ್ಯ ಅಪರಾಧಗಳನ್ನು ಒಳಗೊಳ್ಳುವ ದಂಡನಾ ಮಿತಿಗಳನ್ನು ಹೆಚ್ಚಿಸಿ ಅರಣ್ಯ ಅಧಿನಿಯಮವನ್ನು ಸಹ ತಿದ್ದುಪಡಿ ಮಾಡಲಾಗುವುದು. ಈ ಕ್ರಮಗಳ ಹೊರತಾಗಿ ಅರಣ್ಯ

ಉತ್ಪನ್ನದ ಕೆಲವು ವಸ್ತುಗಳಾದ ಬೀಟೆ ಮರ, ಗಂಧದ ಮರ, ಆನೆ ದಂತ ಇತ್ಯಾದಿಗಳ ಮೌಲ್ಯವು ಮಿತಿಮೀರಿ ಹೆಚ್ಚಾಗಿರುವ ಕಾರಣ ಕಳ್ಳಸಾಗಾಣಿಕೆಯಲ್ಲಿ ಇನ್ನೂ ಉಳಿದಿದೆ. ಅಂಥ ಅಪರಾಧಗಳನ್ನು ಎಸಗುವಾಗ ಬಳಸಿದ ವಾಹನಗಳು, ಉಪಕರಣಗಳು ಇತ್ಯಾದಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಉಪಬಂಧವು ಅರಣ್ಯ ಅಧಿನಿಯಮದಲ್ಲಿದೆ ಆದರೆ ತದನಂತರ ಪ್ರಕರಣವನ್ನು ಅರಣ್ಯ ಅಧಿನಿಯಮದ ಸಾಮಾನ್ಯ ಉಪಬಂಧಗಳ ಅಡಿಯಲ್ಲಿ ಕೈಗೊಳ್ಳಲಾಗುತ್ತದೆ. ಅರಣ್ಯ ಅಪರಾಧ ಪ್ರಕರಣಗಳಲ್ಲಿ ತಪ್ಪದ ಗೊಂದಲಗಳ ಪ್ರಯೋಜನದಿಂದಾಗಿ ಅಥವಾ ಸೂಕ್ತ ಕಾನೂನು ತಜ್ಞತೆಯ ಕೊರತೆಯಿಂದಾಗಿ ವಾಹನಗಳನ್ನು ಬಿಡುಗಡೆ ಮಾಡಲು ಆದೇಶಿಸುವುದು ಅನುಭವಕ್ಕೆ ಬಂದಿದೆ. ಸಹಾಯಕ ಅರಣ್ಯ ಸಂರಕ್ಷಕ ಮತ್ತು ಅವರ ಮೇಲಿನ ದರ್ಜೆಯ ಅರಣ್ಯ ಅಧಿಕಾರಿಗಳಿಗೆ, ನ್ಯಾಯಿಕ ಸ್ವರೂಪದ ಪರಿಪಾಠಗಳನ್ನು ಪಾಲಿಸಿದ ತರುವಾಯ ಕಳ್ಳಸಾಗಾಣಿಕೆಯಲ್ಲಿ ತೊಡಗಿದ ವಾಹನಗಳನ್ನು ಮುಟ್ಟುಗೋಲು ಮಾಡುವುದಕ್ಕಾಗಿ ಆದೇಶಿಸುವ ಅಧಿಕಾರವನ್ನು ನೀಡಲು ಈಗ ಪ್ರಸ್ತಾಪಿಸಲಾಗಿದೆ. ಅಂತಿಮ ಮೇಲ್ಮನವಿ ಪ್ರಾಧಿಕಾರವಾಗಿ ಆ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರನ್ನು ಪ್ರಸ್ತಾವಿಸಲಾಗಿದೆ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ ಸಂ:2847ರಂತೆ ಪುಟ-5ರಲ್ಲಿ 1976ರ ಮೇ 25ನೇ ದಿನಾಂಕದಂದು ಪ್ರಕಟಿಸಲಾಗಿದೆ).

## V

**1978ರ ತಿದ್ದುಪಡಿ ಅಧಿನಿಯಮ, 15-** ಅರಣ್ಯ ಪ್ರದೇಶಗಳಲ್ಲಿ ಭಾರಿ ಸಂಖ್ಯೆಯ ಒತ್ತುವರಿ ಪ್ರಕರಣಗಳಿವೆ. ಅರಣ್ಯಗಳ ಆಂತರಿಕ ಭಾಗಗಳಲ್ಲಿನ ಒತ್ತುವರಿಗಳನ್ನು ತೆರವುಗೊಳಿಸಿ ಮತ್ತು ಒತ್ತುವರಿದಾರರನ್ನು ಹೊರ ಹಾಕಲು ನಿರ್ಧರಿಸಲಾಗಿದೆ. ಆದರೆ, ಅರಣ್ಯದ ಅಂಚಿನಲ್ಲಿ ಅಥವಾ ಅರಣ್ಯಗಳ "ಡಿ" ಗೆರೆಯ ಸಮೀಪದ ಮತ್ತು ಮೌಲ್ಯಯುತ ಮರ ಬೆಳವಣಿಗೆಯಿಲ್ಲದ ಕುರುಚಲು ಅರಣ್ಯ ಪ್ರದೇಶಗಳಲ್ಲಿ ಒತ್ತುವರಿಯಡಿಯಲ್ಲಿನ ಭೂಮಿಗಳನ್ನು ಒತ್ತುವರಿಗೆ ಅರ್ಹವಿರುವ ಪ್ರಕರಣಗಳಲ್ಲಿ ಸಕ್ರಮಾತಿಗಾಗಿ ಕಂದಾಯ ಇಲಾಖೆಗೆ ಅಥವಾ ಕಡಿದಾದ ಅರಣ್ಯ ಪ್ರದೇಶಗಳಿಂದ ಹೊರ ಹಾಕುವ ಒತ್ತುವರಿದಾರರ ಪುನರ್ವ್ಯವಸ್ಥೆಗಾಗಿ ವರ್ಗಾಯಿಸಬೇಕಾಗಿದೆ. ಅಂಥ ಪ್ರಕರಣಗಳಲ್ಲಿ ವಿಧಾನಮಂಡಲದ ಸದನಗಳ ಅನುಮೋದನೆಯನ್ನು ಪಡೆಯುವ ಅಗತ್ಯವಿಲ್ಲವೆಂದು ಪರಿಗಣಿಸಿದೆ.

ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಹಾಗೂ ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು. ಇದು ಸದರಿ ಅಧ್ಯಾದೇಶದ ಬದಲಿನ ವಿಧೇಯಕವಾಗಿದೆ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ ಸಂ:1001ರಂತೆ ಪುಟ ಸಂ:3ರಲ್ಲಿ 1978ರ ಜೂನ್ 30ನೇ ದಿನಾಂಕದಂದು ಪ್ರಕಟಿಸಲಾಗಿದೆ).

## VI

**1980ರ ತಿದ್ದುಪಡಿ ಅಧಿನಿಯಮ 14.-** ರಾಜ್ಯದ ಆದಾಯವನ್ನು ಹೆಚ್ಚಿಸಲು ಹಾಗೂ ತೆರಿಗೆ ನಿರ್ಧರಣಾ ರಚನೆಯನ್ನು ಮತ್ತಷ್ಟು ಸುವ್ಯವಸ್ಥಿತಗೊಳಿಸಲು ಕರ್ನಾಟಕ ಮನೋರಂಜನೆಗಳ ತೆರಿಗೆ ಅಧಿನಿಯಮ, 1958, ಕರ್ನಾಟಕ ಅರಣ್ಯ ಅಧಿನಿಯಮ, 1963 ಮತ್ತು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ಕ್ಕೆ ಕೆಲವು ತಿದ್ದುಪಡಿಗಳನ್ನು ತರಲು ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ ಸಂ:192ರಂತೆ ಪುಟ ಸಂ:5ರಲ್ಲಿ 1980ರ ಮಾರ್ಚ್ 14ನೇ ದಿನಾಂಕದಂದು ಪ್ರಕಟಿಸಲಾಗಿದೆ).

## VII

**1981ರ ತಿದ್ದುಪಡಿ ಅಧಿನಿಯಮ 1.-** ಕರ್ನಾಟಕ ಅರಣ್ಯ ಅಧಿನಿಯಮದ 71-ಎ ಪ್ರಕರಣದ ಅಸ್ತಿತ್ವದಲ್ಲಿರುವ ಉಪಬಂಧಗಳು ಮುಟ್ಟುಗೋಲು ಆದೇಶವನ್ನು ಮಾಡುವ ಅಧಿಕಾರಗಳನ್ನು ಅದರಲ್ಲಿ ಉಲ್ಲೇಖಿಸಿರುವ ಪ್ರಾಧಿಕೃತ ಅರಣ್ಯ ಅಧಿಕಾರಿಗಳಿಗೆ ಪ್ರದತ್ತಗೊಳಿಸಿದೆ. ಇದು ಪ್ರಾಧಿಕೃತ ಅಧಿಕಾರಿಯು ಬಾಕಿಯಿರುವ ಮುಟ್ಟುಗೋಲು ಆದೇಶಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಮುಟ್ಟುಗೋಲು ವಾಹನದ ಬಿಡುಗಡೆಯ ಆದೇಶವನ್ನು ಮಾಡಲು ಮ್ಯಾಜಿಸ್ಟ್ರೇಟ್‌ರಿಗೆ (ನ್ಯಾಯಾಧೀಶರಿಗೆ) ಅಧಿಕಾರ ವ್ಯಾಪ್ತಿಯನ್ನು ತೆಗೆದು ಹಾಕಿದಂತಾಗುವುದಿಲ್ಲ. ಸಿಂಧುವಾದ ಕಾರಣಗಳಿಗಾಗಿ ಗಂಧದ ಅಪರಾಧಗಳ ಎಸಗುವಿಕೆಯಲ್ಲಿ ಬಳಸಿದ ವಾಹನಗಳ ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ಪ್ರತಿರೋಧ ಪರಿಣಾಮವನ್ನು ತರುವುದು 71-ಎ ಪ್ರಕರಣದ ಉದ್ದೇಶವಾಗಿರುತ್ತದೆ. ಮ್ಯಾಜಿಸ್ಟ್ರೇಟರು ಮುಟ್ಟುಗೋಲು ಹಾಕಿಕೊಂಡ ವಾಹನದ ಮತ್ತು ಅರ್ಹತೆಯ ಮೇಲೆ ಪ್ರಾಧಿಕೃತ ಅಧಿಕಾರಿಯ ಬಾಕಿ ಆದೇಶಗಳು ಅಥವಾ ಮುಟ್ಟುಗೋಲು

ಬಿಡುಗಡೆಗೊಳಿಸುವುದನ್ನು ಆಯ್ಕೆ ಮಾಡಿದಾಗ ಮ್ಯಾಜಿಸ್ಟ್ರೇಟರ ಏಕಕಾಲೀನ ಅಧಿಕಾರವ್ಯಾಪ್ತಿಯು 71-ಎ ಪ್ರಕರಣದ ಉದ್ದೇಶವನ್ನು ವಿಫಲಗೊಳಿಸುತ್ತದೆ.

ಬಂಧನಕ್ಕೊಳಗಾದ ವ್ಯಕ್ತಿಯು ಜಾಮೀನಿನ ಮೇಲೆ ಪರಿಹಾರವನ್ನು ಕೋರಬಹುದಾದ ಕೆಲವು ಸಂದರ್ಭಗಳು ಉದ್ಭವಿಸಬಹುದಾದುದ್ದರಿಂದ ಮತ್ತು, ಇದು ಪ್ರಕರಣವನ್ನು ಮುಂದುವರಿಸಲು ಅಸಾಧ್ಯವಾಗಿಸಬಹುದಾದ್ದರಿಂದ, ಗಂಧದ ಮರದ ಅಪರಾಧಗಳನ್ನು ಜಾಮೀನುರಹಿತ ವಾಗಿಸುವುದು ಕೂಡ ಅವಶ್ಯವೆಂದು ಪರಿಗಣಿಸಲಾಗಿದೆ. ಮತ್ತು ಗಂಧದ ಮರದ ಅಪರಾಧಗಳನ್ನು ದುಷ್ಪ್ರೇರಿಸುವವರನ್ನು ಕೂಡ ಈ ಅಧಿನಿಯಮದ ವ್ಯಾಪ್ತಿಯ ಅಡಿಯಲ್ಲಿ ತರುವುದು ಅವಶ್ಯವೆಂದು ಕಂಡುಬಂದಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು ನಿಗದಿಪಡಿಸಿದ ಸರ್ಕಾರಿ ತೀರುವಳಿ ಪಾಲು (seigniorage) ದರಕ್ಕೆ ಕಾನೂನು ಬೆಂಬಲವನ್ನು ನೀಡುವುದು ಭವಿಷ್ಯದಲ್ಲಿ ಅಂಥನಿಗದಿಯನ್ನು ಮಾಡಲು ಆತನನ್ನು ಪ್ರಾಧೀಕರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ ಸಂ:225ರಂತೆ ಪುಟ ಸಂ:6ರಲ್ಲಿ 1979ರ ಮಾರ್ಚ್ 20ರಂದು ಪ್ರಕಟಿಸಲಾಗಿದೆ).

**VIII**

**1983ರ ತಿದ್ದುಪಡಿ ಅಧಿನಿಯಮ 7.-** 1983-84ರ ಆಯವ್ಯಯ ಅಂದಾಜುಗಳನ್ನು ಮಂಡಿಸುವಾಗ ತಮ್ಮ ಭಾಷಣದಲ್ಲಿ ಮುಖ್ಯಮಂತ್ರಿಯವರು, ರಾಜ್ಯ ಸರ್ಕಾರವು ವಿಲೇವಾರಿ ಮಾಡುವ ಅರಣ್ಯ ಉತ್ಪನ್ನದ ಕೆಲವು ವಸ್ತುಗಳ ಮೇಲೆ ವಿಧಿಸಬಹುದಾದ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಮಾರಾಟದ ಪ್ರತಿಫಲನದ ಮೇಲೆ ಶೇಕಡ ಹನ್ನೆರಡರ ದರದಲ್ಲಿ ಹೆಚ್ಚಿಸುವುದಾಗಿ ಸೂಚಿಸಿರುತ್ತಾರೆ. ಪ್ರಸ್ತುತ ವಿಧೇಯಕವು ಸದರಿ ಪ್ರಸ್ತಾವನೆಯನ್ನು ಜಾರಿಗೊಳಿಸಲು ಉದ್ದೇಶಿಸಿದೆ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ ಸಂ:206ರಂತೆ ಪುಟ ಸಂ:4ರಲ್ಲಿ 1983ರ ಮಾರ್ಚ್ 29ರಂದು ಪ್ರಕಟಿಸಲಾಗಿದೆ).

**IX**

**1984ರ ತಿದ್ದುಪಡಿ ಅಧಿನಿಯಮ, 11-** ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 1980ಕ್ಕೆ ಅದರ ಒಪ್ಪಿಗೆಯನ್ನು ನೀಡುವಾಗ ಭಾರತ ಸರ್ಕಾರವು ಕಾರಾವಾಸ ಮತ್ತು ಜುಲ್ಮಾನೆಯನ್ನು ಕಡಿಮೆಗೊಳಿಸಿ ತೀರ್ಪು ವಿಧಿಸಲು ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡುವುದಕ್ಕಾಗಿ ಕರ್ನಾಟಕ ಅರಣ್ಯ ಅಧಿನಿಯಮದ 68, 86, 87ನೇ ಪ್ರಕರಣಗಳಿಗೆ ತಿದ್ದುಪಡಿಗಳನ್ನು ಸೂಚಿಸಿದೆ.

ಕೆಲವು ಕೈಗಾರಿಕೆಗಳು ಅರಣ್ಯ ಉತ್ಪನ್ನಗಳ ಸರಬರಾಜಿಗಾಗಿ 5 ರಿಂದ 30 ವರ್ಷಗಳ ವ್ಯಾಪ್ತಿಯವರೆಗೆ ಕರಾರುಗಳನ್ನು ಮಾಡಿಕೊಂಡಿವೆ ಮತ್ತು ಅಂಥ ದೀರ್ಘ ಅವಧಿಗಳಿಗಾಗಿ ಕಚ್ಚಾ ವಸ್ತುಗಳ ಲಭ್ಯತೆಯ ಹಂತವನ್ನು ಪೂರ್ಣವಾಗಿ ಅಳೆಯದೆ ಹಾಗೂ ಕರಾರಿನ ನಿಬಂಧನೆಗಳ ಮಾರ್ಪಾಡಿಗಾಗಿ ಉಪಬಂಧವನ್ನು ಕಲ್ಪಿಸದೆ ಭರವಸೆಯ ಆಧಾರದ ಮೇಲೆ ಅರಣ್ಯ ಉತ್ಪನ್ನದ ಸರಬರಾಜಿಗಾಗಿ ಕೆಲವು ಕರಾರುಗಳನ್ನು ಮಾಡಿಕೊಳ್ಳಲಾಗಿದೆ. ಕೆಲವು ವಿಷಯಗಳಲ್ಲಿ ಅವುಗಳನ್ನು ಮಾರ್ಪಾಡು ಮಾಡಲು ಪ್ರಸ್ತಾವಿಸಿದೆ.

ಆ ಉದ್ದೇಶಗಳಿಗಾಗಿ ರಚಿಸಲಾದ ಅಧಿಕೃತ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ 1982ರ ಜೂನ್ 29ರಿಂದ ಜಾರಿಗೆ ಬರುವಂತೆ ಸರ್ಕಾರಿ ತೀರುವಳಿ ಪಾಲು (seigniorage) ದರಗಳನ್ನು ಪರಿಷ್ಕರಿಸಲಾಗಿದೆ. 1982ರ ಜೂನ್ 29ರಿಂದ ನಿಗದಿಪಡಿಸಿದ ದರಗಳು 1981ರ ಫೆಬ್ರುವರಿ 23ರಂದು ಜಾರಿಗೊಳಿಸಿದ ದರಗಳಿಗಿಂತ ಕಡಿಮೆ ಇದೆ. 1981ರ ಫೆಬ್ರುವರಿ 23ರಿಂದ 1982ರ ಜೂನ್ 29ರ ವರೆಗಿನ ಅವಧಿಗಾಗಿ ಮುಂಚೆ ಇದ್ದ ದರಗಳು 1982ರ ಜೂನ್ 29ರಿಂದ ಜಾರಿಗೆ ಬಂದ ದರಗಳಿಗಿಂತ ಹೆಚ್ಚಾಗಿದ್ದು, ಈ ವೈಪರೀತ್ಯವನ್ನು ಗಮನಿಸಿ 1982ರ ಜೂನ್ 29ರ ದರಗಳನ್ನು 1981ರ ಫೆಬ್ರುವರಿ 23ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನಿರ್ಧರಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ ಸಂ:98ರಂತೆ ಪುಟ ಸಂ:4ರಲ್ಲಿ 1984ರ ಫೆಬ್ರುವರಿ 5ರಂದು ಪ್ರಕಟಿಸಲಾಗಿದೆ).

X

**1989ರ ತಿದ್ದುಪಡಿ ಅಧಿನಿಯಮ 10.-** ಈ ಮುಂದಿನವುಗಳಿಗಾಗಿ,-

(i) ಕುಶಲಕರ್ಮಿಗಳಿಗೆ ಪರಿಹಾರವನ್ನು ಒದಗಿಸುವುದಕ್ಕೆ ಗಂಧದಮರ "ಪದಾವಳಿ"ಯ ಪರಿಭಾಷೆಯಲ್ಲಿ ಗಂಧದ ಮರದ ಕುಶಲವಸ್ತುಗಳನ್ನು ಸೇರಿಸಲು.

(ii) ಸಂರಕ್ಷಿತ ಅರಣ್ಯ ಮತ್ತು ಜಿಲ್ಲಾ ಅರಣ್ಯಗಳಲ್ಲಿ ಯಾವುದೇ ಉದ್ದೇಶಕ್ಕಾಗಿ ಭೂಮಿಯ ಅಧಿಭೋಗದಾರಿಕೆಯನ್ನು ನಿಷೇಧಿಸಲು.

(iii) ಅರಣ್ಯೀಕರಣದ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ವಹಿಸಿದ ಸಂರಕ್ಷಿತ ಅರಣ್ಯದಲ್ಲಿನ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನಪಡಿಸಿಕೊಳ್ಳುವುದಕ್ಕೆ ದಂಡವನ್ನು ಉಪಬಂಧಿಸಲು;

(iv) ಗಂಧದೆಣ್ಣೆಯ ಸ್ವಾಧೀನ ಮತ್ತು ಸಂಗ್ರಹಿಸಲೂ ಸಹ ಪರವಾನಗಿ ಪಡೆದುಕೊಳ್ಳುವುದನ್ನು ಕಡ್ಡಾಯಗೊಳಿಸಲು;

(v) ನಿಗಮದ ಮಾಲೀಕತ್ವದ ಅಥವಾ ನಿಯಂತ್ರಣದ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಸರ್ಕಾರವು ವಿಲೇವಾರಿಗೊಳಿಸಿದ ಅರಣ್ಯ ಉತ್ಪನ್ನದ ಮೇಲಿನ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಅಥವಾ ಹಣ ರವಾನೆ ಮಾಡುವುದಕ್ಕೆ ಉಪಬಂಧ ಕಲ್ಪಿಸಲು;

(vi) ಅರಣ್ಯ ಅಭಿವೃದ್ಧಿ ನಿಧಿಯಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಹೊರತುಪಡಿಸಿ ಕೆಲವು ಇತರ ಅಂಶಗಳನ್ನು ಸೇರಿಸಲು;

(vii) 1981ರ ಜನವರಿ 19ರಿಂದ 1983ರ ಆಗಸ್ಟ್ 31ರ ವರೆಗಿನ ಅವಧಿಗಾಗಿ ಮುರಿದ ತೊಗಟೆಗೆ ಸಂಬಂಧಿಸಿದಂತೆ ಸರ್ಕಾರಿ ತೀರುವಳಿ ಪಾಲಿನ (seigniorage) ಪಾವತಿಯನ್ನು ವಿನಾಯಿತಿಗೊಳಿಸಲು ಹಾಗೂ 1983ರ ಅಕ್ಟೋಬರ್ 1ರಿಂದ ಹತ್ತು ವರ್ಷಗಳ ಅವಧಿಯವರೆಗೆ ನ್ಯೂಸ್ ಪ್ರಿಂಟ್ ಉತ್ಪಾದನೆಗಾಗಿ ಪೂರೈಸುವ ನೀಲಗಿರಿ ಅಥವಾ ಬಿದಿರಿಗೆ ಸಂಬಂಧಪಟ್ಟಂತೆ ಸರ್ಕಾರಿ ತೀರುವಳಿ ಪಾಲಿನ ಮೌಲ್ಯವನ್ನು ಶೇಕಡ ಐವತ್ತರಷ್ಟು ಚಾರ್ಜು ಮಾಡಲು ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿ ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ

(ಕರ್ನಾಟಕ [ವಿಶೇಷ] ರಾಜ್ಯಪತ್ರದ ಭಾಗ IV-2ಎ ರಲ್ಲಿ ಸಂ:611ರಂತೆ ಪುಟ ಸಂ:7ರಲ್ಲಿ 1987ರ ಸೆಪ್ಟೆಂಬರ್ 11ರಂದು ಪ್ರಕಟಿಸಲಾಗಿದೆ).

## XI

**1998ರ ತಿದ್ದುಪಡಿ ಅಧಿನಿಯಮ 12.-** ಈ ಮುಂದಿನವುಗಳನ್ನು ಉಪಬಂಧಿಸುವುದಕ್ಕಾಗಿ ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 5) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ, ಎಂದರೆ:-

1) ಗಂಧದ ಮರದ ಪರಿಭಾಷೆಯಲ್ಲಿ ಗಂಧದೆಣ್ಣೆಯನ್ನು ಸೇರಿಸಲು;

2) ಗ್ರಾಮ ಅರಣ್ಯ ಸಮಿತಿಯನ್ನು ಪರಿಭಾಷಿಸಲು ಮತ್ತು ಅದರ ರಚನೆಗಾಗಿ ಉಪಬಂಧಿಸಲು;

3) ಸಾಮಿಲ್ಲುಗಳು ಇತ್ಯಾದಿಗಳಿಗಾಗಿ ಪರವಾನಗಿಯ ಮಂಜೂರು ಅಥವಾ ನವೀಕರಣಕ್ಕಾಗಿ ಶುಲ್ಕ ವಿಧಿಸುವುದನ್ನು ಉಪಬಂಧಿಸಲು;

4) 62ನೇ ಪ್ರಕರಣದ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡ ಸ್ವತ್ತನ್ನು ಬಿಡುಗಡೆಗೊಳಿಸುವ ಮೊದಲು ಅರಣ್ಯ ಅಧಿಕಾರಿಯು ಅಂದಾಜಿಸಿದ ಮೌಲ್ಯಕ್ಕೆ ಸಮನಾದ ಬ್ಯಾಂಕ್ ಗ್ಯಾರಂಟಿ ಹಾಜರುಪಡಿಸುವುದನ್ನು ಅಗತ್ಯಪಡಿಸಲು;

5) ಋಣ ವಿಮೋಚನಾ (composition) ಮೊತ್ತವನ್ನು ಐದು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳಿಗೆ ಹೆಚ್ಚಿಸಲು;

6) ಪರವಾನಗಿದಾರರ ನೌಕರರುಗಳ ಕೃತ್ಯಗಳಿಗಾಗಿ ದಂಡನೆಯನ್ನು ಉಪಬಂಧಿಸಲು;

ಹಾಗೂ ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ನ್ನು ಈ ಮುಂದಿನವುಗಳಿಗಾಗಿ ಉಪಬಂಧಿಸಲು,-

(i) ಸ್ವೀಕರಿಸಲಾದ ಮನವಿಯನ್ನು ಮೂರು ತಿಂಗಳುಗಳೊಳಗಾಗಿ ವಿಲೇವಾರಿ ಮಾಡಲು ವೃಕ್ಷ ಅಧಿಕಾರಿಗೆ ಅಗತ್ಯಪಡಿಸುವುದಕ್ಕೆ;

(ii) ಕೆಲವು ಸನ್ನಿವೇಶಗಳ ಅಡಿಯಲ್ಲಿ ಅನುಮತಿಯನ್ನು ರದ್ದುಪಡಿಸುವುದನ್ನು ಅಥವಾ ಅಮಾನತ್ತಿನಲ್ಲಿಡುವುದನ್ನು ಉಪಬಂಧಿಸುವುದಕ್ಕೆ;

(iii) ರಬ್ಬರ್ ಅಥವಾ ಚಹಾ ಕೃಷಿಯ ಬೇಸಾಯ ಅಥವಾ ವಿಸ್ತರಣೆಗಾಗಿ ಎಲ್ಲಾ ಮರಗಳನ್ನು ಕಡಿಯುವುದಾಗಿದ್ದರೆ, 8ನೇ ಪ್ರಕರಣದ ಅಡಿಯಲ್ಲಿ ಮರಗಳನ್ನು ಕಡಿಯಲು ಅನುಮತಿ ನೀಡುವುದನ್ನು ನಿಷೇಧಿಸುವುದಕ್ಕೆ;

ಆದ್ದರಿಂದ ಈ ವಿಧೇಯಕ.

[1997ರ ವಿಧಾನಪರಿಷತ್ತಿನ ವಿಧೇಯಕ ಸಂ:5ರಿಂದ ಪಡೆಯಲಾಗಿದೆ (ಕಡತ ಸಂ:ಸಂವ್ಯಶಾಇ 53 ಶಾಸನ 97)]

**XII**

**2000ರ ತಿದ್ದುಪಡಿ ಅಧಿನಿಯಮ 20.-** ಕರ್ನಾಟಕ ಅರಣ್ಯ ಅಧಿನಿಯಮ, 1963ಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 1999 ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸಿದೆ,-

(1) ದಂಡ ಪ್ರಕ್ರಿಯಾ ಸಂಹಿತೆ, 1973ರ ಅಡಿಯಲ್ಲಿ ತನಿಖೆಯನ್ನು ನಡೆಸುವ ವಿಷಯದಲ್ಲಿ ಪೊಲೀಸ್ ಠಾಣೆಯ ಪ್ರಭಾರೆಯಲ್ಲಿರುವ ಅಧಿಕಾರಿಗೆ ಪ್ರದತ್ತವಾದಂತಹ ಅದೇ ರೀತಿಯ ಅಧಿಕಾರಗಳನ್ನು ತನಿಖೆ ನಡೆಸುವ ಅರಣ್ಯಾಧಿಕಾರಿಗಳಿಗೆ ಕಲ್ಪಿಸಲು ಮತ್ತು ಅಂಥ ಅರಣ್ಯಾಧಿಕಾರಿಯ ವರದಿಯನ್ನು ಸದರಿ ಸಂಹಿತೆಯ 190ನೇ ಪ್ರಕರಣದ ಉದ್ದೇಶಕ್ಕಾಗಿನ ವರದಿಯಂತೆ ಪ್ರತಿಪಾದಿಸಲು ಉಪಬಂಧ ಕಲ್ಪಿಸಿದೆ;

(2) ಅರಣ್ಯ ಉತ್ಪನ್ನಕ್ಕೆ ಸಂಬಂಧಿಸಿದಂತೆ ಅರಣ್ಯಾಧಿಕಾರಿ ನೀಡುವ ಪ್ರಮಾಣ ಪತ್ರವನ್ನು ಸಾಕ್ಷ್ಯವಾಗಿರತಕ್ಕದ್ದೆಂದು ಉಪಬಂಧ ಕಲ್ಪಿಸಿದೆ;

(3) ಅಪರಾಧಗಳ ಎಸಗುವಿಕೆಯನ್ನು ತಡೆಗಟ್ಟಲು ಉಪಬಂಧ ಕಲ್ಪಿಸಿದೆ;

(4) ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆ, ರಾಯಧನ ಇತ್ಯಾದಿಗಳ ವಸೂಲಾತಿಗಾಗಿ ಅರಣ್ಯ ಸಂರಕ್ಷಕರಿಗೆ ಪ್ರಮಾಣಪತ್ರವನ್ನು ನೀಡಲು ಮತ್ತು ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಪ್ರತಿಪಾದಿಸಲು ಉಪಬಂಧ ಕಲ್ಪಿಸಿದೆ;

(5) ಅರಣ್ಯಾಧಿಕಾರಿಯು ಕರ್ತವ್ಯದ ರೀತಿಯ ಮೇರೆಗೆ ಮಾಡಿರುವ ಕಾರ್ಯಗಳ ಸಂಬಂಧದಲ್ಲಿ ದಾವೆ ಅಥವಾ ಅಭಿಯೋಜನೆಯನ್ನು ಹೂಡಲು ಮಂಜೂರಾತಿಯನ್ನು ಅಗತ್ಯಪಡಿಸುವುದಕ್ಕೆ ಉಪಬಂಧ ಕಲ್ಪಿಸಿದೆ;

ಮುಂದುವರೆದು, ದಂಡ ಪ್ರಕ್ರಿಯಾ ಸಂಹಿತೆ, 1973ರ ಅಡಿಯಲ್ಲಿ ತನಿಖೆಯನ್ನು ನಡೆಸುವ ವಿಷಯದಲ್ಲಿ ಪೊಲೀಸ್ ಠಾಣೆಯ ಪ್ರಭಾರೆಯಲ್ಲಿರುವ ಅಧಿಕಾರಿಗೆ ಪ್ರದತ್ತವಾದಂತಹ ರೀತಿಯ ಅಧಿಕಾರಗಳನ್ನು ತನಿಖೆ ನಡೆಸಲು ವೃಕ್ಷ ಅಧಿಕಾರಿಗಳಿಗೆ ಕಲ್ಪಿಸಲು ಮತ್ತು ಆತನ ವರದಿಯನ್ನು ಸದರಿ ಸಂಹಿತೆಯ 190ನೇ ಪ್ರಕರಣದ ಉದ್ದೇಶಕ್ಕಾಗಿನ ವರದಿಯಂತೆ ಪ್ರತಿಪಾದಿಸಲು ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ಕ್ಕೆ ತಿದ್ದುಪಡಿ ತರಲು ಪ್ರಸ್ತಾವಿಸಿದೆ.

ಆದ್ದರಿಂದ ಈ ವಿಧೇಯಕ

(1999ರ ವಿಧಾನಸಭೆ ವಿಧೇಯಕ ಸಂ:13ರಿಂದ ಪಡೆಯಲಾಗಿದೆ).

## XIII

**2001ರ ತಿದ್ದುಪಡಿ ಅಧಿನಿಯಮ 20.-** 2001-2002ರ ಆಯವ್ಯಯ ಭಾಷಣದಲ್ಲಿ, ಗಂಧದ ಮರಗಳನ್ನು ಅವರುಗಳ ಭೂಮಿಯಲ್ಲಿ ಬೆಳೆಸಲು ಸಾರ್ವಜನಿಕರನ್ನು ಉತ್ತೇಜಿಸುವ ಸಲುವಾಗಿ ಖಾಸಗಿ ಭೂಮಿಯಲ್ಲಿ ಗಂಧದ ಮರಗಳನ್ನು ಬೆಳೆಸಲು ಇರುವ ನಿರ್ಬಂಧಗಳನ್ನು ತೆಗೆದು ಹಾಕುವುದಕ್ಕಾಗಿ ಕರ್ನಾಟಕ ಅರಣ್ಯ ಅಧಿನಿಯಮ, 1963ಕ್ಕೆ ತಿದ್ದುಪಡಿಗಳನ್ನು ಘೋಷಿಸಲಾಗಿದೆ.

"ವಿಭಾಗೀಯ ಅರಣ್ಯ ಅಧಿಕಾರಿ"ಯ ಹುದ್ದೆಯು "ಉಪ ಅರಣ್ಯ ಸಂರಕ್ಷಕ" ಎಂಬುದಾಗಿ ಮರುನಾಮಕರಣವಾಗಿರುವುದರಿಂದ ಅದರ ಪರಿಭಾಷೆಯನ್ನು ತಿದ್ದುಪಡಿ ಮಾಡಲು ಹಾಗು "ಅರಣ್ಯ ಅಧಿಕಾರಿ" ಪರಿಭಾಷೆಯಲ್ಲಿ "ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಕ"ರನ್ನು ಸೇರಿಸಲು ಪ್ರಸ್ತಾವಿಸಿದೆ.

ಕಾರಾವಾಸವನ್ನು ಏಳು ವರ್ಷಗಳಿಂದ ಹತ್ತು ವರ್ಷಗಳಿಗೆ ಹಾಗೂ ಜುಲ್ಮಾನೆಯನ್ನು ಇಪ್ಪತ್ತೈದು ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸುವ ಮೂಲಕ ಗಂಧದ ಮರಗಳಿಗೆ ಸಂಬಂಧಪಟ್ಟ ಅರಣ್ಯ ಅಪರಾಧಗಳ ಕುರಿತಾದ ದಂಡನಾ ಉಪಬಂಧಗಳನ್ನು ಮಾರ್ಪಾಡು ಮಾಡಲು ಸಹ ಪ್ರಸ್ತಾವಿಸಿದೆ.

ಆದ್ದರಿಂದ ಈ ವಿಧೇಯಕ.

(2001ರ ವಿಧಾನಪರಿಷತ್ತಿನ ವಿಧೇಯಕ ಸಂ:2ರ ಮೂಲಕ ಪಡೆಯಲಾದ ಕಡತ ಸಂ:ಸಂವ್ಯಶಾಇ 30 ಶಾಸನ 2001).

## XIV

**2009ರ ತಿದ್ದುಪಡಿ ಅಧಿನಿಯಮ 24.-** ಕರ್ನಾಟಕ ಅರಣ್ಯ ಅಧಿನಿಯಮ 1963ರ 98ಎ ಪ್ರಕರಣದ ಪ್ರಕಾರ ಸಂದಾಯಮಾಡತಕ್ಕ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ವಿಳಂಬವಾಗಿ ಸಂದಾಯ ಮಾಡಿದಾಗ ಅದರ ಮೇಲೆ ಬಡ್ಡಿಯನ್ನು ವಿಧಿಸುವ ಬಗ್ಗೆ ಈಗ ಯಾವುದೇ ಉಪಬಂಧವಿಲ್ಲ. ಮಾರಾಟ ತೆರಿಗೆ ಹಾಗೂ ಆದಾಯ ತೆರಿಗೆ ಇಲಾಖೆಗಳು ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆ ಬಾಕಿಗಳನ್ನು ವಿಳಂಬವಾಗಿ ಸಂದಾಯಮಾಡಿದಾಗ ಅದರ ಮೇಲೆ ವರ್ಷಕ್ಕೆ ಶೇಕಡಾ ಇಪ್ಪತ್ನಾಲ್ಕರ ದರದಲ್ಲಿ ಬಡ್ಡಿ ವಿಧಿಸುತ್ತಿವೆ. ಅರಣ್ಯ ಅಭಿವೃದ್ಧಿ ತೆರಿಗೆಯ ಸಂದಾಯವನ್ನು ಕ್ರಮಬದ್ಧಗೊಳಿಸಲು ಕರ್ನಾಟಕ ಅರಣ್ಯ

ಅಧಿನಿಯಮ, 1963ರ 98ಎ ಮತ್ತು 98ಬಿ ಪ್ರಕರಣಗಳಿಗೆ ತಿದ್ದುಪಡಿಗಳನ್ನು ಮಾಡಿ ಕಾಲ ಕಾಲಕ್ಕೆ ನಿಯಮಿಸಲಾದ ದರದಲ್ಲಿ ಬಡ್ಡಿಯನ್ನು ವಿಧಿಸಲು ಪ್ರಸ್ತಾವಿಸಲಾಗಿದೆ. ಸರ್ಕಾರದ ಬಾಕಿಗಳು ಸಕಾಲದಲ್ಲಿ ಸಂದಾಯವಾಗುವಂತೆ ಮತ್ತು ರಾಜ್ಯ ಬೊಕ್ಕಸಕ್ಕೆ ನಿರಂತರವಾಗಿ ಒಂದೇ ರೀತಿಯಲ್ಲಿ ಆದಾಯವು ದೊರೆಯುವಂತೆ ಮಾಡುವುದು ಇದರ ಉದ್ದೇಶವಾಗಿದೆ.

ಆದ್ದರಿಂದ ಈ ವಿಧೇಯಕ.

(2009ರ ವಿಧಾನಸಭೆಯ ವಿಧೇಯಕ ಸಂ.26, ಕಡತ ಸಂ.ಸಂವ್ಯಶಾಇ 8 ಶಾಸನ 2007).

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIIರ 17ಎ ನೇ ನಮೂದು)

**XV**

**2015ರ ತಿದ್ದುಪಡಿ ಅಧಿನಿಯಮ 41.-** ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 5),-

(1) ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಹೆಚ್ಚಿಸುವುದಕ್ಕೆ;

(2) ಅರಣ್ಯಗಳ ಮತ್ತು ವನ್ಯಜೀವಿ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳಿಗೆ ಅರಣ್ಯ ಅಭಿವೃದ್ಧಿ ನಿಧಿಯನ್ನು ಬಳಸುವುದಕ್ಕೆ,

- ಉಪಬಂಧಗಳನ್ನು ಕಲ್ಪಿಸಲು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂ.39, ಕಡತ ಸಂ.ಸಂವ್ಯಶಾಇ 20 ಶಾಸನ 2015).

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIIರ 17ಎ ನಮೂದು)

**XVI**

**2016ರ ತಿದ್ದುಪಡಿ ಅಧಿನಿಯಮ 23.-** 1. ಅರಣ್ಯ ಅಭಿವೃದ್ಧಿ ತೆರಿಗೆಯನ್ನು (ಎಫ್ ಡಿಟಿ) ವಿಧಿಸುವುದರ ಸ್ವರೂಪ, ಪರಿಧಿ ಮತ್ತು ವ್ಯಾಪ್ತಿಗೆ ಸಂಬಂಧಿಸಿದ ಸಂದೇಹಗಳನ್ನು ನಿವಾರಿಸಲು ಕರ್ನಾಟಕ ಅರಣ್ಯ ಅಧಿನಿಯಮ, 1963ಕ್ಕೆ (1964ರ ಕರ್ನಾಟಕ ಅಧಿನಿಯಮ 05) (ಇಲ್ಲಿ ಇನ್ನುಮುಂದೆ ಅಧಿನಿಯಮ ಎಂದು ಕರೆಯಲಾಗಿದೆ) ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಈ ಕೆಳಗೆ ವಿವರಿಸಲಾದಂತೆ, ಈ ತಿದ್ದುಪಡಿ

ವಿಧೇಯಕದ ಉದ್ದೇಶಗಳನ್ನು 16ನೇ ಆಗಸ್ಟ 2008ರಿಂದ ಪೂರ್ವಾನ್ವಯಗೊಳಿಸಬೇಕಿದೆ, ಅವೆಂದರೆ:-

(i) 98ಎ ಪ್ರಕರಣದಲ್ಲಿ ಬರುವ "ರಾಜ್ಯ ಸರ್ಕಾರವು ಅಧಿಸೂಚಿಸಿದ ಒಂದು ನಿಕಾಯ" ಎಂಬ ಪದಗಳ ಅರ್ಥ ಮತ್ತು ಉದ್ದೇಶವನ್ನು ಘೋಷಿಸುವುದು;

(ii) ಲೆವಿಯ ಸ್ವರೂಪವನ್ನು ಪುನರ್-ರೂಪಿಸುವುದು ಮತ್ತು ಶುಲ್ಕದ ಸ್ವರೂಪದಲ್ಲಿ ಅದು ಇರುವುದೆಂಬುದನ್ನು ಘೋಷಿಸುವುದು;

(iii) 2008 ಮತ್ತು ನಂತರದಿಂದ ಅರಣ್ಯ ಅಭಿವೃದ್ಧಿ ತೆರಿಗೆ/ಅರಣ್ಯ ಅಭಿವೃದ್ಧಿ ಶುಲ್ಕದ ಸಂಗ್ರಹಣೆಯನ್ನು ಸಿಂಧುಗೊಳಿಸುವುದು.

2. ಅಧಿಸೂಚನೆ ಸಂಖ್ಯೆ: ಎಫ್‌ಇಇ 248 ಎಫ್‌ಡಿಪಿ 2006, ದಿನಾಂಕ:16.08.2008, ಬೆಂಗಳೂರು ಇದನ್ನು ಹೊರಡಿಸಿದಂದಿನಿಂದ, ಎಂದರೆ 16ನೇ ಆಗಸ್ಟ 2008ರಿಂದ ಪೂರ್ವಾನ್ವಯವಾಗಿ 98ಎ ಮತ್ತು 98ಬಿ ಪ್ರಕರಣಗಳಿಗೆ ತಿದ್ದುಪಡಿಗಳನ್ನು ಮಾಡಲಾಗಿದೆ. 98ಎ ಪ್ರಕರಣವು 24.12.1975ರಿಂದ ಜಾರಿಗೆ ಬಂದಿದ್ದಾಗ್ಯೂ, ಅರಣ್ಯ ಅಧಿನಿಯಮ, 1963ರ ಅಧ್ಯಾಯ-XI ಎ ಯಲ್ಲಿ ಬರುವ ಉದ್ಯಮಗಳಿಗೆ ಅನವಶ್ಯಕ ತೊಂದರೆಗಳಾಗುವುದನ್ನು ತಪ್ಪಿಸಲು ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಮಾತ್ರ ಪೂರ್ವಾನ್ವಯವಾಗುವಂತೆ ಪ್ರಸ್ತುತ ತಿದ್ದುಪಡಿಗಳನ್ನು ಮಾಡಲಾಗಿದೆ.

3. ಅಧಿನಿಯಮದ 98ಎ ಪ್ರಕರಣವನ್ನು 1989ರ ತಿದ್ದುಪಡಿ ಅಧಿನಿಯಮ 10ರ ಮೂಲಕ "ರಾಜ್ಯ ಸರ್ಕಾರ ಅಥವಾ ಅದರ ಒಡೆತನ ಅಥವಾ ನಿಯಂತ್ರಣದಲ್ಲಿನ ಒಂದು ನಿಗಮವು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ನಿಕಾಯವು" ಎಂಬ ಪದಗಳನ್ನು ಸೇರಿಸಲು ತಿದ್ದುಪಡಿ ಮಾಡಲಾಯಿತು. ಅಧಿನಿಯಮದ 98ಎ ಪ್ರಕರಣದ ಅಡಿಯಲ್ಲಿ ಲೆವಿಯ ವ್ಯಾಪ್ತಿ ಅಥವಾ ಪರಿಧಿಯೊಳಗೆ, ರಾಜ್ಯದ ಒಡೆತನದಲ್ಲಿನ ಮತ್ತು ನಿಯಂತ್ರಣದಲ್ಲಿನ ನಿಗಮಗಳು ಹಾಗೂ ಖಾಸಗಿ ವ್ಯಕ್ತಿಗಳು, ಫರ್ಮುಗಳು, ಕಂಪನಿಗಳು ಅಥವಾ ಯಾರೇ ಇತರರ ಉದ್ಯಮಗಳು ಒಳಗೊಂಡಂತೆ, ಮಾರಾಟ ಅಥವಾ ಅನ್ಯಥಾ ಮೂಲಕ ಅರಣ್ಯೋತ್ಪನ್ನವನ್ನು ವಿಲೆ ಮಾಡುತ್ತಿರುವ ಎಲ್ಲಾ ವ್ಯಕ್ತಿಗಳನ್ನು ಸೇರಿಸುವ ಉದ್ದೇಶದೊಂದಿಗೆ ಸದರಿ ತಿದ್ದುಪಡಿಯನ್ನು ಮಾಡಲಾಯಿತು. ರಾಜ್ಯದ ಒಡೆತನದಲ್ಲಿರದ ಅಥವಾ ರಾಜ್ಯದ ನಿಯಂತ್ರಣದಲ್ಲಿರದ ಎರಡನೇ ಪ್ರವರ್ಗವನ್ನು, 98ಎ (1)ನೇ ಪ್ರಕರಣದಲ್ಲಿ "ನಿಕಾಯ ಪದಾವಳಿಯೊಳಗೆ ಸೇರಿಸಬೇಕೆಂಬ ಉದ್ದೇಶವಿತ್ತು. ಅರಣ್ಯೋತ್ಪನ್ನದ ವಿಲೆಯ ಮೇಲೆ ಶುಲ್ಕವನ್ನು ವಿಧಿಸುವ ಮೂಲಕ 98ಬಿ ಪ್ರಕರಣದ ಅಡಿಯಲ್ಲಿ ಆಜ್ಞಾಪಕವಾದಂತೆ

(mandated) "ವನ ನಿರ್ಮಾಣ"ದ ಪರಿಸರವನ್ನು ಉತ್ತಮಗೊಳಿಸುವ, ಮರಗಳನ್ನು ಹೆಚ್ಚಿಸುವ ಮತ್ತು ಅದಕ್ಕೆ ಪೂರಕವಾದ ಚಟುವಟಿಕೆಗಳ ಉದ್ದೇಶಕ್ಕಾಗಿ ರಾಜಸ್ವವನ್ನು ಹೆಚ್ಚಿಸುವ ಉದ್ದೇಶದಿಂದ ಇದನ್ನು ಮಾಡಲಾಗಿತ್ತು.

4. ಹೀಗಾಗಿ, ಮಾರಾಟದ ಅಥವಾ ಅನ್ಯಥಾ ಮೂಲಕ ಅರಣ್ಯೋತ್ಪನ್ನವನ್ನು ವಿಲೆ ಮಾಡುತ್ತಿರುವ, ರಾಜ್ಯದ ಒಡೆತನದಲ್ಲಿ, ರಾಜ್ಯದ ನಿಯಂತ್ರಣದಲ್ಲಿ ಇರುವ ಅಥವಾ ಇಲ್ಲದಿರುವ ಎಲ್ಲಾ ಘಟಕಗಳನ್ನು ಅರಣ್ಯ ಅಭಿವೃದ್ಧಿ ತೆರಿಗೆಯ (ಎಫ್‌ಡಿಟಿ) ಲೆವಿಯ ವ್ಯಾಪ್ತಿ ಅಥವಾ ಪರಿಧಿಯೊಳಗೆ ತರಲಾಗಿದೆ ಎಂದು ಯಾವಾಗಲೂ ಖಚಿತಪಡಿಸುವುದು ಶಾಸನದ ಉದ್ದೇಶವಾಗಿತ್ತು. ರಾಜ್ಯ ಸರ್ಕಾರ ಮತ್ತು ಅದರ ಉದ್ಯಮಗಳಿಗೆ ಮಾತ್ರ ಲೆವಿಯನ್ನು ಸಂಗ್ರಹಿಸುವುದು ಮತ್ತು ಪಾವತಿಸುವ ಶಾಸನಬದ್ಧ ಆಜ್ಞಾಪಕವನ್ನು ನಿರ್ಬಂಧಿಸುವುದು ಮತ್ತು ಎಲ್ಲಾ ಸರ್ಕಾರೇತರ ಉದ್ಯಮಗಳು ಮತ್ತು ಕೇಂದ್ರ ಸರ್ಕಾರದ ಉದ್ಯಮಗಳನ್ನೂ ಹೊರತುಪಡಿಸುವ ಯಾವುದೇ ಉದ್ದೇಶವಿರುವುದಿಲ್ಲ. ಉದ್ಯಮಗಳ ಜೊತೆಯಾಗಿ, ಒಂದು ಸಂಘವಾಗಿ ಅಥವಾ ಸಂಘಟಿತ ವ್ಯಾಪಾರಿ ಸಂಸ್ಥೆಯಾಗಿ (conglomeration) ಕಾರ್ಯನಿರ್ವಹಿಸಿದಾಗ ಮಾತ್ರವೇ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಸಂಗ್ರಹಿಸಬೇಕೆಂಬುದು ವಿಧಾನಮಂಡಲದ ಉದ್ದೇಶವಾಗಿರುವುದಿಲ್ಲ. ವಾಸ್ತವವಾಗಿ, ಅಂಥ ಒಂದು ಅರ್ಥ ವಿವರಣೆಯು, 98ಎ ಪ್ರಕರಣವನ್ನು ತಿದ್ದುಪಡಿ ಮಾಡುವ ಉದ್ದೇಶವನ್ನು ವಿಫಲಗೊಳಿಸುವುದಷ್ಟೇ ಅಲ್ಲದೇ ಕರ್ನಾಟಕ ರಾಜ್ಯದಲ್ಲಿ ಅರಣ್ಯಗಳ ಅಭಿವೃದ್ಧಿಗಾಗಿ ಮತ್ತು ಪುನರುತ್ಪಾದನೆಯ ಕಾರ್ಯಕ್ರಮಕ್ಕೆ ಗಂಭಿರವಾದ ವಿಪತ್ತನ್ನು ಉಂಟು ಮಾಡುತ್ತದೆ.

5. ಕರ್ನಾಟಕ ರಾಜ್ಯವು ಅಧಿನಿಯಮದ 98ಎ (1)ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆ ಸಂಖ್ಯೆ: ಎಫ್‌ಇಇ 248 ಎಫ್‌ಡಿಪಿ 2006, ದಿನಾಂಕ:16.08.2008ನ್ನು ಹೊರಡಿಸಿದ್ದು ಅದರಲ್ಲಿ 98ಎ (1)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅರಣ್ಯ ಪ್ರದೇಶದಲ್ಲಿ ಇರುವ ಗಣಿಗಳು ಮತ್ತು ಕ್ವಾರಿಗಳ ಎಲ್ಲಾ ಗುತ್ತಿಗೆದಾರರನ್ನು ಅಧಿಸೂಚಿಸಲಾಗಿತ್ತು. ರಿಟ್ ಪಿಟಿಷನ್ ಸಂಖ್ಯೆ 2009ರ 2462ರಲ್ಲಿ (ಮತ್ತು ಇತರ ಸಂಬಂಧಿತ ವಿಷಯಗಳು) ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಅಧಿಸೂಚನೆಯ ಸಿಂಧುತ್ವ ಮತ್ತು ಕೆಲವ ಇತರ ವಿಷಯಗಳು ಪರಿಗಣನೆಗಾಗಿ ಬಂದಿತ್ತು ಮತ್ತು 3.12.2015ರಂದು ತೀರ್ಪು ನೀಡಲಾಗಿತ್ತು. ಮಾನ್ಯ ಉಚ್ಚ ನ್ಯಾಯಾಲಯವು, ಇತರ ವಿಷಯಗಳ ಜೊತೆಗೆ, "ಒಂದು ನಿಕಾಯ" ಪದಾವಳಿಯು ಒಬ್ಬ ವ್ಯಕ್ತಿಯಾಗಿರಲಿ ಅಥವಾ ಇತರ ನ್ಯಾಯಿಕ ಉದ್ಯಮ (juristic entity), ಗಣಿಗಳು ಮತ್ತು

ಕ್ವಾರಿಗಳ ಗುತ್ತಿಗೆದಾರರು ಒಳಗೊಳ್ಳುವುದಿಲ್ಲ ಎಂಬ ಆಧಾರದ ಮೇಲೆ ಅಧಿಸೂಚನೆಯನ್ನು ರದ್ದುಗೊಳಿಸಲು ಇಚ್ಛಿಸಿತ್ತು. ಮಾನ್ಯ ಉಚ್ಚ ನ್ಯಾಯಾಲಯದ ಅನುಸಾರ, ಗುತ್ತಿಗೆದಾರರು, ವ್ಯಕ್ತಿಗಳಾಗಿರಬಹುದು, ಪಾಲುದಾರಿಕೆ ಫರ್ಮುಗಳಾಗಿರಬಹುದು, ಸೊಸೈಟಿಗಳಾಗಿರಬಹುದು, ಸಹಕಾರ ಸಂಘಗಳಾಗಿರಬಹುದು, ಕಂಪನಿಗಳ ಅಧಿನಿಯಮದ ಅಡಿಯಲ್ಲಿ ನಿಗಮಿತವಾದ ಕಂಪನಿಗಳಿರಬಹುದು ಅಥವಾ ಯಾವುದೇ ಇತರ ಸಂಘ ಅಥವಾ ವ್ಯಕ್ತಿಗಳಾಗಿರಬಹುದು. ಅವೆಲ್ಲವೂ ತಾವಾಗಿಯೇ "ಒಂದು ನಿಕಾಯ" ದೊಳಗೆ ರಚನೆಯಾಗದ ಹೊರತು, ಅನಿವಾರ್ಯವಾಗಿ ನ್ಯಾಯಿಕ ಘಟಕವಾಗುವ ಕಾನೂನು ವ್ಯಕ್ತಿಯನ್ನು ಹೊಂದಿರುವ ಗುತ್ತಿಗೆದಾರರು ಸದಸ್ಯರಾಗಿರುವ ಅಂಥ ಸಂಯುಕ್ತ ಸಂಘವಾಗಿ, ಅವರು ಷೇರುಹೋಲ್ಡರುಗಳಾಗಿರುವ ಕಂಪನಿ, ಅವರು ಸದಸ್ಯರಾಗಿರುವ ಒಂದು ಸೊಸೈಟಿ ಮತ್ತು ಅಂಥ ಸಂಯುಕ್ತ ಸಂಘ ಅಥವಾ ಕಂಪನಿ ಅಥವಾ ಸೊಸೈಟಿಯ ಚಟುವಟಿಕೆಗಳಲ್ಲಿ, ಮಾರಾಟ ಅಥವಾ ಅನ್ಯಥಾ ಮೂಲಕ ಅರಣ್ಯೋತ್ಪನ್ನವಾದ ಖನಿಜಗಳ ವಿಲೆಯು ಒಂದಾಗಿದ್ದಲ್ಲಿ ರಾಜ್ಯ ಸರ್ಕಾರದ ಮೂಲಕ ಅಧಿಸೂಚಿತವಾಗಬಹುದಾದ ನಿಕಾಯವೆಂದು ಅವುಗಳನ್ನು ಪರಿಗಣಿಸತಕ್ಕದ್ದಲ್ಲ, ಆದ್ದರಿಂದ, ಸ್ವತಂತ್ರ ಮತ್ತು ಪ್ರತ್ಯೇಕ ಗುತ್ತಿಗೆದಾರರು ಖಾಸಗಿ ವ್ಯಕ್ತಿಗಳಾಗಿರಲಿ ಅಥವಾ ಪಾಲುದಾರಿಕೆ ಸಂಸ್ಥೆಗಳಾಗಿರಲಿ ಅಥವಾ ಕಂಪನಿಗಳಾಗಿರಲಿ ಅಥವಾ ಯಾವುದೇ ಇತರ ನ್ಯಾಯಿಕ ಉದ್ಯಮವಾಗಿರಲಿ, ಅವರು ಅಧಿನಿಯಮದ 98-ಎ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ "ಒಂದು ನಿಕಾಯ" ಎಂಬ ಪದಾವಳಿಯ ಅರ್ಥವ್ಯಾಪ್ತಿಯೊಳಗೆ ಬರುವುದಾಗಿ ಅರ್ಥೈಸುವಂತಿಲ್ಲ. ಈ ಕಾರಣದಿಂದಾಗಿ, "ಅರಣ್ಯ ಅಭಿವೃದ್ಧಿ ತೆರಿಗೆ (ಎಫ್‌ಡಿಟಿ)ಯನ್ನು ಸಂದಾಯ ಮಾಡಲು ಹೊಣೆಗಾರರಾಗಿರದ ಅರಣ್ಯ ಪ್ರದೇಶದಲ್ಲಿರುವ ಗಣಿಗಳು ಮತ್ತು ಕ್ವಾರಿಗಳ ಅಸಂಖ್ಯಾತ ಗುತ್ತಿಗೆದಾರರಿಂದ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ಇದು ಸ್ಪಷ್ಟವಾಗಿ ಎಂದಿಗೂ ಶಾಸನದ ಉದ್ದೇಶವಾಗಿರಲಿಲ್ಲ, ಏಕೆಂದರೆ, "ನಿಕಾಯ" ಪದವು, ವ್ಯಕ್ತಿಗಳಾಗಿರಲಿ ಅಥವಾ ಕಂಪನಿಗಳಾಗಿರಲಿ ಅಥವಾ ಸಂಸ್ಥೆಗಳಾಗಲಿ ಮತ್ತು ಅದೇ ರೀತಿ ಇರಲಿ, ಗುತ್ತಿಗೆದಾರರ ಸಂಘಟಿತ ವ್ಯಾಪಾರಿ ಸಂಸ್ಥೆಯನ್ನು ಒಳಗೊಂಡಿರುವ ಅಧಿಕಾರ ವ್ಯಾಪ್ತಿಯುಳ್ಳ ಉದ್ಯಮಗಳಿಗೆ ಮಾತ್ರ ಎಂದಿಗೂ ಅನ್ವಯಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಅರಣ್ಯ ಪ್ರದೇಶದಲ್ಲಿರುವ ಗಣಿಗಳು ಮತ್ತು ಕ್ವಾರಿ ಗುತ್ತಿಗೆದಾರರು ಅರಣ್ಯ ಉತ್ಪನ್ನವನ್ನು ಖರೀದಿಸುವಾಗ ಅಥವಾ ಮಾರಾಟ ಮಾಡುವಾಗ ಅಥವಾ ವಿಲೆ ಮಾಡುವಾಗ ಸಂಘವಾಗಿ ಅಥವಾ ಸಂಘಟಿತ ವ್ಯಾಪಾರಿ ಸಂಸ್ಥೆಯಾಗಿ ಒಟ್ಟಿಗೆ ಕಾರ್ಯನಿರತರಾಗುವುದಿಲ್ಲ ಎಂಬುದು ಸಹ ಸ್ಪಷ್ಟ ವಿಷಯವಾಗಿದೆ.

6. ಆದುದರಿಂದ, ಪೂರ್ವಾನ್ವಯವಾಗಿ 98-ಎ ಪ್ರಕರಣವನ್ನು ತಿದ್ದುಪಡಿ ಮಾಡುವುದು ಹಾಗೂ 'ನಿಕಾಯ' ಎಂಬ ಪದವು, ಅರಣ್ಯ ಪ್ರದೇಶದಲ್ಲಿ ಇರುವ ಗಣಿಗಳು ಮತ್ತು ಕ್ವಾರಿಗಳ ಗುತ್ತಿಗೆದಾರರೂ ಸಹ, ಒಕ್ಕೂಟ, ಕಂಪನಿ ಅಥವಾ ಸೊಸೈಟಿ ಅಥವಾ ವ್ಯಕ್ತಿಗಳ ಸಂಘವಾಗಿ, ಅವರೆಲ್ಲರೂ ಒಟ್ಟಿಗೆ ಸೇರದಿದ್ದರೂ ಸಹ, ಅರಣ್ಯ ಪ್ರದೇಶದಲ್ಲಿರುವ ಗಣಿಗಳು ಮತ್ತು ಕ್ವಾರಿಗಳ ಗುತ್ತಿಗೆದಾರರನ್ನು ಒಳಗೊಳ್ಳುತ್ತದೆ ಮತ್ತು ಯಾವಾಗಲೂ ಒಳಗೊಂಡಿದೆ ಎಂದು ಘೋಷಿಸುವುದು ಅವಶ್ಯಕವಾಗಿದೆ. ಮುಖ್ಯವಾಗಿ, ಮಾನ್ಯ ಉಚ್ಚ ನ್ಯಾಯಾಲಯವು, "ನಿಕಾಯ" ಎಂಬ ಪದಾವಳಿಯು ರಾಜ್ಯ ಸರ್ಕಾರವು ಯಾವ ರೀತಿಯಲ್ಲೇ ಆಗಲಿ ಯಾವುದೇ ನಿಯಂತ್ರಣವನ್ನು ಹೊಂದಿರದ ಯಾವುದೇ ಸ್ವಾಯತ್ತ ಅಥವಾ ಖಾಸಗಿ ನಿಕಾಯವನ್ನು ಒಳಗೊಳ್ಳುತ್ತದೆ ಎಂಬ ಈ ಅಭಿಪ್ರಾಯವನ್ನು ಅಂಗೀಕರಿಸಿದೆ. ಪ್ರಸ್ತಾವಿತ ತಿದ್ದುಪಡಿಗಳು, ಅರಣ್ಯ ಪ್ರದೇಶದಲ್ಲಿನ ಗಣಿಗಳು ಮತ್ತು ಕ್ವಾರಿಗಳ ಎಲ್ಲಾ ಗುತ್ತಿಗೆದಾರರು "ನಿಕಾಯ" ಪರಿಭಾಷೆಯ ಒಳಗೆ ಬರುವರೆಂದು ಮತ್ತು ಈ ಲೆವಿಯು ಅರಣ್ಯಗಳ ಅಭಿವೃದ್ಧಿ ಮತ್ತು ಪುನರುತ್ಪಾದನೆಗೆ ನಿರ್ಣಾಯಕವಾಗಿರುವುದರಿಂದ ಅರಣ್ಯ ಅಭಿವೃದ್ಧಿ ತೆರಿಗೆ ಅಥವಾ ಅರಣ್ಯ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸಲು ಮತ್ತು ಸಂದಾಯ ಮಾಡಲು ಅವರು ಹೊಣೆಗಾರರಾಗಿರುತ್ತಾರೆಂದು ಘೋಷಿಸಲು ಉದ್ದೇಶಿಸಿದೆ. ಪ್ರಸ್ತಾವಿತ ತಿದ್ದುಪಡಿಗಳು ಅಸ್ಥಿರತೆಯನ್ನು ಹೋಗಲಾಡಿಸಿ, ಪ್ರಸ್ತುತ ಇರುವ ಉಪಬಂಧಗಳಲ್ಲಿ ಕಂಡುಬಂದಂಥ ಲೋಪದೋಷಗಳನ್ನು ತೆಗೆದುಹಾಕಿದೆ. ವಿಧೇಯಕವು ಸಿಂಧುತ್ವ ಖಂಡವನ್ನು ಸಹ ಒಳಗೊಂಡಿದ್ದು, ಅದರೊಂದಿಗೆ ತರುವಾಯದಲ್ಲಿ ವ್ಯವಹರಿಸಲಾಗುವುದು.

**ತೆರಿಗೆ ಮತ್ತು ಶುಲ್ಕ:**

7. ಗುರುಸಿದ್ದಪ್ಪ ವಿರುದ್ಧ ಕರ್ನಾಟಕ ರಾಜ್ಯ, ಎಐಆರ್ 1981 ಕೆಎಆರ್ 216 ಮೊಕದ್ದಮೆಯಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, ಅರಣ್ಯ ಉತ್ಪನ್ನದ ಖರೀದಿ ದರದ ಮೇಲೆ ವಿಧಿಸಲಾದ ಎಫ್‌ಡಿಟಿಯು ಪಟ್ಟಿ-IIರ 54ನೇ ನಮೂದಿನ ಅಡಿಯಲ್ಲಿ ರಾಜ್ಯದ ವಿಧಾಯೀ ಸಕ್ಷಮತೆ ಒಳಗೆ ಇದೆ ಮತ್ತು ಶಾಸನಬದ್ಧವಾಗಿ ಸಿಂಧುವಾಗಿದೆ ಎಂದು ತೀರ್ಪು ನೀಡಿದೆ. ಆದಾಗ್ಯೂ, ತಿದ್ದುಪಡಿಯಾಗದ 98ಎ(1)ನೇ ಪ್ರಕರಣವು ತೆರಿಗೆಯನ್ನು ವಿಧಿಸುವುದನ್ನು ಅದು ಶುಲ್ಕದ ಸ್ವರೂಪದಲ್ಲಿದೆ ಎಂದು ಹೇಳುತ್ತದೆ. ಅರಣ್ಯ ಅಭಿವೃದ್ಧಿ ತೆರಿಗೆಯ ರೂಪದಲ್ಲಿ ಸಂಗ್ರಹಿಸಲಾದ ಮೊತ್ತವನ್ನು ಅರಣ್ಯದ ಅಭಿವೃದ್ಧಿಗೆ ಮತ್ತು ಪುನರುತ್ಪಾದನೆ ಮೀಸಲಿರಿಸಲಾಗಿದೆ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಖರ್ಚು ಮಾಡಬೇಕಾದ ರಾಜ್ಯದ ಸಾಮಾನ್ಯ ರಾಜಸ್ವಕ್ಕೆ ಹೋಗುತ್ತಿಲ್ಲ.

ಇದನ್ನು ಅಧಿನಿಯಮದ 98ಬಿ ಪ್ರಕರಣವು ಸಹ ಸ್ಪಷ್ಟಪಡಿಸುತ್ತದೆ, ಎಂದರೆ, ಅದು ಎಫ್ ಡಿಟಿ ಮತ್ತು ವಿಧಿಸಲಾದಂಥ ಬಡ್ಡಿ ಮತ್ತು 98ಎ ಪ್ರಕರಣದ ಅಡಿಯಲ್ಲಿನ ತೆರಿಗೆ ಸಂಗ್ರಹವು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯ ಭಾಗವಾಗಿ ರೂಪುಗೊಳ್ಳುತ್ತದೆ ಎಂಬುದನ್ನು ನಿರ್ದಿಷ್ಟಪಡಿಸುತ್ತದೆ. ಎಫ್‌ಡಿಟಿ ಮತ್ತು 98ಬಿ(2)ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಇತರ ಮೊತ್ತಗಳು ರಾಜ್ಯದ ಕ್ರೋಢೀಕೃತ ನಿಧಿಗೆ ಜಮೆಯಾಗುತ್ತಿದ್ದಾಗ್ಯೂ, ತರುವಾಯದಲ್ಲಿ ಅದನ್ನು ಮೇಲೆ ಹೇಳಲಾದ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವರ್ಗಾಯಿಸಲಾಗುತ್ತದೆ.

8. ಮಹಾರಾಷ್ಟ್ರ ಸರ್ಕಾರ ವಿರುದ್ಧ ಸಾಲ್ವೇಷನ್ ಆರ್ಮಿ ಎಐಆರ್ 1975 ಎಸ್‌ಸಿ 846 ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು, ಪ್ರಾರಂಭದಲ್ಲಿ ಶುಲ್ಕದ ರೂಪದಲ್ಲಿರುವ ಶುಲ್ಕವನ್ನು ತರುವಾಯದಲ್ಲಿ ತೆರಿಗೆ ಲಕ್ಷಣಗಳಿರುವುದಾಗಿ ಭಾವಿಸಬಹುದೆಂದು ತೀರ್ಪು ನೀಡಿದೆ. ಪರಿವರ್ತನೆಯ ಸಹ ನಿಜವಾದುದಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಣಯವನ್ನು 1981ರಲ್ಲಿ ನೀಡಲಾಗಿದ್ದು, ಎಫ್‌ಡಿಟಿಯನ್ನು ಪಟ್ಟಿ-IIರ 54ನೇ ನಮೂದಿನ ಅಡಿಯಲ್ಲಿ ಬರುವ ತೆರಿಗೆ ಎಂದು ಪರಿಗಣಿಸಲಾಗಿದೆ.

9. ಎಫ್‌ಡಿಟಿಯು ಶುಲ್ಕವಾಗಿರುವುದರಿಂದ, ಅರಣ್ಯ ಉತ್ಪನ್ನಗಳ ಮಾರಾಟ ಅಥವಾ ಅನ್ಯಥಾ ರೂಪದಲ್ಲಿ ವಿಲೇ ಮಾಡುವ ಸಮಯದಲ್ಲಿ ವಿಧಿಸಲಾಗುವುದು, ಈ ಶುಲ್ಕವನ್ನು, ಸಂವಿಧಾನದ XIIನೇ ಅನುಸೂಚಿಯ ಪಟ್ಟಿ-IIರ 66ನೇ ನಮೂದಿನ ಅಡಿಯಲ್ಲಿ ರಾಜ್ಯ ವಿಧಾಯೀ ಅಧಿಕಾರಗಳನ್ನು ಚಲಾಯಿಸಿ ವಿಧಿಸಲಾಗುವುದು. ಕಲ್ಕತ್ತ ಮಹಾನಗರ ಪಾಲಿಕೆ ವಿರುದ್ಧ ಲಿಬರ್ಟಿ ಸಿನೆಮಾಸ್ ಎಐಆರ್ 1965 ಎಸ್‌ಸಿ 1107 ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಶುಲ್ಕವು ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಪಡಬಹುದಾದ ಅಧಿನಿಯಮಿತಿಯ ಅಡಿಯಲ್ಲಿ ಸಹ ಇರಬಹುದಾಗಿದೆ ಎಂದು ತೀರ್ಪು ನೀಡಿದೆ. ಯಾವುದೇ ಸಂದರ್ಭದಲ್ಲೂ, ಪಟ್ಟಿ-IIIರ 47ನೇ ನಮೂದಿನ ಅಡಿಯಲ್ಲಿ ಅಂಥ ಶುಲ್ಕವನ್ನು ವಿಧಿಸಲು ರಾಜ್ಯ ಸರ್ಕಾರವು ಸಕ್ಷಮವಾಗಿದೆ.

**ಸಿಂಧುತ್ವ:**

10.1 ರಾಜ್ಯ ಸರ್ಕಾರವು ಆಕ್ಷೇಪಿತ ಅಧಿಸೂಚನೆಯನ್ನು 2008ರಲ್ಲಿ ಹೊರಡಿಸಿದ ತರುವಾಯ ಎಫ್‌ಡಿಟಿಯಾಗಿ 3500 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಮೊತ್ತವನ್ನು ವಿಧಿಸಿದೆ ಮತ್ತು ಸಂಗ್ರಹಿಸಿದೆ. ಮೇಲಿನ ತೀರ್ಪಿನಲ್ಲಿನ ಎಲ್ಲ ಅರ್ಜಿದಾರರು 2011ರವರೆಗಿನ ಲೆವಿಯ ಬಗ್ಗೆ ಮಾತ್ರ ತಾವು ವಿವಾದ ಹೊಂದಿರುವರೆಂಬುದನ್ನು ಒಪ್ಪಿದ್ದಾರೆ. ಆದಾಗ್ಯೂ, ಅರಣ್ಯ ಪ್ರದೇಶದಲ್ಲಿರುವ ಗಣಿಗಳ ಮತ್ತು ಕ್ವಾರಿಗಳ ಗುತ್ತಿಗೆದಾರರು ಮತ್ತು ಮೇಲ್ವಿಚಾರಣಾ

ಸಮಿತಿಗಳಿಬ್ಬರೂ, ಇಂದಿನವರೆಗಿನ ಖನಿಜಗಳ ಖರೀದಿದಾರರಿಂದ ಮಾಡಿದ ಅಂಥ ಸಂಗ್ರಹಣೆಗಳನ್ನು ಸಿಂಧುಗೊಳಿಸಲು ಪ್ರಸ್ತಾಪಿಸಲಾಗಿದೆ. ಪ್ರಸ್ತುತ ವಿಧೇಯಕವು ಮೇಲೆ ಹೇಳಲಾದ ಉದ್ದೇಶಗಳನ್ನು ಸಾಧಿಸಲು ಹಾಗೂ ಎಫ್‌ಡಿಟಿಯನ್ನು ವಿಧಿಸುವ ಮತ್ತು ಸಂಗ್ರಹಿಸುವ ಸಿಂಧುತ್ವಕ್ಕಾಗಿ ಉಪಬಂಧ ಕಲ್ಪಿಸಲು ಉದ್ದೇಶಿಸುತ್ತದೆ. ವಿಧೇಯಕದ 6ನೇ ಖಂಡವು, ಇತರ ವಿಷಯಗಳ ಜೊತೆಗೆ, ಈ ತಿದ್ದುಪಡಿ ವಿಧೇಯಕಕ್ಕೆ ಮೊದಲು ಅಸ್ತಿತ್ವದಲ್ಲಿದ್ದಂಥ ಅಧಿನಿಯಮದ ಉಪಬಂಧಗಳ ಅಡಿಯಲ್ಲಿನ ಯಾವುದೇ ಬೇಡಿಕೆ ಮತ್ತು/ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ತಿದ್ದುಪಡಿಯ ನಂತರದ ಹೊಸ ಕಾನೂನಿನ ಅಡಿಯಲ್ಲಿ ತೆಗೆದುಕೊಂಡದ್ದು ಅಥವಾ ವಿಧಿಸಲಾದದ್ದೆಂದು ಭಾವಿಸತಕ್ಕದ್ದು ಎಂಬ ಉಪಬಂಧವನ್ನು ಕಲ್ಪಿಸುತ್ತದೆ. ತಿದ್ದುಪಡಿಯಾದ ಕಾನೂನಿನ ಅಡಿಯಲ್ಲಿ ಮಾಡಲಾಗಿದೆಯೆಂದು ಭಾವಿಸುವ ಮೂಲಕ ಮಾಡಿದ ಬೇಡಿಕೆಯನ್ನು ಇದು ಸಿಂಧುತ್ವಗೊಳಿಸುವುದು ಮತ್ತು ಹೀಗೆ ರಾಜ್ಯದ ರಾಜಸ್ವವನ್ನು ಸಂರಕ್ಷಿಸುತ್ತದೆ. ಆದ್ದರಿಂದ ಈ ವಿಧೇಯಕವು ಅಸ್ಥಿರತೆಯನ್ನು ಹೋಗಲಾಡಿಸಿ, ಈಗಿರುವ ಉಪಬಂಧಗಳಲ್ಲಿ ಕಂಡುಬರುವ ಲೋಪದೋಷಗಳನ್ನು ತೆಗೆದುಹಾಕುತ್ತದೆ ಹಾಗೂ ಅರಣ್ಯ ಅಭಿವೃದ್ಧಿ ತೆರಿಗೆ ಮತ್ತು ಅರಣ್ಯ ಅಭಿವೃದ್ಧಿ ಶುಲ್ಕದ ಕಾನೂನುಬದ್ಧ ವಿಧಿಸುವಿಕೆಗೆ ಸಿಂಧುತ್ವ ಖಂಡದಲ್ಲಿ ಸಾಕಷ್ಟು ಉಪಬಂಧಗಳನ್ನು ಕಲ್ಪಿಸುತ್ತದೆ.

10.2 ನಿಯಮಿಸಲಾದ ನಿಯಮಗಳು ಅಥವಾ ಮಾರ್ಗಸೂಚಿಗಳ ಪ್ರಕಾರ ಅರಣ್ಯ ಅಭಿವೃದ್ಧಿ ಶುಲ್ಕವನ್ನು ಪುನಃ ಲೆಕ್ಕಹಾಕಲು ರಾಜ್ಯ ಸರ್ಕಾರವು ಉದ್ದೇಶಿಸುತ್ತದೆ. ಹೊಸ ನಿಯಮಗಳು ಅಥವಾ ಮಾರ್ಗಸೂಚಿಗಳ ಪ್ರಕಾರ ಲೆಕ್ಕಹಾಕಲಾದ ಬೇಡಿಕೆಯು, ಮೊದಲಿನ 98ಎ ಪ್ರಕರಣದ ಅಥವಾ ಅದರಡಿ ಹೊರಡಿಸಿದ ಯಾವುದೇ ಅಧಿಸೂಚನೆಯ ಅಡಿಯಲ್ಲಿನ ಅರಣ್ಯ ಅಭಿವೃದ್ಧಿ ಶುಲ್ಕ ಬೇಡಿಕೆಯ ಮೊತ್ತಕ್ಕಿಂತ ಕಡಿಮೆಯಾಗಿದ್ದರೆ ಕಡಿಮೆಯಾದ ಮೊತ್ತವನ್ನು ಅರಣ್ಯ ಅಭಿವೃದ್ಧಿ ಶುಲ್ಕವಾಗಿ ಸಂದಾಯನೀಯವಾಗುವುದು.

10.3 ಯಾವುದೇ ನಿರ್ದಿಷ್ಟ ವ್ಯಕ್ತಿಗಳ ವರ್ಗದ ಮೂಲಕ ಅಥವಾ ಯಾವುದೇ ನಿರ್ದಿಷ್ಟ ಅರಣ್ಯ ಉತ್ಪನ್ನದ ಸಂಬಂಧದಲ್ಲಿ, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ, ಅಧಿಸೂಚನೆಯ ಮೂಲಕ ಸರ್ಕಾರವು ಅರಣ್ಯ ಅಭಿವೃದ್ಧಿ ತೆರಿಗೆ (ಎಫ್‌ಟಿಡಿ) ಅಥವಾ ಅರಣ್ಯ ಅಭಿವೃದ್ಧಿ ಶುಲ್ಕವನ್ನು ವಿನಾಯಿತಿಗೊಳಿಸಲು ಅಥವಾ ಕಡಿಮೆ ಮಾಡಲು ಕೂಡ ಒಂದು ಉಪಬಂಧವನ್ನು ಪ್ರಸ್ತಾವಿಸಲಾಗಿದೆ.

**ದಂಡ:**

11.ಯಾವುದೇ ದಂಡದ ವ್ಯವಹರಣೆಗಳು ವಿಧೇಯಕದಲ್ಲಿ ಪ್ರಸ್ತಾವಿಸಿದಂಥ ಪೂರ್ವಾನ್ವಯ ತಿದ್ದುಪಡಿಗಳ ಪರಿಣಾಮವಾಗಿ ಬಂದಿರುವುದಿಲ್ಲವೆಂದು ಇದು ಸ್ಪಷ್ಟಪಡಿಸುತ್ತದೆ. ಇದು ಸಂವಿಧಾನದ 20(1)ನೇ ಅನುಚ್ಛೇದ ಅನುಪಾಲನೆಯನ್ನು ಸಹ ಸುನಿಶ್ಚಿತಗೊಳಿಸುತ್ತದೆ.

**ತೆರಿಗೆ ಅಥವಾ ಶುಲ್ಕದ ದರ:**

12.ಖನಿಜಗಳ ವಿಲೆಯ ಮೇಲೆ ಶೇಕಡ 12ರ ದರದಲ್ಲಿ ಬೇಡಿಕೆಯು ಹೆಚ್ಚಾಗಿದ್ದಾಗ್ಯೂ, ಹಿಂದಿನ ಉಪಬಂಧಗಳಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಕೋಷ್ಟಕದಲ್ಲಿ ಹೇಳಲಾಗಿರುವುದನ್ನು ಹೊರತುಪಡಿಸಿ 98ಎ(1) ಪ್ರಕರಣವು ಅರಣ್ಯ ಉತ್ಪನ್ನದ ಮೇಲೆ ಶೇಕಡ 8ರಷ್ಟು ತೆರಿಗೆ ದರವನ್ನು ನಿಗದಿಪಡಿಸುತ್ತದೆ. ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 2015 ಇದು ಶೇಕಡ 12ರಷ್ಟು ಲೆವಿಯನ್ನು ವಿಧಿಸುತ್ತದೆಯಾದರೂ, ಪೂರ್ವಾನ್ವಯವಾಗಿ ದರವನ್ನು ತಿದ್ದುಪಡಿ ಮಾಡುವುದನ್ನು ಬಿಟ್ಟುಬಿಟ್ಟಿದೆ. 16ನೇ ಆಗಸ್ಟ್ 2008ರಿಂದ ಪೂರ್ವಾನ್ವಯವಾಗಿ ಶೇಕಡ 8ನ್ನು ಶೇಕಡ 12ಕ್ಕೆ ಹೆಚ್ಚಿಸಲಾಗಿದೆ ಎಂಬುದು ಈಗ ಸ್ಪಷ್ಟವಾಗಿದೆ. ಆದಾಗ್ಯೂ, 16ನೇ ಆಗಸ್ಟ್ 2008ರಿಂದ ಈ ದರದಲ್ಲಿ ಬೇಡಿಕೆಗಳನ್ನು ಮಾಡಲಾಗಿದೆ.

13.02.09.2011 ಮತ್ತು 23.9.2011ರ ಆದೇಶದ ಮೂಲಕ, ಸರ್ವೋಚ್ಚ ನ್ಯಾಯಾಲಯವು 2009ರ ರಿಟ್ ಅರ್ಜಿ(ಸಿ) 562ರಲ್ಲಿ, ಮೇಲ್ವಿಚಾರಣಾ ಸಮಿತಿಯು "ಅನ್ವಯವಾಗುವಂತೆ" ಎಫ್‌ಡಿಟಿ ಸಂಗ್ರಹಿಸತಕ್ಕದ್ದೆಂದು ನಿರ್ದೇಶಿಸಿದೆ. ಅದಕ್ಕನುಸಾರವಾಗಿ, ಅರಣ್ಯ ಪ್ರದೇಶದಲ್ಲಿನ ಗುತ್ತಿಗೆಗಳಿಂದ ಹೊರತೆಗೆದ ಕಬ್ಬಿಣದ ಅದಿರನ ಎಲ್ಲ ಖರೀದಿದಾರರು (2009ರ ರಿಟ್ ಅರ್ಜಿ ಸಂ. 2642ರಲ್ಲಿ ಮತ್ತು ಇತರ ಸಂಬಂಧಪಟ್ಟ ವಿಷಯಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದಿರುವ ಅರ್ಜಿದಾರರನ್ನು ಒಳಗೊಂಡು), ಯಾವುದೇ ಪ್ರತಿಭಟನೆ ಅಥವಾ ಆಕ್ಷೇಪಣೆಗಳಿಲ್ಲದೆ ಮೇಲ್ವಿಚಾರಣಾ ಸಮಿತಿಗೆ ಶೇಕಡ 12ರ ದರದಲ್ಲಿ ಎಫ್‌ಡಿಟಿಯನ್ನು ಸಂದಾಯ ಮಾಡಿರುವರು. ಎಫ್‌ಡಿಟಿಯು ಅನ್ವಯವಾಗುವ ದರವು ಶೇಕಡ 12 ಅಲ್ಲ ಶೇಕಡ 8 ಎಂದು ಸ್ಪಷ್ಟೀಕರಣ ಕೋರಲು ಯಾವುದೇ ಅರ್ಜಿಯನ್ನು ಯಾವಾಗಲೂ ಸಲ್ಲಿಸಲಾಗಿಲ್ಲ. ಅದಕ್ಕನುಸಾರವಾಗಿ ಎಫ್‌ಡಿಟಿಯನ್ನು ಶೇಕಡ 12 ಎಂಬುದಾಗಿ ಏಕರೂಪವಾಗಿ ಅಂಗೀಕರಿಸಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದಿರುವ ಅರ್ಜಿದಾರರು ಸಹ 23.09.2011ಕ್ಕೆ ಮೊದಲಿನ ಅವಧಿಗೆ ಮಾತ್ರ ಅವರ

ಕ್ಲೇಮನ್ನು ಪರಿಮಿತಿಗೊಳಿಸಿದ್ದಾರೆ. ಹಾಗಾಗಿ, ಅರಣ್ಯ ಅಭಿವೃದ್ಧಿ ತೆರಿಗೆ/ಅರಣ್ಯ ಅಭಿವೃದ್ಧಿ ಶುಲ್ಕದ ದರವನ್ನು 16ನೇ ಆಗಸ್ಟ 2008ರಿಂದ ಶೇಕಡ 12 ಇರಬೇಕು ಎಂಬುದಾಗಿ ಪೂರ್ವಾನ್ವಯವಾಗಿ ತಿದ್ದುಪಡಿ ಮಾಡಲಾಗಿದೆ.

**ಅರಣ್ಯ ಅಭಿವೃದ್ಧಿ ಶುಲ್ಕವನ್ನು ಲೆಕ್ಕಹಾಕುವುದಕ್ಕಾಗಿ ಇರುವ ನಿಯಮಗಳು:**

14.ಅರಣ್ಯ ಅಭಿವೃದ್ಧಿ ಶುಲ್ಕವನ್ನು ಲೆಕ್ಕಹಾಕುವುದಕ್ಕಾಗಿ ಇರುವ ನಿಯಮಗಳು ಅಥವಾ ಮಾರ್ಗಸೂಚಿಗಳನ್ನು ಸಹ ಅಂತಿಮಗೊಳಿಸಲಾಗಿದೆ. ಈ ನಿಯಮಗಳು 16ನೇ ಆಗಸ್ಟ 2008ರಿಂದ ಪೂರ್ವಾನ್ವಯವಾಗಿ ಅನ್ವಯವಾಗುತ್ತವೆ. ಅದಕ್ಕನುಸಾರವಾಗಿ ಪೂರ್ವಾನ್ವಯ ಪರಿಣಾಮದೊಂದಿಗೆ ಅಂಥ ನಿಯಮಗಳನ್ನು ಸೇರಿಸುವುದನ್ನು ವಿಧೇಯಕದ 3ನೇ ಖಂಡವು ಸಾಧ್ಯವನ್ನಾಗಿಸುತ್ತದೆ.

ಆದ್ದರಿಂದ ಈ ವಿಧೇಯಕ.

(2016ರ ವಿಧಾನಸಭೆಯ ವಿಧೇಯಕ ಸಂ.23, ಕಡತ ಸಂ.ಸಂವ್ಯಶಾಇ 32 ಶಾಸನ 2016).

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIIರ 17ಎ ಮತ್ತು 47ನೇ ನಮೂದು)

# 1964ರ [1][ಕರ್ನಾಟಕ ಅಧಿನಿಯಮ][1] ಸಂ. 5

*(1964ರ ಫೆಬ್ರುವರಿ ಇಪ್ಪತ್ತೇಳನೇ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಮೊದಲು ಪ್ರಕಟಿಸಲಾಗಿದೆ)*

# [1][ಕರ್ನಾಟಕ][1] ಅರಣ್ಯ ಅಧಿನಿಯಮ, 1963

*(1964 ಜನವರಿ ಇಪ್ಪಂತ್ತೆಂಟನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ಪಡೆದಿದೆ.)*

(1974ರ 23, 1976ರ 15, 1976ರ 50, 1978ರ 15, 1980ರ 14, 1981ರ 1, 1983 ರ 7, 1984 ರ 11, 1989 ರ 10, 1998 ರ 12, 2000ದ 20, 2001ರ 20, 2009ರ 24, 2015ರ 41 ಮತ್ತು 2016ರ 23, ಮೂಲಕ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯ][1]ದಲ್ಲಿ ಅರಣ್ಯಗಳಿಗೆ ಮತ್ತು ಅರಣ್ಯದ ಉತ್ಪನ್ನಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡಿಕರಿಸಲು ಮತ್ತು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

[1][ಕರ್ನಾಟಕ ರಾಜ್ಯ][1]ದಲ್ಲಿ ಅರಣ್ಯಗಳಿಗೆ ಮತ್ತು ಆರಣ್ಯದ ಉತ್ಪನ್ನಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡಿಕರಿಸುವುದು ಮತ್ತು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತದ ಗಣರಾಜ್ಯದ ಹದಿನಾಲ್ಕನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

## ಅಧ್ಯಾಯ-1
## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಅರಣ್ಯ ಅಧಿನಿಯಮ, 1963 ಎಂದು ಕರೆಯತಕ್ಕದ್ದು.

1.1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(2) ಇದು ಇಡೀ [1][ಕರ್ನಾಟಕ ರಾಜ್ಯ][1]ಕ್ಕೆ ಅನ್ವಯವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(3) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1]ದಂದು ಜಾರಿಗೆ ಬರತಕ್ಕದ್ದು.

1. ಅಧಿಸೂಚನೆಯ ಮೂಲಕ 01.06.1969 ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯ ಪಠ್ಯವು ಅಧಿನಿಯಮದ ಕೊನೆಯಲ್ಲಿದೆ.

**2. ಪರಿಭಾಷೆಗಳು.-(**1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಜಾನುವಾರು" ಎಂಬುದರಲ್ಲಿ ಹಸುಗಳು, ಹೋರಿಗಳು, ಎತ್ತುಗಳು, ಆನೆಗಳು, ಒಂಟೆಗಳು, ಎಮ್ಮೆ-ಕೋಣಗಳು, ಕುದುರೆಗಳು, ಹೆಣ್ಣು ಕುದುರೆಗಳು, ಬೀಜ ಒಡೆದ ಕುದುರೆಗಳು, ತಟ್ಟುಗಳು, ಗಂಡು ಕುದುರೆ ಮರಿಗಳು, ಹೆಣ್ಣು ಕುದುರೆ ಮರಿಗಳು, ಹೇಸರಗತ್ತೆಗಳು, ಕತ್ತೆಗಳು, ಹಂದಿಗಳು, ಟಗರುಗಳು, ಹೆಣ್ಣು ಕುರಿಗಳು, ಕುರಿಮರಿಗಳು, ಆಡುಗಳು ಮತ್ತು ಆಡು ಮರಿಗಳು ಒಳಗೊಳ್ಳುತ್ತವೆ.

[1][(1ಎ) "ಪರಿಗಣನೆ" ಎಂದರೆ, ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಇತರ ಮೊತ್ತವನ್ನು ಒಳಗೊಂಡಂತೆ ಅರಣ್ಯ ಉತ್ಪನ್ನವನ್ನು ಮಾರಾಟ ಮಾಡಿದ್ದಕ್ಕೆ ಮತ್ತು ಲೆಕ್ಕ ಹಾಕಿದ್ದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಅಥವಾ ಸ್ವೀಕರಿಸಬಹುದಾದ ದರ;][1]

1. 2016ರ ಅಧಿನಿಯಮ 23ರ ಮೂಲಕ 16.08.2008 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) "ಜಿಲ್ಲಾ ಅರಣ್ಯ" ಎಂಬುದರಲ್ಲಿ ಯಾವುದೇ ಮೀಸಲು ಅರಣ್ಯ ಅಥವಾ ಗ್ರಾಮದ ಅರಣ್ಯ ಪರಿಮಿತಿಗಳೊಳಗೆ ಒಳಗೊಂಡಿರದ ಅಥವಾ ಭೂಮಾಪನ ನಡೆದಾಗ ಉಚಿತ ಗೋಮಾಳವೆಂದು ಅಥವಾ ಯಾವುದೇ ಇತರ ಸಾರ್ವಜನಿಕ ಅಥವಾ ಸಾಮುದಾಯಿಕ ಉದ್ದೇಶಗಳಿಗಾಗಿ ಗೊತ್ತುಮಾಡಿರದ ಮತ್ತು ಸರ್ಕಾರದವರ ವಶದಲ್ಲಿರುವ ಎಲ್ಲಾ ಭೂಮಿಗಳು ಒಳಗೊಳ್ಳುತ್ತವೆ:

ಪರಂತು, ಹಾಗೆ ಗೊತ್ತುಮಾಡಿರುವುದನ್ನು ಮಾರ್ಪಡಿಸಲು ಅಥವಾ ಬದಿಗೊತ್ತಲು ಮತ್ತು ಅಂಥ ಯಾವುದೇ ಭೂಮಿಯನ್ನು ಮೀಸಲು, ಗ್ರಾಮ ಅಥವಾ ಜಿಲ್ಲಾ ಅರಣ್ಯವಾಗಿ ರೂಪಿಸಲು ಅಥವಾ ತಾನೂ ಸೂಕ್ತವೆಂದು ಭಾವಿಸುವಂಥ ಇನ್ನಾವುದೇ ಉದ್ದೇಶಕ್ಕಾಗಿ ಅದನ್ನು ಮುಡಿಪಾಗಿಡಲು ರಾಜ್ಯ ಸರ್ಕಾರವು ಸಕ್ಷಮವಾಗಿರತಕ್ಕದ್ದು.

(3) [1]["ಅರಣ್ಯ ಉಪ ಸಂರಕ್ಷಣಾಧಿಕಾರಿ"][1] ಎಂದರೆ, ಒಂದು ಅರಣ್ಯ ವಿಭಾಗದ ಮುಖ್ಯ ಅರಣ್ಯಾಧಿಕಾರಿ.

1. ಅಧಿಸೂಚನೆಯನುಸಾರ 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಠ್ಯವು ಅಧಿನಿಯಮದ ಕೊನೆಯಲ್ಲಿದೆ.

(4) "ಅರಣ್ಯ ವಿಭಾಗ" ಎಂದರೆ, ರಾಜ್ಯ ಸರ್ಕಾರವು ಅಥವಾ ನಿಯಮಿಸಲಾದಂಥ ಪ್ರಾಧಿಕಾರವು ಅಧಿಸೂಚನೆಯ ಮೂಲಕ ಹಾಗೆಂದು ಘೋಷಿಸಿದ ಯಾವುದೇ ಪ್ರದೇಶ;

(5) “ಅರಣ್ಯ ಅಪರಾಧ” ಎಂದರೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧ;

(6) “ಅರಣ್ಯ ಅಧಿಕಾರಿ” ಎಂದರೆ ರಾಜ್ಯ ಸರ್ಕಾರದ ಅಥವಾ ಅದರ ಆದೇಶಗಳ ಅಡಿಯಲ್ಲಿ [1][ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ, [2][ಅಪರ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ][2], ಮುಖ್ಯ ಸಂರಕ್ಷಣಾಧಿಕಾರಿ, ಅಪರ ಮುಖ್ಯ ಸಂರಕ್ಷಣಾಧಿಕಾರಿ][1], ಸಂರಕ್ಷಕ, ಉಪ ಸಂರಕ್ಷಕ, ಸಹಾಯಕ ಸಂರಕ್ಷಕ, ಅರಣ್ಯಗಳ ರೇಂಜರ್, ಫಾರೆಸ್ಟರ್, ಫಾರೆಸ್ಟ್ ಗಾರ್ಡ್ ಅಥವಾ ಅರಣ್ಯ ಕಾವಲುಗಾರನಾಗಿ ನೇಮಕಗೊಂಡ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಅಥವಾ ಆದೇಶದ ಅಡಿಯಲ್ಲಿ ಒಬ್ಬ ಅರಣ್ಯ ಅಧಿಕಾರಿಯಾಗಿ ಪ್ರಕಾರ್ಯ ನಿರ್ವಹಿಸಲು ನೇಮಕನಾದ ವ್ಯಕ್ತಿ;

1. 1989ರ ಅಧಿನಿಯಮ 10ರ ಮೂಲಕ 16.03.1989ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2001ರ ಅಧಿನಿಯಮ 20ರ ಮೂಲಕ 05.09.2002ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(7) “ಅರಣ್ಯ ಉತ್ಪನ್ನ” ಎಂಬುದು

(ಎ) ಅವು ಅರಣ್ಯದಲ್ಲಿ ದೊರೆತದ್ದಾಗಿರಲಿ ಅಥವಾ ಒಂದು ಅರಣ್ಯದಿಂದ ತಂದದ್ದಾಗಿರಲಿ ಅಥವಾ ಅಲ್ಲದಿರಲಿ, ಈ ಮುಂದಿನವುಗಳು, ಎಂದರೆ;

ಚೌಬೀನೆ, ಇದ್ದಿಲು, ಇಂಡಿಯನ್ ರಬ್ಬರ್, ಕಾಚು, [1][ಶ್ರೀಗಂಧ][1], ಲೂಟಿ ಕಾಯಿ (ಕಪ್ಪಾರಿನ್ ಮೂನಿ), ಮರದೆಣ್ಣೆ, ಶ್ರೀಗಂಧದೆಣ್ಣೆ, ರೆಸಿನ್, [2][ರಬ್ಬರ್, ಲ್ಯಾಟೆಕ್ಸ್, [3][XXX][3]][2] ನೈಸರ್ಗಿಕ ವಾರ್ನಿಷ್, ತೊಗಟೆ, ಅರಗು, ಮಹ್ವಾ ಅಥವಾ ಇಪ್ಪೆ (ಬ್ಯಾಸ್ಸಿಯಾ ಲಾಟಿಪೋಲಿಯಾ) ಇವುಗಳ ಹೂಗಳು ಮತ್ತು ಬೀಜಗಳು, ಪ್ರಾಸೋಪಿಕ್ ಜ್ಯಾಲಿಫ್ಲೋರಾ ಬೀಜ, ಕುತ್ ಮತ್ತು ಟಂಬುರ್ನಿ, ಅಥವಾ ಟುಪ್ರು (ಡಯಾಸ್ಪೈರಾಸ್ ಮೆಲೊನಾಕ್ಸೈಲಾನ್) ಎಲೆಗಳು, ರೋಷಾ (ಸಿಂಬೋಪೋಗಾನ್ ಮಾರ್ಟಿನಿ) ಹುಲ್ಲು ಮತ್ತು ಎಣ್ಣೆ ಮತ್ತು ಅಳಲೆಕಾಯಿಗಳು (ಟರ್ಮಿನೇಲಿಯಾ ಚೇಬ್ಯುಲಿಯಾ ಟರ್ಮಿನೇಲಿಯಾ ಬೆಲಿರಿಕಾ, ಮತ್ತು [4][ಫೈಲಾಂತಸ್ ಎಂಬ್ಲಿಕಾ, ರಾಮ ಪತ್ರೆ ಮತ್ತು ಸೀಗೇಕಾಯಿ)][4] ಮತ್ತು

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1998ರ ಅಧಿನಿಯಮ 12ರ ಮೂಲಕ 11.05.1998 ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.
4. ಅಧಿಸೂಚನೆಯ ಮೂಲಕ 1974ರ ಅಧಿನಿಯಮ 23ರ ಮೂಲಕ 16.09.1974 ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಠ್ಯವು ಅಧಿನಿಯಮದ ಕೊನೆಯಲ್ಲಿದೆ.

(ಬಿ) ಈ ಮುಂದಿನವುಗಳು ಅರಣ್ಯದಲ್ಲಿ ದೊರೆತಾಗ ಅಥವಾ ಅರಣ್ಯದಿಂದ ತಂದಾಗ, ಎಂದರೆ:-

(i) ಮರಗಳು ಮತ್ತು ಎಲೆಗಳು, ಹೂಗಳು ಮತ್ತು ಹಣ್ಣುಗಳು ಮತ್ತು ಈ ಹಿಂದೆ ಹೇಳದಿರುವ ಮರದ ಎಲ್ಲಾ ಭಾಗಗಳು ಅಥವಾ ಉತ್ಪನ್ನಗಳು;

(ii) ಮರವಲ್ಲದ ಗಿಡಗಳು (ಹುಲ್ಲು, ಬಳ್ಳಿಗಳು, ಜೊಂಡುಗಳು ಮತ್ತು ಹಾವಸೆ ಇವೂ ಸೇರಿ) ಅಂಥ ಗಿಡಗಳ ಎಲ್ಲಾ ಭಾಗಗಳು ಅಥವಾ ಉತ್ಪನ್ನಗಳು;

(iii) ವನ್ಯಮೃಗಗಳು ಮತ್ತು ನವಿಲುಗಳು ಮತ್ತು ಚರ್ಮಗಳು, ದಂತಗಳು, ಕೊಂಬುಗಳು, ಮೂಳೆಗಳು, ರೇಷ್ಮೆಗೂಡುಗಳು, ಜೇನು ಮತ್ತು ಮೇಣ ಮತ್ತು ವನ್ಯಮೃಗಗಳ, ನವಿಲುಗಳ ಮತ್ತು ಕೀಟಗಳ ಅಂತ ಎಲ್ಲಾ ಭಾಗಗಳು ಅಥವಾ ಉತ್ಪನ್ನಗಳು; ಮತ್ತು

(iv)ಸಸ್ಯಗಾರ (ಪೀಟ್), ಮೇಲ್ಮಣ್ಣು, ಬಂಡೆ ಮತ್ತು ಖನಿಜಗಳು, (ಸುಣ್ಣದ ಕಲ್ಲು ಸೇರಿ) ಜಂಬು ಮಣ್ಣು (ಲ್ಯಾಟೆರೈಟ್) ಖನಿಜದ ಎಣ್ಣೆಗಳು ಮತ್ತು ಗಣಿಗಳ ಅಥವಾ ಕಲ್ಲುಗಣಿಗಳ ಎಲ್ಲ ಉತ್ಪನ್ನಗಳು; ಮತ್ತು

[1][(ivಎ) ಕೊಕೋ ಬೀಜಗಳು ಅಥವಾ ಕಾಯಿಗಳು, ಗಾರ್ಸಿನಿಯಾ ಹಣ್ಣುಗಳು, [ಮುಳ್ಳಿಲ್ಲದ ಬಿದುರುಗಳು, ಹಾಲಮಡ್ಡಿ, ರಾಳಧೂಪ ಮತ್ತು ಕೈಧೂಪ;][1]

1. 1998ರ ಅಧಿನಿಯಮ 12ರ ಮೂಲಕ 11.05.1998 ಜಾರಿಗೆ ಬರುವಂತೆ ಸೇರಿಸಲಾಗಿದೆ.

(v) ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಅರಣ್ಯ ಉತ್ಪನ್ನಗಳೆಂದು ಘೋಷಿಸಬಹುದಾದ ಅರಣ್ಯದ ಇತರ ಉತ್ಪನ್ನಗಳು.

-ಒಳಗೊಳ್ಳುತ್ತವೆ.

(8) "ರಾಜ್ಯ ಸರ್ಕಾರದ ವಶದಲ್ಲಿರುವ ಭೂಮಿ", ಎಂದರೆ, ಯಾವ ಭೂಮಿಯ ಸಂಬಂಧದಲ್ಲಿ ಯಾವ ವ್ಯಕ್ತಿಯೂ,-

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಉಪಯೋಗದ ಅಥವಾ ಅನುಭೋಗದಾರಿಕೆಯ ಖಾಯಂ ಆದ, ವಂಶಾನುಕ್ರಮವಾದ ಮತ್ತು ವರ್ಗಾಯಿಸಬಹುದಾದ ಹಕ್ಕನ್ನು; ಅಥವಾ

(ಬಿ) ಸರ್ಕಾರವು ಅಥವಾ ಅದರ ಪರವಾಗಿ ಮಾಡಿಕೊಂಡ ಅಥವಾ ಮುಂದುವರೆಸಿದ ಯಾವುದೇ ಅನುದಾನದಿಂದ ಅಥವಾ ಗುತ್ತಿಗೆಯಿಂದ ಉಂಟಾದ ಯಾವುದೇ ಹಕ್ಕನ್ನು,

- ಪಡೆದುಕೊಂಡಿಲ್ಲವೋ ಅಂಥ ಭೂಮಿ;

(9) “ಮ್ಯಾಜಿಸ್ಟ್ರೇಟ್” ಎಂದರೆ, ಒಂದನೇ ಅಥವಾ ಎರಡನೇ ದರ್ಜೆಯ ಮ್ಯಾಜಿಸ್ಟ್ರೇಟು;

(10) “ಅಧಿಸೂಚನೆ” ಎಂದರೆ, ಸರ್ಕಾರೀ ರಾಜ್ಯಪತ್ರಗಳಲ್ಲಿ ಪ್ರಕಟಿಸಲಾದ ಒಂದು ಅಧಿಸೂಚನೆ;

(11) “ಮಾಲೀಕ” ಎಂಬುದರಲ್ಲಿ ಯಾವುದಾದರೂ ಸ್ವತ್ತಿನ ಸಂಬಂಧದಲ್ಲಿ ಅದರ ಮೇಲ್ವಿಚಾರಣೆಯನ್ನು ಅಥವಾ ಪ್ರಭಾರವನ್ನು ಹೊಂದಿರುವ ಪ್ರತಿಪಾಲಕ ನ್ಯಾಯಾಲಯವೂ (ಕೋರ್ಟ್ ಆಫ್ ವಾರ್ಡ್ಸ್ ) ಒಳಗೊಳ್ಳುತ್ತದೆ;

(12) “ನಿಯಮಿಸಲಾದುದು” ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಂದ ನಿಯಮಿಸಲಾದುದು;

(13) “ರಕ್ಷಿತ ಅರಣ್ಯ” ಎಂದರೆ, ಸರ್ಕಾರದ ವಶದಲ್ಲಿರುವ ಮತ್ತು 33ನೇ ಪ್ರಕರಣದ (2) ನೇ ಉಪ ಪ್ರಕರಣದ (ii)ನೇ ಖಂಡದ ಅಡಿಯಲ್ಲಿ ರಕ್ಷಿತ ಅರಣ್ಯವೆಂದು ಘೋಷಿಸಲಾದ ಪ್ರದೇಶ;

(14) “ಮೀಸಲು ಅರಣ್ಯ” ಎಂದರೆ ಈ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಹಾಗೆಂದು ನಿರ್ಣಯಿಸಲಾದ ಮತ್ತು ಅಧಿಸೂಚಿಸಲಾದ ಯಾವುದೇ ಭೂಮಿ;

(15) “ಮೀಸಲು ಮರಗಳು” ಎಂದರೆ, ತೇಗ ಅಥವಾ ಸಾಗವಾನಿ (ಟೆಕ್ಟೋನಾ ಗ್ರಾಂಡಿಸ್) ಕರಿಮರ ಅಥವಾ ಬೀಟೆ (ದಾಲಿರ್ಜಿಯಾ ಲ್ಯಾಟಿಫೋಲಿಯ) ಕೀನೊ ಅಥವಾ ಹೊನ್ನೆ (ಟೀರೋಕಾರ್ಪಸ್ ಮಾರ್ಸೋಪಿಯಮ್), ಮೈರೋಬೋಲಮ್ ಅಥವಾ ಗಾಲನಟ್ ಅಥವಾ ಅಳಲೆ (ಟರ್ಮಿನಾಲಿಯಾ ಚಿಬೂಲಾ), ವಾಯಿಟ ಸೀಡಾರ್ ಅಥವಾ ದೇವಗರ್ಗ (ಡೈಸೋಕ್ಸೈಲಂ ಮಲಬಾರಿಕಂ) ಜಾಲರಿ (ಷುರಿಯಾ ಲಾಸ್ಸಿಫೆರಾ) ಬೇಂಟೀಕ್ ಅಥವಾ ನಂದಿ (ಲೆಕಸೆನ್ಸ್ರಾಮಿಮಿಯಾ ಲಾನ್ಸಿಯಲಾಟಾ) ಸ್ಯಾಟಿನ್ ಉಡ್ ಅಥವಾ ಹುರಗಲು (ಕ್ಲೊರೊಗೆಲಾನ್ಲ ಅವೈಟಿನಿಯಾ) ಸೀಗೆ ಅಥವಾ ಅಂಟವಾಳ (ಸಪಿಂಡಸ್ ಎಮಾರ್ಜಿನೆಟಸ್), ಕರಾಚಿಕಮರ (ಹಾರ್ಡವಿಕ್ಕಿಯನ್ನಾಟಾ), ತೈಲ ವೃಕ್ಷಗಳು ಅಥವಾ ಎಣ್ಣೆ ಮರ (ಹಾರ್ಡವಿಕ್ಕಿಯಾ ಪಿನ್ನಾಟ) ಹೆಬ್ಬಲಸು (ಆರ್ಟೋಕಾರ್ಪಸ್ ಪಿಸೂರ್ಟ್) ಏಬೋನೆ ಅಥವಾ ಕರೀಮರ ಅಥವಾ ಬಾಲೆ (ಡೆಪ್ಯೆರಾಸ್ ಬೀನಮ್), ಐರನ್ ಉಡ್ಮರ ಅಥವಾ ಜಂಬಿ (ಕ್ಸೈಲಿಯಾ ಡೋಲ್ಬ್ರೀ ಫಾರ್ಮನ್) ಪೂನ್ಸ್ ಫಾರ್ ಅಥವಾ ಸುರಹೊನ್ನೆ (ಖಿಲೊಫೈಲಮ್ ಎಲಾಟಮ್), ಚಿಟಗಾಂಗ್ ಮರ (ಚಿಕ್ರಸಿಯಾ ಟುಬೊಲಾರಿಸ್), ಕಿರಾಲ ಬೋಗಿ (ಹೋಪಿಯಾ

ಪಾರ್ಮಿಫ್ಲೋರ್), ಕಾಚು ಅಥವಾ ಕಗ್ಗಲಿ (ಆಕಾಷಿಯಾ ಕಟಾಚ್ಯು), ಬೋರೆ (ಜಿಜಿಫಸ್ ಜುಜಿಬಾ) ಸಗಡ (ಸ್ಟೆಲಿಚೀರಾ ಟ್ರೆಚುಗಾ) ಯತ್ತೆಗಾ (ವಾನ್ಟ್ರೇಕ್), ಆಡನಾಕೋರ್ಡಿ ಪೋಲಿಯಾ ಮೋಯಾ), ಹುಣಿಸೆ (ಇಂಡಿಕಾ) ಕರಿ, ಮತ್ತಿ, ನೆಲಮಡ್ಡಿ (ಟರ್ಮಿನೇಲಿಯಾ ಟೊಮೆಂಚೋಸಾ), ಮಾವು (ಮಗ್ನೈಗಿಫೇರಾ ಇಂಡಿಕಾ), ಮಫೀನ (ಸ್ಪೋಜೋದಾಸ್ ನಕ್ಲಮಾಮಿಕ), ಪನ್ಸೆ (ಆರ್ಲೋಕಾರ್ಪಸ್ ಇಂಟೆಗ್ರಿ ಓಲಿಯಾ), ಮತ್ತಿ ಟರ್ಮಿನೇಲಿಯಾ (ಅರ್ಜುನ), ಧೂಪ (ಅಪ್ಲಾಮಿಹಿಸ್ ಮಲಬೆರಿಕಾ) ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಮೀಸಲಾದ ಮರಗಳೆಂದು ಘೋಷಿಸಬಹುದಾದ ಇತರ ಮರಗಳು;

(16) "ನದಿ" ಎಂಬುದರಲ್ಲಿ, ಸ್ವಾಭಾವಿಕವಾದ ಅಥವಾ ಕೃತಕವಾದ ಯಾವುದೇ ತೊರೆ, ಕಾಲುವೆ, ಕೊರಕಲು ಅಥವಾ ಇತರೆ ನಾಲೆ ಇವೂ ಒಳಗೊಳ್ಳುತ್ತವೆ.

(17) "ನಿಯಮ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ನಿಯಮ;

[1][(18) "ಗಂಧದ ಮರ" ಎಂದರೆ ಒಂದು ಗಂಧದ ಮರದ ಯಾವುದೇ ಭಾಗ, (ಸಂಟಾಲಂ ಆಲ್ಬಂ) ಮತ್ತು ಇದು ಗಂಧದ ಮರದ ತೊಗಟೆ, ಎಲೆಗಳು ಮತ್ತು ಚೀಗು ಬಂದಿರಲಿ, ಬಂದಿಲ್ಲದೆ ಇರಲಿ, ಮತ್ತು ಬೇರುಗಳ, ಕೊರಡುಗಳ, (ಗರಗಸದಿಂದ ಕೊಯ್ದಿರಲಿ ಅಥವಾ ಇಲ್ಲದೇ ಇರಲಿ ತುಂಡುಗಳು (ಬಣ್ಣ ಹಾಕಿರಲಿ ಅಥವಾ ಹಾಕದಿರಲಿ) ಮತ್ತು ಬೇರೆ ಯಾವುದೇ ಪದಾರ್ಥ ಸೇರಿಸಿರಲಿ ಇಲ್ಲದೇ ಇರಲಿ), ಬೆಲ್ಲೆಗಳು, ಗರಗಸದ ಪುಡಿ, ಎಣ್ಣೆ ತೆಗೆದ ಮರದ ಚಕ್ಕೆಗಳು ಅಥವಾ ತಿರುಳಿನ ರೂಪದಲ್ಲಿರಲಿ, ಗಂಧದ ಮರದ ಬೇರುಗಳನ್ನು ಹಾಗೂ [2][ಗಂಧದ ಎಣ್ಣೆಯನ್ನು][2] ಒಳಗೊಳ್ಳುತ್ತದೆ. [3][ಆದರೆ ಗಂಧದ ಮರದ ಕರಕುಶಲ ವಸ್ತುಗಳ ರೂಪದಲ್ಲಿ ತಯಾರಿಸಲಾದ ಗಂಧದ ಮರವನ್ನು ಒಳಗೊಳ್ಳುವುದಿಲ್ಲ.][3]][1]

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(19) "ತಹಶೀಲ್ದಾರ್" ಎಂದರೆ, ಒಂದು ತಾಲ್ಲೂಕಿನ ತಹಶೀಲ್ದಾರ;

(20) "ಚೌಬೀನೆ" ಎಂಬುದರಲ್ಲಿ ತಾನೇ ಬಿದ್ದ ಅಥವಾ ಕತ್ತರಿಸಿ ಬೀಳಿಸಲಾದ ಮರಗಳು ಮತ್ತು ಯಾವುದೇ ಉದ್ದೇಶಕ್ಕಾಗಿ, ಕಡಿದ ಅಥವಾ ಗರಗಸದಿಂದ ಕೊಯ್ದ ಅಥವಾ ರೂಪಿಸಿದ ಅಥವಾ ಟೊಳ್ಳು ಮಾಡಿದ ಅಥವಾ ಹಾಗೆ ಮಾಡಿರದ ಎಲ್ಲಾ ಮರವು ಸೇರಿರುತ್ತವೆ;

(21) "ಮರ" ಎಂಬುದರಲ್ಲಿ ತಾಳೆ ಮರಗಳು, ಬಿದಿರು, ಕಡಿದ ಮರದ ಮೋಟು, ಕುರಚಲ ಗಿಡವೂ ಮತ್ತು ಬೆತ್ತಗಳು ಒಳಗೊಳ್ಳುತ್ತವೆ;

(22) "ಗ್ರಾಮ ಅರಣ್ಯ" ಎಂದರೆ, ಈ ಅಧಿನಿಯಮದ **III**ನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಹಾಗೆ ಗ್ರಾಮ ಅರಣ್ಯವೆಂಬುದಾಗಿ ಅಧಿಸೂಚಿಸಲಾದ ಯಾವುದೇ ಭೂಮಿ.

[1][(23) "ಗ್ರಾಮ ಅರಣ್ಯ ಸಮಿತಿ" ಎಂದರೆ, ಪ್ರಕರಣ 31ಎ ಮೇರೆಗೆ ರಚಿಸಲಾದ ಗ್ರಾಮ ಅರಣ್ಯ ಸಮಿತಿ.][1]

1. 1998ರ ಅಧಿನಿಯಮ 12ರ ಮೂಲಕ 11.05.1998 ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ-II

## ಮೀಸಲು ಅರಣ್ಯಗಳು

**3. ಮೀಸಲು ಅರಣ್ಯಗಳನ್ನು ನಿರ್ಮಿಸಲು ಅಧಿಕಾರ.-** ರಾಜ್ಯ ಸರ್ಕಾರವು, ಸರ್ಕಾರದ ಸ್ವತ್ತಾಗಿರುವ ಅಥವಾ ಸರ್ಕಾರವು ಹಕ್ಕುಸ್ವಾಮ್ಯಗಳನ್ನು ಹೊಂದಿರುವ ಅಥವಾ ಅದರ ಅರಣ್ಯ ಉತ್ಪನ್ನವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಪಡೆದುಕೊಳ್ಳಲು ಸರ್ಕಾರಕ್ಕೆ ಹಕ್ಕುಳ್ಳ ಯಾವುದಾದರೂ ಭೂಮಿಯನ್ನು ಇನ್ನೂ ಮುಂದೆ ಉಪಬಂಧಿಸಲಾದ ರೀತಿಯಲ್ಲಿ ಒಂದು ಮೀಸಲು ಅರಣ್ಯವನ್ನಾಗಿ ರಚಿಸಬಹುದು.

**4. ಸರ್ಕಾರದಿಂದ ಅಧಿಸೂಚನೆ.-** (1) ಯಾವುದೇ ಭೂಮಿಯನ್ನು ಮೀಸಲು ಅರಣ್ಯವಾಗಿ ನಿರ್ಮಾಣ ಮಾಡಬೇಕೆಂದು ತೀರ್ಮಾನಿಸಿದಾಗ ರಾಜ್ಯ ಸರ್ಕಾರವು,-

(ಎ) ಅಂಥ ಭೂಮಿಯನ್ನು ಒಂದು ಮೀಸಲು ಅರಣ್ಯವಾಗಿ ರಚಿಸಬೇಕೆಂದು ತೀರ್ಮಾನಿಸಿರುವುದಾಗಿ ಘೋಷಿಸುವ;

(ಬಿ) ಅಂಥ ಭೂಮಿ ಇರುವ ಸ್ಥಳವನ್ನು ಮತ್ತು ಅದರ ಪರಿಮಿತಿಗಳನ್ನು ಸಾದ್ಯವಾದಷ್ಟು ಸ್ಪಷ್ಟವಾಗಿ ನಿರ್ದಿಷ್ಟ ಪಡಿಸುವ; ಮತ್ತು

(ಸಿ) ಅಂಥ ಪರಿಮಿತಿಯಲ್ಲಿರುವ ಯಾವುದೇ ಭೂಮಿಯಲ್ಲಿ ಇಲ್ಲವೇ ಅದರ ಮೇಲೆ ಅಥವಾ ಯಾವುದೇ ಅರಣ್ಯದ ಉತ್ಪನ್ನದಲ್ಲಿ ಅಥವಾ ಅದರ ಮೇಲೆ ಯಾವೊಬ್ಬ ವ್ಯಕ್ತಿಯ ಕ್ಲೇಮು ಮಾಡಿರುವ ಅಥವಾ ಅಂಥ ಯಾವೊಬ್ಬ ವ್ಯಕ್ತಿಯ ಪರವಾಗಿ ಇರುವುದಾಗಿ ಆರೋಪಿತವಾಗಿರುವ ಯಾವುದೇ ಹಕ್ಕುಗಳ ಅಸ್ತಿತ್ವದ, ಸ್ವರೂಪ ಮತ್ತು ವ್ಯಾಪ್ತಿಯ ಸಂಬಂಧದಲ್ಲಿ ವಿಚಾರಣೆ ನಡೆಸಲು ಮತ್ತು ಅವುಗಳನ್ನು

ನಿರ್ಧರಿಸಲು ಮತ್ತು ಈ ಅಧ್ಯಾಯದಲ್ಲಿ ಉಪಬಂಧಿಸಲಾದಂತೆ ವ್ಯವಹರಿಸಲು ಒಬ್ಬ ಅಧಿಕಾರಿಯನ್ನು (ಇನ್ನೂ ಮುಂದೆ ಅರಣ್ಯ ವ್ಯವಸ್ಥಾಪನಾ ಅಧಿಕಾರಿ ಎಂದು ಕರೆಯಲಾಗುತ್ತದೆ)

-ನೇಮಕ ಮಾಡುವ ಒಂದು ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

**ವಿವರಣೆ:** (ಬಿ) ಖಂಡದ ಉದ್ದೇಶಕ್ಕಾಗಿ ಅರಣ್ಯದ ಪರಿಮಿತಿಗಳನ್ನು, ರಸ್ತೆಗಳ, ನದಿಗಳ, ಸೇತುವೆಗಳ ಅಥವಾ ಚೆನ್ನಾಗಿ ಗೊತ್ತಿರುವ ಅಥವಾ ಸುಲಭವಾಗಿ ತಿಳಿದುಕೊಳ್ಳಬಹುದಾದ ಇತರ ಗಡಿಗಳ ಮೂಲಕ ವಿವರಿಸುವುದು ಸಾಕಷ್ಟಾಗಿರತಕ್ಕದ್ದು.

(2) (1)ನೇ ಉಪ ಪ್ರಕರಣದ (ಸಿ) ಖಂಡದ ಅಡಿಯಲ್ಲಿ ನೇಮಕ ಮಾಡಲಾದ ಅಧಿಕಾರಿಯು, ಅರಣ್ಯ ವ್ಯವಸ್ಥಾಪನಾ ಅಧಿಕಾರಿಯ ಹುದ್ದೆಯ ಹೊರತಾಗಿ ಅರಣ್ಯ ಇಲಾಖೆಯ ಇತರ ಯಾವುದೇ ಹುದ್ದೆಯಲ್ಲಿ ಇರದಿರುವ ವ್ಯಕ್ತಿಯಾಗಿರತಕ್ಕದ್ದು. ಆದರೆ ಈ ಅಧ್ಯಾಯದ ಅಡಿಯಲ್ಲಿ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು ನಡೆಸತಕ್ಕ ವಿಚಾರಣೆಯಲ್ಲಿ ರಾಜ್ಯ ಸರ್ಕಾರವು ತನ್ನನ್ನು ಪ್ರತಿನಿಧಿಸಲು ಒಬ್ಬ ಅರಣ್ಯ ಅಧಿಕಾರಿಯನ್ನು ನೇಮಕ ಮಾಡಬಹುದು.

**5. ಅರಣ್ಯ ವ್ಯವಸ್ಥಾಪನಾ ಅಧಿಕಾರಿಯಿಂದ ಉದ್ಘೋಷಣೆ.-** 4ನೇ ಪ್ರಕರಣದ ಅಡಿಯಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸಿದಾಗ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ಅಂಥ ಅಧಿಸೂಚನೆಯಲ್ಲಿ ಒಳಗೊಂಡಿರುವ ಯಾವುದೇ ಭಾಗವು ಇರುವ ಪ್ರತಿಯೊಂದು ತಾಲೂಕಿನ ಮುಖ್ಯ ಸ್ಥಳದಲ್ಲಿ ಮತ್ತು ಅಂಥ ಭೂಮಿಯ ಅಕ್ಕಪಕ್ಕದಲ್ಲಿರುವ ಪ್ರತಿಯೊಂದು ಪಟ್ಟಣ ಮತ್ತು ಗ್ರಾಮದಲ್ಲಿ ಕನ್ನಡ ಭಾಷೆಯಲ್ಲಿ ಮತ್ತು ಆ ಪ್ರದೇಶದ ಇತರೆ ಯಾವುದೇ ಪ್ರಾದೇಶಿಕ ಭಾಷೆಯಲ್ಲಿ ಒಂದು ಉದ್ಘೋಷಣೆಯನ್ನು ಪ್ರಕಟಿಸತಕ್ಕದ್ದು, ಅದರಲ್ಲಿ,-

(ಎ) ಉದ್ದೇಶಿತ ಅರಣ್ಯದ ಸ್ಥಳವನ್ನು ಮತ್ತು ಗಡಿಗಳನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ವಿವರಿಸತಕ್ಕದ್ದು;

(ಬಿ) 6ನೇ ಪ್ರಕರಣದ ಉಪಬಂಧಗಳ ಸಾರಾಂಶವನ್ನು ಪ್ರಕಟಿಸತಕ್ಕದ್ದು.

(ಸಿ) ಅಂಥ ಅರಣ್ಯವು ಮೀಸಲು ಅರಣ್ಯವೆಂದು ಉಪಬಂಧಿಸಲ್ಪಟ್ಟ ಆನಂತರ ಮುಂದೆ ಹೇಳಿರುವಂತೆ, ಆ ಬಗ್ಗೆ ಉಂಟಾಗಬಹುದಾದ ಪರಿಣಾಮಗಳನ್ನು ವಿವರಿಸತಕ್ಕದ್ದು; ಮತ್ತು

(ಡಿ) ಅಂಥ ಘೋಷಣೆಯನ್ನು ಪ್ರಕಟಿಸುವ ದಿನಾಂಕದಿಂದ ಮೂರು ತಿಂಗಳಿಗಿಂತ ಕಡಿಮೆಯಲ್ಲದ ಅವಧಿಯನ್ನು ನಿರ್ದಿಷ್ಟಪಡಿಸಿ ಮತ್ತು 4ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಥವಾ ನಮೂದಿಸಲಾದ ಯಾವುದೇ ಹಕ್ಕನ್ನು ಕ್ಲೇಮು ಮಾಡುವ ಅಥವಾ ಕ್ಲೇಮನ್ನು ಸ್ಥಾಪಿಸುವ ಪ್ರತಿಯೊಬ್ಬ ವ್ಯಕ್ತಿಯು ಇಂಥ ಹಕ್ಕಿನ ಅಥವಾ ಕ್ಲೇಮಿನ (ಯಾವುದಾದರೂ ಇದ್ದರೆ) ಸ್ವರೂಪವನ್ನು ನಿರ್ದಿಷ್ಟ ಪಡಿಸುವ ಒಂದು ಲಿಖಿತ ನೋಟೀಸನ್ನು ಅಂಥ ಅವಧಿಯೊಳಗಾಗಿ ಆ ಅಧಿಕಾರಿಗೆ ಸಲ್ಲಿಸಬೇಕೆಂದು ಅಥವಾ ಅಂಥ ಅವಧಿಯೊಳಗಾಗಿ ಅವರ ಮುಂದೆ ಹಾಜರಾಗಿ ಅಂಥ ಹಕ್ಕಿನ ಅಥವಾ ಕ್ಲೇಮಿನ ಸ್ವರೂಪವನ್ನು ತಿಳಿಸಬೇಕೆಂದು ಮತ್ತು ಈ ಸಂದರ್ಭಗಳ ಪೈಕಿ ಯಾವುದೇ ಸಂದರ್ಭದಲ್ಲಿ ಈ ಬಗ್ಗೆ ತನ್ನನ್ನು ಸಮರ್ಥಿಸಿಕೊಳ್ಳಲು ಅಗತ್ಯವಾದ ಎಲ್ಲಾ ದಸ್ತಾವೇಜುಗಳನ್ನು ಹಾಜರು ಮಾಡಬೇಕೆಂದೂ ಅಂಥ ವ್ಯಕ್ತಿಗೆ ಅಗತ್ಯಪಡಿಸತಕ್ಕದ್ದು.

ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ಮೀಸಲು ಅರಣ್ಯವನ್ನು ನಿರ್ಮಿಸಬೇಕೆಂದು ಉದ್ದೇಶಿಸಿದಂತಹ ಭೂಮಿಯಲ್ಲಿರುವ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದಾದರೂ ಭೂಮಿಯ ಮಾಲೀಕನೆಂದು ಅಥವಾ ಅನುಭೋಗದಾರನೆಂದು ಗೊತ್ತಿರುವ ಅಥವಾ ಹೇಳಲಾಗುವ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಅವನು ಮಾನ್ಯ ಮಾಡಿದ ಅವನ ಏಜೆಂಟನಿಗೆ ಅಥವಾ ವ್ಯವಸ್ಥಾಪಕನಿಗೆ ಅದೇ ಅರ್ಥವುಳ್ಳ ಒಂದು ನೋಟೀಸನ್ನು ನೀಡತಕ್ಕದ್ದು, ಅಂಥ ಭೂಮಿಯು ಇರುವ ಜಿಲ್ಲೆ ಪರಿಮಿತಿಗಳ ಹೊರಗೆ ವಾಸಿಸುವ ವ್ಯಕ್ತಿಗಳಿಗೆ ಇಂಥ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಬಹುದು.

**6. ಅರಣ್ಯ ಹಕ್ಕು ಪ್ರಾಪ್ತಿಗೆ ಪ್ರತಿಬಂಧ.-** (1) 4ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ಆನಂತರ ಸರ್ಕಾರದಿಂದ ಅದರ ಪರವಾಗಿ ಅಥವಾ ಅಧಿಸೂಚನೆ ಹೊರಡಿಸುವಾಗ ಯಾರಲ್ಲಿ ಅಂತಹ ಹಕ್ಕು ಅಥವಾ ಅಂತಹ ಹಕ್ಕನ್ನೂ ಸೃಜಿಸುವ ಅಧಿಕಾರ ನಿಹಿತವಾಗಿತ್ತೋ ಅಂತಹ ವ್ಯಕ್ತಿ ಅಥವಾ ಮಾಡಿಕೊಂಡ ಕರಾರಿನ ಮೂಲಕವಾಗಿ ಅಲ್ಲದೆ ಅಂತಹ ಅಧಿಸೂಚನೆಯಲ್ಲಿ ಒಳಗೊಂಡ ಭೂಮಿಯಲ್ಲಿ ಅಥವಾ ಅದರ ಮೇಲೆ ಯಾವ ಹಕ್ಕೂ ಯಾರಿಗೂ ಪ್ರಾಪ್ತವಾಗತಕ್ಕದ್ದಲ್ಲ ಮತ್ತು ಇದರಲ್ಲಿ ಇನ್ನೂ ಮುಂದೆ ಉಪಬಂಧಿಸಿದುದರ ಹೊರತಾಗಿ ಅಂಥ ಭೂಮಿಯ ಮೇಲೆ ಯಾವುದೇ ಹೊಸ ಮನೆಯನ್ನು ಕಟ್ಟತಕ್ಕದ್ದಲ್ಲ ಮತ್ತು ವ್ಯಾಪಾರದ ಅಥವಾ ಉತ್ಪಾದನೆಯ ಉದ್ದೇಶಕ್ಕಾಗಿ ಯಾವುದೇ ಮರಗಳನ್ನು ಕಡಿಯತಕ್ಕದ್ದಲ್ಲ. ರಾಜ್ಯ ಸರ್ಕಾರದ ಪೂರ್ವ

ಮಂಜೂರಾತಿಯಿಲ್ಲದೆ ಅಂಥ ಭೂಮಿಯ ಸಂಬಂಧದಲ್ಲಿ ಯಾವುದೇ ಪಟ್ಟಾವನ್ನು ಅಥವಾ ಅನುಭೋಗದ ಹಕ್ಕನ್ನು ಮಂಜೂರು ಮಾಡತಕ್ಕದ್ದಲ್ಲ ಮತ್ತು ಅಂಥ ಮಂಜೂರಾತಿ ಇಲ್ಲದೆ ನೀಡಲಾದ ಪ್ರತಿಯೊಂದು ಪಟ್ಟಾ ಅಥವಾ ಅನುಭೋಗದ ಹಕ್ಕು ಶೂನ್ಯ ಮತ್ತು ಅಸಿಂಧುವಾಗತಕ್ಕದ್ದು.

(2) ಅರಣ್ಯ ವ್ಯವಸ್ಥಾಪನಾ ಅಧಿಕಾರಿಯ ಲಿಖಿತ ಅನುಮತಿಯ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯಕ್ಕೆ ಈ ಪ್ರಕರಣದಲ್ಲಿರುವುದು ಯಾವುದೂ ಪ್ರತಿಬಂಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

(3) ಯಾವುದೇ ಸಿವಿಲ್ ನ್ಯಾಯಾಲಯವು, 4ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯ ಮತ್ತು 17ನೇ ಪ್ರಕರಣದ ಅಡಿಯಲ್ಲಿ ಹೊರಡಿಸಬೇಕಾದ ಅಂತಿಮ ಅಧಿಸೂಚನೆಯ ಪ್ರಕಟಣೆಯ ದಿನಾಂಕಗಳ ನಡುವಿನ ಅವಧಿಯಲ್ಲಿ 4ನೇ ಪ್ರಕರಣದ ಅಡಿಯಲ್ಲಿ ಒಳಗೊಂಡ ಅಧಿಸೂಚನೆಯಲ್ಲಿರುವ ಯಾವುದೇ ಭೂಮಿಯಲ್ಲಿ ಅಥವಾ ಭೂಮಿಯ ಮೇಲೆ ಅಥವಾ ಯಾವುದೇ ಭೂಮಿಯ ಅರಣ್ಯ ಉತ್ಪನ್ನದ ಬಗ್ಗೆ ಯಾವುದೇ ಹಕ್ಕನ್ನು ಸ್ಥಾಪಿಸುವ ಬಗ್ಗೆ ಯಾವುದೇ ದಾವೆಯನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**7. ಅರಣ್ಯ ವ್ಯವಸ್ಥಾಪನಾ ಅಧಿಕಾರಿಯಿಂದ ವಿಚಾರಣೆ.-** ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, 5ನೇ ಪ್ರಕರಣದ (ಡಿ) ಖಂಡದ ಅಡಿಯಲ್ಲಿ ನೀಡಲಾಗಿದ್ದ ಎಲ್ಲಾ ಹೇಳಿಕೆಗಳನ್ನು ಬರೆದುಕೊಳ್ಳತಕ್ಕದ್ದು ಮತ್ತು ಅನುಕೂಲವಾದ ಯಾವುದಾದರೊಂದು ಸ್ಥಳದಲ್ಲಿ, ಆ ಪ್ರಕರಣದ ಅಡಿಯಲ್ಲಿ ಸೂಕ್ತವಾಗಿ ಮಂಡಿಸಿದ ಎಲ್ಲಾ ಕ್ಲೇಮುಗಳ ಬಗ್ಗೆ ಮತ್ತು 4ನೇ ಪ್ರಕರಣದಲ್ಲಿ ಹೇಳಲಾದ ಮತ್ತು 5ನೇ ಪ್ರಕರಣದ ಅಡಿಯಲ್ಲಿ ಕ್ಲೇಮು ಮಾಡಲಾಗದಿದ್ದ ಯಾವುದೇ ಹಕ್ಕುಗಳು ಅಸ್ತಿತ್ವ ಮತ್ತು ವ್ಯಾಪ್ತಿಯ ಬಗ್ಗೆ, ಅವುಗಳನ್ನು ಸರ್ಕಾರದ ದಾಖಲೆಗಳಿಂದ ಮತ್ತು ಅವುಗಳ ಬಗ್ಗೆ ತಿಳಿದಿರಬಹುದಾದ ಯಾವೊಬ್ಬ ವ್ಯಕ್ತಿಯ ಸಾಕ್ಷ್ಯದಿಂದ ಕಂಡುಹಿಡಿಯ ಬಹುದಾದಷ್ಟರ ಮಟ್ಟಿಗೆ, ವಿಚಾರಣೆ ಮಾಡತಕ್ಕದ್ದು.

ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು ಅದೇ ಕಾಲಕ್ಕೆ, 4ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ, ನೇಮಿಸಲಾದ ಅರಣ್ಯ ಅಧಿಕಾರಿಯು, ಯಾರಾದರೂ ಇದ್ದರೆ, ಅಂಥ ಅಧಿಕಾರಿಯು, ಅಂಥ ಯಾವುದೇ ಅಧಿಕಾರದ ಕ್ಲೇಮಿನ ಬಗ್ಗೆ ಮಾಡಬಹುದಾದ ಯಾವುದೇ ಆಕ್ಷೇಪಣೆಯನ್ನು ಮತ್ತು ಅಂಥ ಯಾವುದೇ ಹಕ್ಕಿನ ಅಸ್ತಿತ್ವ ಮತ್ತು ವ್ಯಾಪ್ತಿಯ ಬಗ್ಗೆ

ಕೊಡಬಹುದಾದ ಯಾವುದೇ ಮಾಹಿತಿಯನ್ನು ಪರಿಗಣಿಸತಕ್ಕದ್ದು ಮತ್ತು ಅವುಗಳನ್ನು ದಾಖಲ್ಮಾಡತಕ್ಕದ್ದು.

**8. ಅರಣ್ಯ ವ್ಯವಸ್ಥಾಪನಾ ಅಧಿಕಾರಿಯ ಅಧಿಕಾರಗಳು.-** ಅಂಥ ವಿಚಾರಣೆಯ ಉದ್ದೇಶಕ್ಕಾಗಿ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸಬಹುದು, ಎಂದರೆ:-

(i) ಯಾವುದೇ ಭೂಮಿಯಲ್ಲಿ ಸ್ವಯಂ ತಾನೆ ಅಥವಾ ಸದರಿ ಉದ್ದೇಶದ ಸಲುವಾಗಿ ತನ್ನಿಂದ ಪ್ರಾಧಿಕೃತನಾದ ಯಾವೊಬ್ಬ ಅಧಿಕಾರಿಯಿಂದ, ಪ್ರವೇಶ ಮಾಡುವ ಮತ್ತು ಅದರ ಭೂಮಾಪನ ಮಾಡುವ, ಅದನ್ನು ಗುರುತಿಸುವ ಮತ್ತು ಅದರ ಭೂಪಟವನ್ನು ತಯಾರಿಸುವ ಅಧಿಕಾರ; ಮತ್ತು

(ii) ದಾವೆಗಳ ಅಧಿವಿಚಾರಣೆಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಇರುವ ಅಧಿಕಾರಗಳು.

**9. ಹಕ್ಕುಗಳ ಅಳಿವು.-** ಯಾವ ಹಕ್ಕುಗಳ ಸಂಬಂಧದಲ್ಲಿ 5ನೇ ಪ್ರಕರಣದ ಅಡಿಯಲ್ಲಿ ಕ್ಲೇಮು ಮಾಡಲಾಗಿಲ್ಲವೋ ಮತ್ತು ಯಾವ ಹಕ್ಕುಗಳ ಅಸ್ತಿತ್ವದ ಬಗ್ಗೆ 7ನೇ ಪ್ರಕರಣದ ಅಡಿಯಲ್ಲಿ ವಿಚಾರಣೆಯಿಂದ ಯಾವುದೇ ಮಾಹಿತಿಯು ದೊರೆತಿಲ್ಲವೋ ಅಂಥ ಹಕ್ಕುಗಳು, ಅವುಗಳ ಬಗ್ಗೆ ಕ್ಲೇಮು ಮಾಡುವ ವ್ಯಕ್ತಿಯು 5ನೇ ಪ್ರಕರಣದ ಅಡಿಯಲ್ಲಿ ನಿಗದಿಪಡಿಸಲಾದ ಅವಧಿಯೊಳಗಾಗಿ ಅಂಥ ಕ್ಲೇಮನ್ನು ಮಾಡದೇ ಇರಲು ತನಗೆ ಸಾಕಷ್ಟು ಕಾರಣವಿದ್ದಿತೆಂದು 17ನೇ ಪ್ರಕರಣದ ಅಡಿಯಲ್ಲಿ ಅಂತಿಮ ಅಧಿಸೂಚನೆಯನ್ನು ಪ್ರಕಟಿಸುವುದಕ್ಕೆ ಮುಂಚೆ ಅರಣ್ಯ ವ್ಯವಸ್ಥಾಪನಾ ಅಧಿಕಾರಿಗೆ ಮನದಟ್ಟು ಮಾಡಿಸದ ಹೊರತು ಅಳಿದು ಹೋಗತಕ್ಕದ್ದು. ಹಾಗೆ ಮನದಟ್ಟು ಮಾಡಿಸಿದ ಸಂದರ್ಭದಲ್ಲಿ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು 5ನೇ ಪ್ರಕರಣದ ಅಡಿಯಲ್ಲಿ ನಿಗದಿಪಡಿಸಿದ ಅವಧಿಯೊಳಗೆ, ಆ ಕ್ಲೇಮನ್ನು ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ವಿಲೆ ಮಾಡಲು ಮುಂದುವರೆಸತಕ್ಕದ್ದು.

**10. ಸರದಿ ಸಾಗುವಳಿಯ ಸಂಬಂಧದಲ್ಲಿ ಕ್ಲೇಮುಗಳ ಬಗ್ಗೆ ವ್ಯವಹರಿಸುವುದು.-** (1) ಸರದಿ ಸಾಗುವಳಿಯ ಪದ್ಧತಿಗೆ ಸಂಬಂಧಪಡುವ ಕ್ಲೇಮಿನ ಸಂದರ್ಭದಲ್ಲಿ, ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ಕ್ಲೇಮಿನ ಮತ್ತು ಆ ಪದ್ಧತಿಗೆ ಅವಕಾಶ ಕೊಡುವ ಅಥವಾ ಅದನ್ನು ನಿಯಂತ್ರಿಸುವ ಸ್ಥಳೀಯ ನಿಯಮದ ಅಥವಾ ಆದೇಶದ ವಿವರಗಳನ್ನು ಕೊಡುವ

ಹೇಳಿಕೆಯನ್ನು ದಾಖಲ್ಮಾಡತಕ್ಕದ್ದು ಮತ್ತು ಆ ಹೇಳಿಕೆಯನ್ನು ಸದರಿ ಪದ್ಧತಿಯನ್ನು ಅನುಸರಿಸಲು ಅವಕಾಶ ಕೊಡುವ ಅಥವಾ ಅದನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿಬಂಧಿಸುವ ಬಗ್ಗೆ ತನ್ನ ಅಭಿಪ್ರಾಯ ಸಹಿತವಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) ಆ ಹೇಳಿಕೆಯು ಮತ್ತು ಅಭಿಪ್ರಾಯವು ತಲುಪಿದ ಬಳಿಕ, ರಾಜ್ಯ ಸರ್ಕಾರವು, ಆ ಪದ್ಧತಿಗೆ ಪೂರ್ಣವಾಗಿ ಅಥವಾ ಭಾಗಶಃ ಅನುಮತಿ ನೀಡುವ ಅಥವಾ ಪ್ರತಿಬಂಧಿಸುವ ಆದೇಶ ಮಾಡಬಹುದು.

(3) ಅಂಥ ಪದ್ಧತಿಗೆ ಪೂರ್ಣವಾಗಿ ಅಥವಾ ಭಾಗಶಃ ಅನುಮತಿ ನೀಡಿದರೆ, ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು,-

(ಎ) ಕ್ಲೇಮು ಮಾಡುವವರ ಉದ್ದೇಶಗಳಿಗೆ ಸೂಕ್ತವಾಗಿ ಅನುಕೂಲವಾಗಿರುವಂಥ ಸ್ಥಳದಲ್ಲಿ ಮತ್ತು ಸಾಕಷ್ಟು ವಿಸ್ತೀರ್ಣದ ಸೂಕ್ತ ಬಗೆಯ ಭೂಮಿಯನ್ನು ಬಿಟ್ಟುಬಿಡುವಂತ ಭೂಮಾಪನ ಮಾಡಲಾಗುತ್ತಿರುವ ಭೂಮಿಯ ಪರಿಮಿತಿಗಳಲ್ಲಿ ಬದಲಾವಣೆಗಳನ್ನು ಮಾಡುವ ಮೂಲಕ; ಅಥವಾ

(ಬಿ) ಭೂಮಾಪನಾ ಮಾಡಲಾಗುತ್ತಿರುವ ಭೂಮಿಯ ಕೆಲವು ಭಾಗಗಳನ್ನು ಪ್ರತ್ಯೇಕವಾಗಿ ಗುರುತಿಸುವ ಮತ್ತು ತಾನು ನಿಯಮಿಸಬಹುದಾದ ಷರತ್ತುಗಳ ಅಡಿಯಲ್ಲಿ ಸರದಿ ಸಾಗುವಳಿಯನ್ನು ಕೈಗೊಳ್ಳಲು ಕ್ಲೇಮು ಮಾಡುವವರಿಗೆ ಅನುಮತಿಯನ್ನು ನೀಡುವ ಮೂಲಕ ಅದರ ಅನುಸರಣೆಗಾಗಿ ವ್ಯವಸ್ಥೆಮಾಡಬಹುದು.

(4) (3)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಎಲ್ಲಾ ವ್ಯವಸ್ಥೆಗಳು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

(5) ಎಲ್ಲಾ ಸಂದರ್ಭಗಳಲ್ಲೂ ಸರದಿ ಸಾಗುವಳಿಯ ಪದ್ಧತಿಯನ್ನು, ರಾಜ್ಯ ಸರ್ಕಾರದ ನಿಯಂತ್ರಣಕ್ಕೆ, ನಿರ್ಬಂಧಕ್ಕೆ ಮತ್ತು ರದ್ದುಗೊಳಿಸುವಿಕೆಗೆ ಒಳಪಟ್ಟು ಒಂದು ವಿಶೇಷಾಧಿಕಾರವೆಂದು ಭಾವಿಸತಕ್ಕದ್ದು.

**11. ಹಕ್ಕನ್ನು ಕ್ಲೇಮು ಮಾಡಲಾದ ಭೂಮಿಯನ್ನು ಆರ್ಜಿಸಲು ಅಧಿಕಾರ**.- (1) ದಾರಿಯ ಹಕ್ಕನ್ನು ಅಥವಾ ಹುಲ್ಲುಗಾವಲಿನ ಹಕ್ಕಿನ ಹೊರತಾಗಿ ಯಾವುದೇ ಭೂಮಿಯಲ್ಲಿ ಅಥವಾ ಅದರ ಮೇಲೆ ಅಥವಾ ಅಂಥ ಭೂಮಿಯಲ್ಲಿರುವಂಥ ಅರಣ್ಯ ಉತ್ಪಾದನೆಯ ಅಥವಾ ಜಲಮಾರ್ಗದ ಅಥವಾ ಅಂಥ ಭೂಮಿಯ ಮೇಲಿರುವ ಯಾವುದೇ ಕಟ್ಟಡದ ಸಂಬಂಧವಾಗಿ ಹಕ್ಕು ಕ್ಲೇಮುಮಾಡುವ ಸಂದರ್ಭದಲ್ಲಿ ಅರಣ್ಯ ವ್ಯವಸ್ಥಾಪನಾ

ಅಧಿಕಾರಿಯು, ಅಂಥ ಹಕ್ಕನ್ನು ಪೂರ್ಣವಾಗಿ ಅಥವಾ ಭಾಗಶಃ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಒಂದು ಆದೇಶವನ್ನು ಮಾಡತಕ್ಕದ್ದು.

(2) ಅಂಥ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಒಪ್ಪಿಕೊಳ್ಳಲಾಗಿರುವ ಸಂದರ್ಭದಲ್ಲಿ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು;

(i) ಅಂಥ ಭೂಮಿಯನ್ನು ಅಥವಾ ಕಟ್ಟಡವನ್ನು ಅಂಥ ಮೀಸಲು ಅರಣ್ಯಗಳ ಪರಿಮಿತಿಗಳಿಂದ ಹೊರತು ಪಡಿಸತಕ್ಕದ್ದು; ಅಥವಾ

(ii) ಹಕ್ಕುಗಳನ್ನು ಬಿಟ್ಟುಕೊಡುವುದಕ್ಕಾಗಿ ಅದರ ಮಾಲೀಕನೊಡನೆ ಒಂದು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು; ಅಥವಾ

(iii) ಭೂ ಆರ್ಜನೆ ಅಧಿನಿಯಮ, 1894ರಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಅಂಥ ಭೂಮಿಯನ್ನು ಆರ್ಜಿಸಲು ಕ್ರಮವನ್ನು ಕೈಕೊಳ್ಳತಕ್ಕದ್ದು.

(3) ಅಂಥ ಭೂಮಿಯನ್ನು ಅಥವಾ ಕಟ್ಟಡವನ್ನು ಹಾಗೆ ಆರ್ಜಿಸುವ ಉದ್ದೇಶಕ್ಕಾಗಿ,-

(ಎ) ಅರಣ್ಯ ವ್ಯವಸ್ಥಾಪನಾ ಅಧಿಕಾರಿಯನ್ನು ಭೂ ಆರ್ಜನೆ ಅಧಿನಿಯಮ, 1894ರ ಅಡಿಯಲ್ಲಿ ವ್ಯವಹರಿಸುವ ಜಿಲ್ಲಾಧಿಕಾರಿ ಎಂದು ಭಾವಿಸತಕ್ಕದ್ದು;

(ಬಿ) ಹಿತಾಸಕ್ತಿಯುಳ್ಳ ಮತ್ತು ಕ್ಲೇಮುದಾರನನ್ನು ಸದರಿ ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಕೊಡಲಾದ ನೋಟೀಸಿಗನುಸಾರವಾಗಿ ತನ್ನ ಮುಂದೆ ಹಾಜರಾಗುವಂಥ ವ್ಯಕ್ತಿಯೆಂದು ಭಾವಿಸತಕ್ಕದ್ದು;

(ಸಿ) ಆ ಅಧಿನಿಯಮದ ಪೂರ್ವೋಕ್ತ ಪ್ರಕರಣಗಳ ಉಪಬಂಧಗಳನ್ನು ಪಾಲಿಸಲಾಗಿದೆಯೆಂದು ಭಾವಿಸತಕ್ಕದ್ದು; ಮತ್ತು

(ಡಿ) ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ಕ್ಲೇಮುದಾರನ ಸಮ್ಮತಿಯನ್ನು ಪಡೆದು ಅಥವಾ (ಸದರಿ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ) ಕ್ಲೇಮುದಾರನ ಮತ್ತು ಜಿಲ್ಲೆಯ ಜಿಲ್ಲಾಧಿಕಾರಿಯ ಸಮ್ಮತಿಯನ್ನು ಪಡೆದು, ನ್ಯಾಯಾಲಯವು ಭೂಮಿಯ ರೂಪದಲ್ಲಿ ಅಥವಾ ಭಾಗಶಃ ಭೂಮಿಯ ಮತ್ತು ಭಾಗಶಃ ಹಣದ ರೂಪದಲ್ಲಿ ಪರಿಹಾರವನ್ನು ನೀಡಬಹುದು.

**12. ದಾರಿಯ ಅಥವಾ ಹುಲ್ಲುಗಾವಲಿನ ಅಥವಾ ಅರಣ್ಯ ಉತ್ಪನ್ನದ ಅಥವಾ ನೀರಿನ ಹಕ್ಕುಗಳ ಕ್ಲೇಮುಗಳ ಮೇಲೆ ಆದೇಶ.-** ದಾರಿಯ ಅಥವಾ ಹುಲ್ಲುಗಾವಲಿನ ಅಥವಾ ಅರಣ್ಯ ಉತ್ಪನ್ನದ ಅಥವಾ ನೀರಿನ ಹಕ್ಕುಗಳ ಕ್ಲೇಮಿನ ಸಂಬಂಧದಲ್ಲಿ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ಇಂಥ ಕ್ಲೇಮುಗಳ ವಿವರಗಳನ್ನು ಉಲ್ಲೇಖಿಸುವ ಮತ್ತು

ಅವುಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಆದೇಶವನ್ನು ಮಾಡತಕ್ಕದ್ದು.

**13. ಕ್ಲೇಮನ್ನು ಒಪ್ಪಿಕೊಂಡಲ್ಲಿ ದಾಖಲ್ಮಾಡುವುದು.**- ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, 12ನೇ ಪ್ರಕರಣದ ಅಡಿಯಲ್ಲಿ ಯಾವುದೇ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಒಪ್ಪಿಕೊಂಡರೆ, ಅವನು, ಕ್ಲೇಮನ್ನು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳಲಾಗಿದೆ ಎಂಬುದನ್ನು ದಾಖಲಿಸತಕ್ಕದ್ದು ಮತ್ತು ಆ ಬಗ್ಗೆ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಈ ಮುಂದಿನ ಅಂಶಗಳನ್ನು ನಿರ್ದಿಷ್ಟಪಡಿಸತಕ್ಕದ್ದು,-

(ಎ) ಕ್ಲೇಮು ಮಾಡುವ ವ್ಯಕ್ತಿಯ ಹೆಸರು, ತಂದೆಯ ಹೆಸರು, ನಿವಾಸ ಮತ್ತು ವೃತ್ತಿ;

(ಬಿ) ಅಂಥ ಹಕ್ಕುಗಳ ಚಲಾವಣೆಯನ್ನು ಕ್ಲೇಮುಮಾಡಲಾಗುವ ಅಂಥ ಎಲ್ಲ ಜಮೀನುಗಳ ಅಥವಾ ಜಮೀನುಗಳ ಸಮೂಹಗಳ ಹೆಸರು (ಯಾವುದಾದರೂ ಇದ್ದರೆ) ಮತ್ತು ವಿಸ್ತೀರ್ಣ ಮತ್ತು ಎಲ್ಲ ಕಟ್ಟಡಗಳ ಹೆಸರು (ಯಾವುದಾದರೂ ಇದ್ದರೆ) ಮತ್ತು ಇರುವ ಸ್ಥಳ;

(ಸಿ) ದಾರಿಯ ಹಕ್ಕುಗಳ ಸಂಬಂಧದಲ್ಲಿ, ಅವುಗಳನ್ನು ಯಾರೂ ಉಪಯೋಗಿಸಬಹುದು, ದಾರಿಯ ಅಗಲಳತೆ ಮತ್ತು ವಾಹನ ಸಂಚಾರಕ್ಕಾಗಿಯೋ ಅಥವಾ ಜನಗಳಿಗೆ ಮತ್ತು ಜಾನುವಾರಿಗಳಿಗೆ ಮಾತ್ರವಾಗಿಯೇ ಮತ್ತು ಅಂಥ ಹಕ್ಕಿಗೆ ಸೇರಿದ ಷರತ್ತುಗಳು ಯಾವುದಾದರೂ ಇದ್ದರೆ, ಅವು;

(ಡಿ) ಹುಲ್ಲುಗಾವಲಿನ ಸಂಬಂಧದಲ್ಲಿ ಕ್ಲೇಮುದಾರನು ಕಾಲಕಾಲಕ್ಕೆ ಅರಣ್ಯದಲ್ಲಿ ಮೇಯಿಸಲು ಅನುಮತಿ ಕೊಡಲಾಗಿರುವ ಜಾನುವಾರುಗಳ ಸಂಖ್ಯೆ ಮತ್ತು ವಿವರ ಹಾಗೆ ಮೇಯಿಸಲು ಅವಕಾಶಕೊಟ್ಟ ಋತುಮಾನ ಮತ್ತು ಅಂಥ ಹಕ್ಕುಗಳಿಗೆ ಸಂಬಂಧಿಸಿದ ಯಾವುದೇ ಷರತ್ತುಗಳು;

(ಇ) ಅರಣ್ಯ ಉತ್ಪನ್ನದ ಸಂಬಂಧದಲ್ಲಿ ಕ್ಲೇಮುದಾರನು ತೆಗೆದುಕೊಳ್ಳಲು ಅಥವಾ ಪಡೆಯಲು ಹಕ್ಕುಳ್ಳವನಾಗಿರುವ ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನದ ಪ್ರಮಾಣ ಅಂಥ ಚೌಬೀನೆಯನ್ನು ಅಥವಾ ಅರಣ್ಯ ಉತ್ಪನ್ನದ ಪ್ರಯೋಜನವನ್ನು ಗುತ್ತಿಗೆಗೆ ಕೊಡಬಹುದೇ, ಮಾರಬಹುದೇ ಅಥವಾ ವಿನಿಮಯ ಮಾಡಬಹುದೇ ಎಂಬುದು ಮತ್ತು ಅಂಥ ಹಕ್ಕಿನ ಸ್ವರೂಪ, ಸಂದರ್ಭಗಳು ಮತ್ತು ವ್ಯಾಪ್ತಿಯನ್ನು ನಿರ್ದಿಷ್ಟಪಡಿಸಲು ಅವಶ್ಯಕವಾಗಬಹುದಾದ ಇತರ ವಿವರಗಳು;

(ಎಫ್) ನೀರಿನ ಸಂಬಂಧದಲ್ಲಿ ಆ ನೀರನ್ನು ಯಾರು ಮತ್ತು ಯಾವ ಉದ್ದೇಶಗಳಿಗಾಗಿ ಬಳಸಬಹುದು ಎಂಬುದು ಮತ್ತು ಅದರ ಉಪಯೋಗಕ್ಕೆ ಸೇರಿದ ಯಾವುದೇ ಷರತ್ತು.

**14. ಒಪ್ಪಿಕೊಂಡ ಹಕ್ಕುಗಳ ಚಲಾವಣೆ.-** (1) ಹಾಗೆ ದಾಖಲೆಯನ್ನು ಮಾಡಿದ ಆನಂತರ, ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ತನ್ನ ಬಹುಮಟ್ಟಿನ ಅಧಿಕಾರಕ್ಕೆ ಅನುಸಾರವಾಗಿ ಮತ್ತು ಕ್ಲೇಮು ಮಾಡಲಾದ ಮೀಸಲು ಅರಣ್ಯವನ್ನು ಸುವ್ಯವಸ್ಥೆಯಲ್ಲಿಟ್ಟುಕೊಂಡು ಬರುವುದಕ್ಕೆ ಸೂಕ್ತ ಗಮನಕೊಡುತ್ತಾ, ಹಾಗೆ ಒಪ್ಪಿಕೊಳ್ಳಲಾದ ಹಕ್ಕುಗಳ ನಿರಂತರ ಚಲಾವಣೆಯನ್ನು ಖಚಿತಪಡಿಸುವಂತಹ ಆದೇಶಗಳನ್ನು ಮಾಡಬಹುದು.

(2) ಈ ಉದ್ದೇಶಕ್ಕಾಗಿ, ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು,-

(ಎ) ಸಮಂಜಸವಾಗಿ ಅನುಕೂಲವಾಗಿರುವಂಥ ಬೇರೆ ಯಾವುದಾದರೂ ದಾರಿಯ ಹಕ್ಕನ್ನು ಒದಗಿಸಬಹುದು; ಅಥವಾ

(ಬಿ) ಹುಲ್ಲುಗಾವಲಿನಲ್ಲಿ ಮೇಯಿಸುವ ಅಥವಾ ಇತರ ಅರಣ್ಯ ಉತ್ಪನ್ನಗಳನ್ನು ಪಡೆಯುವ ಹಕ್ಕುಗಳನ್ನು ಚಲಾಯಿಸಲು ಸಾಕಷ್ಟು ವಿಸ್ತೀರ್ಣವುಳ್ಳ ಇತರ ಅರಣ್ಯ ಪ್ರದೇಶವನ್ನೂ ಮತ್ತು ಯುಕ್ತವಾಗಿ ಅನುಕೂಲವಾಗಿರುವ ಸ್ಥಳದಲ್ಲಿ ಗೊತ್ತುಮಾಡಬಹುದು ಮತ್ತು ಅವಕಾಶ ಕೊಟ್ಟಿರುವ ಮಟ್ಟಿಗೆ ಕ್ಲೇಮುದಾರರಿಗೆ ಅಂತಹ ಹಕ್ಕುಗಳನ್ನು ಪ್ರಧಾನ ಮಾಡಿರುವ ಒಂದು ಆದೇಶವನ್ನು ದಾಖಲ್ಮಾಡಬಹುದು; ಅಥವಾ

(ಸಿ) ಮೀಸಲಾಗಿರಿಸಬೇಕೆಂದು ಉದ್ದೇಶಿಸಿರುವ ಅರಣ್ಯದ ಪರಿಮಿತಿಗಳನ್ನು, ಅದರ ಮೇಲೆ ದಾರಿಹಕ್ಕು ಅಥವಾ ಅದರಿಂದ ನೀರು ಪಡೆಯಲು ಹಕ್ಕುಳ್ಳ ಪ್ರದೇಶವನ್ನೂ ಹೊರತುಪಡಿಸುವಂತೆ, ಬದಲಾಯಿಸಬಹುದು ಅಥವಾ ಹುಲ್ಲುಗಾವಲಿನಲ್ಲಿ ಜಾನುವಾರುಗಳನ್ನು ಮೇಯಿಸುವುದು ಅಥವಾ ಇತರ ಅರಣ್ಯದ ಉತ್ಪನ್ನಗಳ ವಿಚಾರದಲ್ಲಿ ಕ್ಲೇಮುದಾರರ ಉದ್ದೇಶಗಳಿಗಾಗಿ ಸಾಕಷ್ಟು ವಿಸ್ತೀರ್ಣವುಳ್ಳ ಅರಣ್ಯ ಪ್ರದೇಶವನ್ನು ಸೂಕ್ತ ಅನುಕೂಲವಾಗಿರುವ ಪ್ರದೇಶದಲ್ಲಿ ಹೊರತುಪಡಿಸಬಹುದು ಮತ್ತು ಆ ರೀತಿ ಹೊರತುಪಡಿಸಲಾದ ಭೂಮಿಯು, ಕೊನೆಯದಾಗಿ ಇತ್ಯರ್ಥಗೊಳಿಸಲಾದಂತೆ ಅರಣ್ಯದ ಗಡಿಗಳ ಹೊರಗಿರಬಹುದು ಅಥವಾ ಆ ಗಡಿಗಳ ಒಳಗಿರಬಹುದು ಅಥವಾ ಅದು ಗಡಿಗಳ ಒಳಗಿದ್ದಲ್ಲಿ ಅದನ್ನು ಗುರುತು ಮಾಡಿ ಅದಕ್ಕೆ ಮೀಸಲು ಅರಣ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳು ಅನ್ವಯಿಸದೆ ಆವರಣವಾಗಿದೆಯೆಂದು ಅಧಿಸೂಚಿಸತಕ್ಕದ್ದು, ಅಥವಾ

(ಡಿ) ಕ್ಲೇಮುದಾರರಿಗೆ ಮುಂದುವರಿಸಲು ಅವಕಾಶ ಕೊಟ್ಟಿರುವಷ್ಟರಮಟ್ಟಿಗೆ, ದಾರಿಯ ಅಥವಾ ಮೇಯಿಸುವಿಕೆಯ ಅಥವಾ ಇತರ ಅರಣ್ಯದ ಉತ್ಪನ್ನಗಳ ಅಥವಾ ನೀರಿನ ಹಕ್ಕನ್ನು (ಸಂದರ್ಭಾನುಸಾರ), ನಿಯಮಿಸಬಹುದಾಂಥ ನಿಯಮಗಳ ಪ್ರಕಾರ ಮೀಸಲಾಗಿಡಬೇಕೆಂದು ಉದ್ದೇಶಿಸಿರುವ ಅರಣ್ಯದ ಭಾಗಗಳಲ್ಲಿ ಅಂಥ ಕಾಲಮಾನಗಳಲ್ಲಿ ಮುಂದುವರೆಯುವಂತೆಯೂ ಆದರೆ, ಅಂಥ ಹಕ್ಕುಗಳನ್ನು ದುರುಪಯೋಗಪಡಿಸದಂತೆಯೂ ಖಚಿತಪಡಿಸಿಕೊಂಡು ಆದೇಶವನ್ನು ದಾಖಲ್ಮಾಡಬಹುದು.

**15. ಹಕ್ಕುಗಳ ಬಗ್ಗೆ ಪರಿಹಾರ.-** ಮೀಸಲು ಅರಣ್ಯವನ್ನು ಸುವ್ಯವಸ್ಥೆಯಲ್ಲಿರಿಸಿಕೊಂಡು ಬರುವುದಕ್ಕೆ ತಕ್ಕ ಗಮನಕೊಟ್ಟ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, 14ನೇ ಪ್ರಕರಣದ ಅಡಿಯಲ್ಲಿ ಹಾಗೆ ಅವಕಾಶ ಕೊಡಲಾಗಿರುವಷ್ಟರ ಮಟ್ಟಿಗೆ ಸದರಿ ಹಕ್ಕುಗಳನ್ನು ಚಲಾಯಿಸುವುದನ್ನು ಮುಂದುವರೆಸುವಂತೆ ಖಾತರಿ ಪಡಿಸಲು ಸಾಧ್ಯವಿಲ್ಲವೆಂದು ತನಗೆ ಕಂಡುಬಂದ ಸಂದರ್ಭದಲ್ಲಿ, ಅವನು ಭೂ ಆರ್ಜನೆ ಅಧಿನಿಯಮ 1894ರ ಉಪಬಂಧಗಳನ್ನನುಸರಿಸಿ, ಸದರಿ ಉಪಬಂಧಗಳು, ಅನ್ವಯವಾಗುವಷ್ಟರ ಮಟ್ಟಿಗೆ, 4ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಂದು ಅಂಥ ಹಕ್ಕಿನ ಮೌಲ್ಯದ ಆಧಾರದ ಮೇಲೆ ನಿರ್ಧರಿಸಿದಂಥ ಪರಿಹಾರವನ್ನು ರಾಜ್ಯ ಸರ್ಕಾರವು ಸಂದಾಯಮಾಡತಕ್ಕದೆಂದು ನಿರ್ದೇಸಿಸತಕ್ಕದ್ದು.

**16. 11ನೆಯ ಪ್ರಕರಣ, 12ನೇ ಪ್ರಕರಣ, 14ನೇ ಪ್ರಕರಣ ಅಥವಾ 15ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶದ ಮೇಲೆ ಅಪೀಲು.-** (1) ಈ ಅಧ್ಯಾಯದ ಅಡಿಯಲ್ಲಿ ಕ್ಲೇಮು ಮಾಡಿರುವ ಯಾವೊಬ್ಬ ವ್ಯಕ್ತಿಯು ಅಥವಾ ಅರಣ್ಯ ಅಧಿಕಾರಿಯು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕಾರ ನೀಡಿದ ಇತರ ವ್ಯಕ್ತಿಯು, 11ನೇ ಪ್ರಕರಣ, 12ನೇ ಪ್ರಕರಣ ಅಥವಾ 14ನೇ ಪ್ರಕರಣದ ಅಡಿಯಲ್ಲಿ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ಅಂಥ ಕ್ಲೇಮಿನ ಬಗ್ಗೆ ಮಾಡಿದ ಆದೇಶದ ದಿನಾಂಕದಿಂದ ಮೂರು ತಿಂಗಳೊಳಗಾಗಿ [1][ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣಕ್ಕೆ][1] ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಮೇಲೆ ಸದರಿ ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರತಕ್ಕದ್ದು.

1. 1989ರ ಅಧಿನಿಯಮ 10ರ ಮೂಲಕ 16.03.1989ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 15ನೇ ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಸದರಿ ಆದೇಶದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಮೇಲೆ ಜಿಲ್ಲಾ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**17. ಅರಣ್ಯವನ್ನು ಮೀಸಲು ಅರಣ್ಯವನ್ನಾಗಿ ಘೋಷಿಸುವ ಅಧಿಸೂಚನೆ.-** (1) ಈ ಮುಂದಿನ ಸಂದರ್ಭಗಳಲ್ಲಿ, ಎಂದರೆ:-

(ಎ) ಕ್ಲೇಮುಗಳನ್ನು ಮಾಡಲು 5ನೇ ಪ್ರಕರಣದ ಅಡಿಯಲ್ಲಿ ನಿಗದಿಮಾಡಿದ ಅವಧಿಯು ಮುಗಿದಾಗ ಮತ್ತು ಆ ಪ್ರಕರಣದ ಅಡಿಯಲ್ಲಿ ಅಥವಾ 9ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಎಲ್ಲ ಕ್ಲೇಮುಗಳನ್ನು, ಯಾವುದಾದರೂ ಇದ್ದರೆ, ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು ಇತ್ಯರ್ಥಗೊಳಿಸಿದಾಗ;

(ಬಿ) ಅಂಥ ಯಾವುದಾದರೂ ಕ್ಲೇಮುಗಳನ್ನು ಮಾಡಿದ್ದರೆ ಅಂಥ ಕ್ಲೇಮುಗಳ ಬಗ್ಗೆ ಮಾಡಲಾದ ಆದೇಶಗಳ ಮೇಲೆ ಅಪೀಲನ್ನು ಮಾಡಲು 16ನೇ ಪ್ರಕರಣದ ಮೂಲಕ ಸೀಮಿತಗೊಳಿಸಲಾದ ಅವಧಿಯು ಮುಕ್ತಾಯವಾದಾಗ ಮತ್ತು ಅಂಥ ಅವಧಿಯೊಳಗಾಗಿ ಸಲ್ಲಿಸಿದ್ದ ಎಲ್ಲ ಅಪೀಲುಗಳ (ಯಾವುದಾದರೂ ಇದ್ದರೆ) ಇತ್ಯರ್ಥವಾಗಿದ್ದಾಗ; ಮತ್ತು

(ಸಿ) 11ನೇ ಮತ್ತು 14ನೇ ಪ್ರಕರಣಗಳ ಮೂಲಕ ನಿಯಮಿಸಲಾದ ಎಲ್ಲ ವ್ಯವಹರಣೆಗಳನ್ನು ಕೈಗೊಂಡಿದ್ದು ಮತ್ತು ಉದ್ದೇಶಿಸಿದ ಮೀಸಲು ಅರಣ್ಯದಲ್ಲಿ ಸೇರಿಸಬೇಕಾದ, ಭೂ ಆರ್ಜನೆ ಅಧಿನಿಯಮ 1894ರ 11ನೇ ಪ್ರಕರಣದ ಅಡಿಯಲ್ಲಿ ಅರಣ್ಯ ವ್ಯವಸ್ಥಾಪನಾ ಅಧಿಕಾರಿಯು, ಆರ್ಜಿಸಬೇಕೆಂದು ನಿರ್ಧರಿಸಿದ ಎಲ್ಲಾ ಭೂಮಿಗಳು ಮತ್ತು ಕಟ್ಟಡಗಳು, ಯಾವುದಾದರೂ ಇದ್ದರೆ, ಅವು ಸದರಿ ಅಧಿನಿಯಮದ 16ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾದಾಗ,

-ರಾಜ್ಯ ಸರ್ಕಾರದ ಮೀಸಲು ಅರಣ್ಯವಾಗಿರತಕ್ಕದ್ದೆಂದು ಉದ್ದೇಶಿಸಿರುವ ಅರಣ್ಯದ ಪರಿಮಿತಿಗಳನ್ನು ಆ ಬಗ್ಗೆ ನಿಲ್ಲಿಸಿರುವ ಗಡಿ ಗುರುತುಗಳಿಗನುಸಾರವಾಗಿ ಅಥವಾ ಬೇರೆ ರೀತಿಯಿಂದ ಸ್ಪಷ್ಟವಾಗಿ ಉಲ್ಲೇಖಿಸುವ ಒಂದು ಅಂಥ ಅಧಿಸೂಚನೆಯಲ್ಲಿ ಉಲ್ಲೇಖಿಸಿರುವ ಹಕ್ಕುಗಳನ್ನು, ಯಾವುದಾದರೂ ಇದ್ದರೆ, ಚಲಾಯಿಸುವುದಕ್ಕೊಳಪಟ್ಟು, ಸದರಿ ಅಧಿಸೂಚನೆಯಲ್ಲಿ ನಿಗದಿಪಡಿಸಿದ ದಿನಾಂಕದಿಂದ ಅದು ಮೀಸಲು ಅರಣ್ಯವಾಗಿರತಕ್ಕದ್ದೆಂದು ಘೋಷಿಸುವ ಒಂದು ಅಧಿಸೂಚನೆಯನ್ನು ಪ್ರಕಟಿಸತಕ್ಕದ್ದು.

(2) ಹಾಗೆ ನಿಗದಿಮಾಡಿದ ದಿನಾಂಕದಿಂದ ಅಂಥ ಅರಣ್ಯವನ್ನು ಒಂದು ಮೀಸಲು ಅರಣ್ಯವೆಂದು ಭಾವಿಸತಕ್ಕದ್ದು.

**18. ಅಧಿಸೂಚನೆಯ ಪ್ರಕಟಣೆ.-** ಜಿಲ್ಲಾಧಿಕಾರಿಗಳು, ಅಂಥ ಅಧಿಸೂಚನೆಯಲ್ಲಿ ನಿಗದಿ ಮಾಡಿದ ದಿನಾಂಕಕ್ಕೆ ಮೊದಲು ಅದನ್ನು ಕನ್ನಡದಲ್ಲಿ ಮತ್ತು ಆ ಪ್ರದೇಶದ ಪ್ರಾದೇಶಿಕ ಭಾಷೆಯಲ್ಲಿ ಭಾಷಾಂತರಿಸಿ, ಅದನ್ನು ಸರ್ಕಾರಿ ರಾಜ್ಯಪತ್ರದಲ್ಲೂ ಮತ್ತು ಅರಣ್ಯವು ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕಿನ ಕೇಂದ್ರದಲ್ಲಿಯೂ ಮತ್ತು ಅಂಥ ಅರಣ್ಯದ ಅಕ್ಕಪಕ್ಕದಲ್ಲಿರುವ ಪ್ರತಿಯೊಂದು ಪಟ್ಟಣ ಮತ್ತು ಗ್ರಾಮದಲ್ಲೂ 5ನೇ ಪ್ರಕರಣದ ಅಡಿಯಲ್ಲಿ ಉದ್ಘೋಷಣೆಯ ಸಲುವಾಗಿ ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸತಕ್ಕದ್ದು.

**19. 14ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ವ್ಯವಸ್ಥೆಗಳನ್ನು ಪರಿಷ್ಕರಿಸುವುದಕ್ಕೆ ಮತ್ತು ಕೆಲವು ಸಂದರ್ಭಗಳಲ್ಲಿ ಮೀಸಲು ಅರಣ್ಯಗಳ ಗಡಿಗಳನ್ನು ಪುನಃ ನಿಗದಿಪಡಿಸುವುದಕ್ಕೆ ಅಧಿಕಾರ.-** (1) 17ನೇ ಪ್ರಕರಣದ ಅಡಿಯಲ್ಲಿ ಯಾವುದೇ ಅಧಿಸೂಚನೆಯನ್ನು ಪ್ರಕಟಿಸಿದ ಐದು ವರ್ಷಗಳ ಒಳಗಾಗಿ ರಾಜ್ಯ ಸರ್ಕಾರವು 14ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ವ್ಯವಸ್ಥೆಗಳನ್ನು ಪರಿಷ್ಕರಿಸಬಹುದು ಮತ್ತು ಈ ಉದ್ದೇಶಕ್ಕಾಗಿ 14ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು ರದ್ದುಮಾಡಬಹುದು ಅಥವಾ ಮಾರ್ಪಾಡು ಮಾಡಬಹುದು ಮತ್ತು 14ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ವ್ಯವಹರಣೆಗಳ ಬದಲಾಗಿ ಅನುಸರಿಸತಕ್ಕದೆಂದು ಅಥವಾ 12ನೇ ಪ್ರಕರಣದ ಅಡಿಯಲ್ಲಿ ಒಪ್ಪಿಕೊಂಡ ಹಕ್ಕುಗಳ ಬಗ್ಗೆ 15ನೇ ಪ್ರಕರಣದ ಅಡಿಯಲ್ಲಿ ಪರಿಹಾರವನ್ನು ಕೊಡತಕ್ಕದೆಂದು ನಿರ್ದೇಶಿಸಬಹುದು.

(2) 17ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ, ಯಾವುದೇ ಮೀಸಲು ಅರಣ್ಯದ ಪರಿಮಿತಿಗಳ ವಿವರಣೆಯು, ದೋಷಪೂರ್ಣವಾಗಿದ್ದಲ್ಲಿ ಅಥವಾ ವಾಸ್ತವಾಂಶಗಳಿಗೆ ಸಂಬಂಧಿಸಿದಂತೆ ಸ್ಪಷ್ಟವಾಗಿರದಿದ್ದಲ್ಲಿ, ರಾಜ್ಯ ಸರ್ಕಾರವು ದೋಷವನ್ನು ನಿವಾರಿಸಲು ಅಥವಾ ವಾಸ್ತವಾಂಶಗಳ ಬೆಳಕಿನಲ್ಲಿ ವಿವರಣೆಯನ್ನು ಸ್ಪಷ್ಟಪಡಿಸಲು ಅಂಥ ಮೀಸಲು ಅರಣ್ಯದ ಪರಿಮಿತಿಗಳನ್ನು ಪುನಃ ನಿಗದಿಪಡಿಸುವ ತನ್ನ ಉದ್ದೇಶವನ್ನು ಅಧಿಸೂಚನೆಯ ಮೂಲಕ ಘೋಷಿಸಬಹುದು. ಅಂಥ ಅಧಿಸೂಚನೆಯು ಮೀಸಲು ಅರಣ್ಯದ ಪರಿಮಿತಿಗಳಲ್ಲಿ ಮಾಡಬೇಕೆಂದು ಉದ್ದೇಶಿಸಲಾದ ತಿದ್ದುಪಡಿಗಳನ್ನು ಸಾಧ್ಯವಾದಷ್ಟು ಸರಿಯಾಗಿ ಸ್ಪಷ್ಟಪಡಿಸತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸಿದ ತರುವಾಯ [1][ಉಪ-ಅರಣ್ಯ ಸಂರಕ್ಷಣಾಧಿಕಾರಿಯು][1] ಅಂಥ ಅಧಿಸೂಚನೆಯಲ್ಲಿ

ಕಾಣಿಸಲಾದ ಯಾವುದೇ ಭೂಮಿಯ ಭಾಗವು ಇರುವ ಪ್ರತಿ ತಾಲ್ಲೂಕಿನ ಕೇಂದ್ರದಲ್ಲಿ ಮತ್ತು ಅಂಥ ಭೂಮಿಯ ಸುತ್ತಮುತ್ತಲಿರುವ ಪ್ರತಿ ಪಟ್ಟಣದಲ್ಲಿ ಮತ್ತು ಗ್ರಾಮದಲ್ಲಿ,-

1. 2001ರ ಅಧಿನಿಯಮ 20ರ ಮೂಲಕ 05.09.2002ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) (2)ನೇ ಉಪ ಪ್ರಕರಣದ ಅಡಿಯಲ್ಲಿನ ಅಧಿಸೂಚನೆ ಮೂಲಕ ಮಾಡಲು ಉದ್ದೇಶಿಸಲಾದ ತಿದ್ದುಪಡಿಗಳನ್ನು ಸ್ಪಷ್ಟಪಡಿಸುವ; ಮತ್ತು

(ಬಿ) ನೋಟಿಸು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಸ್ವತಃ ಅಥವಾ ಲಿಖಿತವಾಗಿ [1][ಅರಣ್ಯ ಉಪ ಸಂರಕ್ಷಣಾಧಿಕಾರಿಗೆ][1] ಸಲ್ಲಿಸಬಹುದಾದ ಯಾವುದೇ ಆಕ್ಷೇಪಣೆಗಳನ್ನು ತಾನು ಪರಿಶೀಲಿಸುವುದಾಗಿ ತಿಳಿಸುವ,

- ಒಂದು ನೋಟೀಸನ್ನು ಪ್ರಕಟಿಸತಕ್ಕದ್ದು.

1. 2001ರ ಅಧಿನಿಯಮ 20ರ ಮೂಲಕ 05.09.2002ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) (3)ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ನಿರ್ದೇಶಿಸಲಾದ ಅವಧಿಯು ಮುಗಿದ ತರುವಾಯ ಮತ್ತು ತಾನು ಸ್ವೀಕರಿಸಿದ ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ, [1][ಅರಣ್ಯ ಉಪ ಸಂರಕ್ಷಣಾಧಿಕಾರಿಯು,][1] ತಾನು ನಡೆಸಿದ ವ್ಯವಹರಣೆಗಳ ದಾಖಲೆಯನ್ನು ಅದಕ್ಕೆ ಸಂಬಂಧಿಸಿದ ವರದಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

1. 2001ರ ಅಧಿನಿಯಮ 20ರ ಮೂಲಕ 05.09.2002ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ರಾಜ್ಯ ಸರ್ಕಾರವು [1][ಅರಣ್ಯ ಉಪ ಸಂರಕ್ಷಣಾಧಿಕಾರಿಯ][1] ವರದಿಯನ್ನು ಪರಿಶೀಲಿಸಿದ ತರುವಾಯ; ತಾನು ಸೂಕ್ತವೆಂದು ಭಾವಿಸಬಹುದಾದ ಮಾರ್ಪಾಟುಗಳೊಡನೆ ಅಥವಾ ಯಾವ ಮಾರ್ಪಾಟುಗಳಿಲ್ಲದೆ (2)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯಲ್ಲಿ ಉದ್ದೇಶಿಸಲಾದಂತೆ ಮೀಸಲು ಅರಣ್ಯದ ಪರಿಮಿತಿಗಳನ್ನು ಅಧಿಸೂಚನೆಯ ಮೂಲಕ ಪುನಃ ನಿಗದಿಪಡಿಸಬಹುದು;

ಪರಂತು, ಮೀಸಲು ಅರಣ್ಯದ ಪರಿಮಿತಿಗಳನ್ನು ಪುನಃ ನಿಗದಿಪಡಿಸುವ ಅಧಿಸೂಚನೆಯು, ಅಂಥ ಮೀಸಲು ಅರಣ್ಯದಲ್ಲಿ ಯಾವೊಬ್ಬ ವ್ಯಕ್ತಿಯ ಹಕ್ಕುಗಳಿಗೆ ಬಾಧಕವಾದರೆ 5 ರಿಂದ 17ನೇ ಪ್ರಕರಣಗಳಲ್ಲಿ ಹೇಳಲಾದ ಪ್ರಕ್ರಿಯೆಯ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

1. 2001ರ ಅಧಿನಿಯಮ 20ರ ಮೂಲಕ 05.09.2002ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(6) ಈ ಪ್ರಕರಣದ (2) ರಿಂದ (5)ನೇ ಉಪ ಪ್ರಕರಣಗಳಲ್ಲಿ ಉಪಬಂಧಿಸಲಾಗಿರುವುದನ್ನುಳಿದು (5)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮೊದಲು 4 ರಿಂದ 17ನೇ ಪ್ರಕರಣಗಳಲ್ಲಿ ಹೇಳಲಾದ ಪ್ರಕ್ರಿಯೆಯನ್ನು ಅನುಸರಿಸುವುದು ಅಗತ್ಯವಾಗಿರತಕ್ಕದ್ದಲ್ಲ.

**20. ಉಪಬಂಧಿಸುವುದನ್ನು ಹೊರತುಪಡಿಸಿ ಮೀಸಲು ಅರಣ್ಯದ ಮೇಲೆ ಯಾವ ಹಕ್ಕನ್ನು ಆರ್ಜಿಸುವಂತಿಲ್ಲ.-** ಉತ್ತರಾಧಿಕಾರದ ಅಥವಾ ರಾಜ್ಯ ಸರ್ಕಾರವು ಅಥವಾ ಅದರ ಪರವಾಗಿ ಅಥವಾ 17ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದಾಗ, ಅಂಥ ಹಕ್ಕು ಅಥವಾ ಅದನ್ನು ಸೃಜಿಸುವ ಅಧಿಕಾರವು ನಿಹಿತವಾಗಿರುವ ಯಾವೊಬ್ಬ ವ್ಯಕ್ತಿಯು, ಲಿಖಿತದ ಮೂಲಕ ಮಾಡಿಕೊಂಡ ಯಾವುದೇ ಬಗೆಯ ನೀಡಿಕೆ ಅಥವಾ ಕರಾರು – ಇವುಗಳಿಲ್ಲದೆ ಮೀಸಲು ಅರಣ್ಯದಲ್ಲಿ ಅಥವಾ ಅದರ ಮೇಲೆ ಯಾವುದೇ ಬಗೆಯ ಹಕ್ಕನ್ನು ಆರ್ಜಿಸತಕ್ಕದ್ದಲ್ಲ.

**21. ಮೀಸಲು ಅರಣ್ಯದಲ್ಲಿರುವ ಹಕ್ಕಿನ ಪರಭಾರೆ.-** (1) 20ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರದ ಮಂಜೂರಾತಿ ಇಲ್ಲದೆ, 14ನೇ ಪ್ರಕರಣದ ಅಡಿಯಲ್ಲಿ ಮುಂದುವರಿಸಲಾದ ಯಾವ ಹಕ್ಕನ್ನೂ ನೀಡಿಕೆ, ಮಾರಾಟ, ಗುತ್ತಿಗೆ, ಅಡಮಾನ ಅಥವಾ ಇತರ ರೀತಿಯಿಂದ ಪರಭಾರೆ ಮಾಡತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಹಕ್ಕನ್ನು ಅದು ಯಾವುದೇ ಭೂಮಿಗೆ ಅಥವಾ ಕಟ್ಟಡಕ್ಕೆ ಸೇರಿರುವಲ್ಲಿ, ಅದನ್ನು ಅಂಥ ಮಂಜೂರಾತಿಯಿಲ್ಲದೆ ಅಂಥ ಭೂಮಿಯೊಂದಿಗೆ ಅಥವಾ ಕಟ್ಟಡದೊಂದಿಗೆ ಮಾರಾಟ ಮಾಡಬಹುದು ಅಥವಾ ಇತರ ರೀತಿಯಿಂದ ಪರಭಾರೆ ಮಾಡಬಹುದು.

(2) 14ನೇ ಪ್ರಕರಣದ ಅಡಿಯಲ್ಲಿ ಮುಂದುವರೆಸಿಕೊಂಡು ಹೋಗಲಾದ ಯಾವುದೇ ಹಕ್ಕಿನ ಪ್ರಯೋಜನವನ್ನು ಅದು ಆ ಪ್ರಕರಣ ಅಡಿಯಲ್ಲಿ ಅಥವಾ 16ನೇ ಪ್ರಕರಣದ ಅಡಿಯಲ್ಲಿ ದಾಖಲ್ಮಾಡಿದ ಆದೇಶದ ಮೂಲಕ ನಿಗದಿಪಡಿಸಿರುವ ಮಟ್ಟಿಗೆ ಅಲ್ಲದೇ ಯಾವ ಸಂದರ್ಭದಲ್ಲೂ ಗುತ್ತಿಗೆಗೆ ಕೊಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ವಿನಿಮಯ ಮಾಡತಕ್ಕದ್ದಲ್ಲ ಮತ್ತು ಅಂಥ ಯಾವುದಾದರೂ ಗುತ್ತಿಗೆಗೆ ಕೊಡುವುದು, ಮಾರಾಟ ಮಾಡುವುದು ಅಥವಾ ವಿನಿಮಯ ಮಾಡುವುದು ಅಸಿಂಧುವಾಗಿರತಕ್ಕದ್ದು.

(3) (2) ನೇ ಉಪ ಪ್ರಕರಣವನ್ನು ಉಲ್ಲಂಘಿಸಿ, 14ನೇ ಪ್ರಕರಣದ ಅಡಿಯಲ್ಲಿ ಮುಂದುವರಿಸಲಾದ ಯಾವುದೇ ಹಕ್ಕಿನ ಪ್ರಯೋಜನಗಳನ್ನು ಗುತ್ತಿಗೆಗೆ ಕೊಡುವ, ಮಾರಾಟ ಮಾಡುವ ಅಥವಾ ವಿನಿಮಯ ಮಾಡುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**22. ಮೀಸಲು ಅರಣ್ಯಗಳಲ್ಲಿ ದಾರಿಗಳನ್ನು ಮತ್ತು ಜಲಮಾರ್ಗಗಳನ್ನು ನಿಲ್ಲಿಸಿಬಿಡುವ ಅಧಿಕಾರ.-** (1) ಅರಣ್ಯ ಅಧಿಕಾರಿಯು, ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿಯವರ ಪೂರ್ವ ಮಂಜೂರಾತಿಯನ್ನು ಪಡೆದು ಸರ್ಕಾರಿ ರಾಜ್ಯಪತ್ರದಲ್ಲಿ ಒಂದು ಆದೇಶವನ್ನು ಪ್ರಕಟಿಸುವ ಮೂಲಕ ಒಂದು ಮೀಸಲು ಅರಣ್ಯದಲ್ಲಿ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ದಾರಿಯನ್ನು ಅಥವಾ ಜಲಮಾರ್ಗವನ್ನು ನಿಲ್ಲಿಸಿಬಿಡಬಹುದು:

ಪರಂತು, ಹಾಗೆ ನಿಲ್ಲಿಸಿಬಿಡಲಾದ ದಾರಿಯ ಅಥವಾ ಜಲಮಾರ್ಗದ ಬದಲಾಗಿ ಅಷ್ಟೇ ಅನುಕೂಲವಾದ ಬೇರೊಂದು ದಾರಿಯು ಅಥವಾ ಜಲಮಾರ್ಗವು ಈಗಾಗಲೇ ಇದ್ದಿರಬೇಕು ಅಥವಾ ಒದಗಿಸಿರಬೇಕು ಅಥವಾ ನಿರ್ಮಿಸಿರಬೇಕು:

ಮತ್ತು ಪರಂತು, ಕೆರೆಗೆ ಅಥವಾ ಇತರ ಜಲಾಶಯಕ್ಕೆ ನೀರನ್ನೊದಗಿಸುವ ಜಲಮಾರ್ಗವನ್ನು ಅಂಥ ಕೆರೆ ಅಥವಾ ಜಲಾಶಯದ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಯನಿರ್ವಾಹಕ ಇಂಜಿನಿಯರನೊಡನೆ ಸಮಾಲೋಚಿಸಿದ ಹೊರತು ನಿಲ್ಲಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಅಡಿಯಲ್ಲಿಯ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ರಾಜ್ಯ ಪತ್ರದಲ್ಲಿ ಅಂಥ ಆದೇಶವು ಪ್ರಕಟವಾದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ [1][ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣಕ್ಕೆ][1] ಅಪೀಲು ಮಾಡಿಕೊಳ್ಳಬಹುದು ಮತ್ತು ಅದರ ಮೇಲಿನ ತೀರ್ಮಾನವು ಅಂತಿಮವಾಗಿರುತಕ್ಕದ್ದು.

1. 1989ರ ಅಧಿನಿಯಮ 10ರ ಮೂಲಕ 16.03.1989ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**23. ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮೊದಲು ನಿರ್ಮಿಸಲಾಗಿದ್ದ ಮೀಸಲು ಅರಣ್ಯಗಳು.-** (1) ಈ ಅಧಿನಿಯಮವು ಜಾರಿಗೆ ಬರುವ ದಿನಾಂಕಕ್ಕೆ ಮೊದಲು ಮೈಸೂರು ಅರಣ್ಯ ಅಧಿನಿಯಮ, 1900ರ ಅಡಿಯಲ್ಲಿ ರಾಜ್ಯದ ಅರಣ್ಯವೆಂದು ಅಧಿಸೂಚಿಸಲಾದ ಯಾವುದೇ ಅರಣ್ಯವು ಅಥವಾ ಭಾರತ ಅರಣ್ಯ ಅಧಿನಿಯಮ 1927ರ

ಅಡಿಯಲ್ಲಿ ಮದ್ರಾಸ್ ಅರಣ್ಯ ಅಧಿನಿಯಮ, 1882ರ ಅಡಿಯಲ್ಲಿ ಅಥವಾ ಹೈದ್ರಾಬಾದು ಅರಣ್ಯ ಅಧಿನಿಯಮ, 1355 ಎಫ್. ಅಡಿಯಲ್ಲಿ ಒಂದು ಮೀಸಲು ಅರಣ್ಯವೆಂದು ಅಧಿಸೂಚಿಸಲಾದ ಯಾವುದೇ ಅರಣ್ಯವು, ಈ ಅಧಿನಿಯಮದ ಅಡಿಯಲ್ಲಿ ಒಂದು ಮೀಸಲು ಅರಣ್ಯವಾಗಿರತಕ್ಕದ್ದು:

ಪರಂತು, ಅಂಥ ಅರಣ್ಯದಲ್ಲಿನ ಯಾವುದೇ ಭೂಮಿಗೆ ಅಥವಾ ಭೂಮಿಯ ಮೇಲೆ ಅಥವಾ ಯಾವುದೇ ಅರಣ್ಯ ಉತ್ಪನ್ನದ ಮೇಲೆ ಖಾಸಗಿ ವ್ಯಕ್ತಿಗಳ ಹಕ್ಕುಗಳ ಬಗ್ಗೆ ರಾಜ್ಯ ಸರ್ಕಾರವು ಸಾಕಷ್ಟು ಸಮರ್ಪಕ ರೀತಿಯಲ್ಲಿ ವಿಚಾರಣೆ, ಇತ್ಯರ್ಥ ಮತ್ತು ದಾಖಲಾತಿ ಆಗಿಲ್ಲ ಎಂದು ಭಾವಿಸಿದರೆ ಅದು ಆ ಬಗ್ಗೆ ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು, ಇತ್ಯರ್ಥ ಮಾಡತಕ್ಕದ್ದು ಮತ್ತು ದಾಖಲ್ಮಾಡತಕ್ಕದ್ದು ಮತ್ತು ಅಂಥ ವಿಚಾರಣೆ ಇತ್ಯರ್ಥ ಮತ್ತು ದಾಖಲ್ಮಾಡುವುದು ಮುಗಿಯುವವರೆಗೆ ಈ ಪ್ರಕರಣವು ಜಾರಿಯಾಗಿ ಅಂಥ ಹಕ್ಕುಗಳನ್ನು ಮೊಟಕುಗೊಳಿಸತಕ್ಕದ್ದಲ್ಲ ಅಥವಾ ಅವು ಬಾಧಿತವಾಗತಕ್ಕದ್ದಲ್ಲ.

(2) ಅಂಥ ಅರಣ್ಯವನ್ನು ರಾಜ್ಯದ ಅರಣ್ಯವೆಂದು ಅಥವಾ ಮೀಸಲು ಅರಣ್ಯವೆಂದು ರಚಿಸುವುದಕ್ಕೆ ಸಂಬಂಧಪಟ್ಟಂತೆ ತೀರ್ಮಾನಿಸಲಾದ ಎಲ್ಲಾ ಪ್ರಶ್ನೆಗಳು, ಹೊರಡಿಸಲಾದ ಆದೇಶಗಳು ಮತ್ತು ತಯಾರಿಸಲಾದ ದಾಖಲೆಗಳನ್ನು ಈ ಅಧಿನಿಯಮದ ಅಡಿಯಲ್ಲಿ ತೀರ್ಮಾನಿಸಲಾಗಿದೆಯೆಂದು, ಹೊರಡಿಸಲಾಗಿದೆಯೆಂದು ಮತ್ತು ತಯಾರಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಮೀಸಲು ಅರಣ್ಯಗಳಿಗೆ ಸಂಬಂಧಪಡುವ ಈ ಅಧಿನಿಯಮದ ಉಪಬಂಧಗಳು (1)ನೇ ಉಪ ಪ್ರಕರಣದ ಉಪಬಂಧಗಳು ಅನ್ವಯಿಸುವಂತಹ ಅರಣ್ಯಗಳಿಗೆ ಅನ್ವಯವಾಗತಕ್ಕದ್ದು.

**24. ಮೀಸಲು ಅರಣ್ಯಗಳಲ್ಲಿ ನಿಷೇಧಿಸಲಾಗಿರುವ ಕಾರ್ಯಗಳು.-** ಯಾರೇ ವ್ಯಕ್ತಿಯು,-

(ಎ) 6ನೇ ಪ್ರಕರಣದ ಅಡಿಯಲ್ಲಿ ನಿಷೇಧಿಸಿದ್ದರೂ ಭೂಮಿ ಹಸನು ಮಾಡುವ, ಅಥವಾ

(ಬಿ) ಮೀಸಲು ಅರಣ್ಯಕ್ಕೆ ಬೆಂಕಿ ಹಚ್ಚುವ ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ರಚಿಸಿದ ಯಾವುದೇ ನಿಯಮಗಳನ್ನು ಉಲ್ಲಂಘಿಸಿ ಅಂಥ ಅರಣ್ಯಕ್ಕೆ ಅಪಾಯವನ್ನುಂಟು ಮಾಡುವಂಥ ರೀತಿಯಲ್ಲಿ ಬೆಂಕಿಯನ್ನು

ಹೊತ್ತಿಸುವ ಅಥವಾ ಯಾವುದೇ ಉರಿಯುತ್ತಿರುವ ಬೆಂಕಿಯನ್ನು ಬಿಡುವ, ಅಥವಾ

(ಸಿ) ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ರಚಿಸಿದ ಯಾವುವೇ ನಿಯಮಗಳನ್ನು ಉಲ್ಲಂಘಿಸಿ, ಮೀಸಲು ಅರಣ್ಯದಲ್ಲಿ,-

(i) ಅರಣ್ಯ ಅಧಿಕಾರಿಯವರು, ಈ ಸಂಬಂಧದಲ್ಲಿ ಅಧಿಸೂಚಿಸಬಹುದಾದಂಥ ಸಮಯದ ಹೊರತಾಗಿ ಯಾವುದೇ ಬೇರೆ ಸಮಯದದಲ್ಲಿ ಬೆಂಕಿಯನ್ನು ಹಚ್ಚುವ, ಇಡುವ ಅಥವಾ ಒಯ್ಯುವ,

(ii) ಅತಿಕ್ರಮಿಸುವ ಅಥವಾ ಜಾನುವಾರುಗಳನ್ನು ಮೇಯಿಸುವ ಅಥವಾ ಜಾನುವಾರುಗಳನ್ನು ಅತಿಕ್ರಮಿಸಲು ಬಿಡುವ,

(ಡಿ) ಯಾವುದೇ ಮರವನ್ನು ಕೆಡಹುವ ಅಥವಾ ಯಾವುದೇ ಚೌಬೀನೆಯನ್ನು ಕಡಿಯುವ ಅಥವ ಸಾಗಿಸುವಲ್ಲಿ ನಿರ್ಲಕ್ಷತೆಯಿಂದ ಯಾವುದೇ ಹಾನಿಯನ್ನುಂಟು ಮಾಡುವ,

(ಇ) ಯಾವುದೇ ಮರವನ್ನು ಕೆಡಹುವ, ಕತ್ತರಿಸುವ, ಸುತ್ತ ಪಟ್ಟೆಕೆತ್ತುವ, ಕೊಂಬೆ ಸವರುವ, ಕಚ್ಚು ಹಾಕುವ ಅಥವಾ ಸುಡುವ ಅಥವಾ ತೊಗಟೆಯನ್ನು ಅಥವಾ ಎಲೆಗಳನ್ನು ಅವುಗಳಿಂದ ತೆಗೆಯುವ ಅಥವಾ ಅದನ್ನು ಇತರ ರೀತಿಯಿಂದ ಹಾನಿಗೊಳಿಸುವ,

(ಎಫ್) ಕಲ್ಲನ್ನು ತೆಗೆಯುವ, ಸುಣ್ಣವನ್ನು ಅಥವಾ ಇದ್ದಿಲನ್ನು ಸುಡುವ ಅಥವಾ ಯಾವುದೇ ಅರಣ್ಯದ ಉತ್ಪನ್ನವನ್ನು ಸಂಗ್ರಹಿಸುವ, ಯಾವುದೇ ತಯಾರಿಕೆಗೆ ಒಲಪಡಿಸುವ ಅಥವಾ ಸಾಗಿಸುವ,

(ಜಿ) ಸಾಗುವಳಿಯ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು ಹಸನು ಮಾಡುವ ಅಥವಾ ಅಗೆದು ಮಟ್ಟ ಮಾಡುವ,

[1][(ಜಿಜಿ) ಯಾವುದೇ ಉದ್ದೇಶಕ್ಕಾಗಿ ಅನಧಿಕೃತವಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ,][1]

1. 1989ರ ಅಧಿನಿಯಮ 10ರ ಮೂಲಕ 16.03.1989ರಂದು ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಹೆಚ್) ಯಾವುದೇ ಕಲ್ಲುದಿಬ್ಬವನ್ನು, ಗೋಡೆಯನ್ನು, ಕಂದಕವನ್ನು, ಒಡ್ಡನ್ನು, ಬೇಲಿಯನ್ನು, ಹಸಿ ಬೇಲಿಯನ್ನು, ಕಟಕಟೆಯನ್ನು, ಹಾನಿಗೊಳಿಸುವ, ಮಾರ್ಪಡಿಸುವ ಅಥವಾ ತೆಗೆಯುವ,

(ಐ) ನೀರಿಗೆ ವಿಷ ಹಾಕುವ ಅಥವಾ ಡೈನಾಮೈಟ್ ಹಾಕುವ;

(ಜೆ) [1][ಯಾವುದೇ ಕಾನೂನು ಅಥವಾ ನಿಯಮಗಳನ್ನು ಉಲ್ಲಂಘಿಸಿ ಬೇಟೆ ಆಡುವುದಕ್ಕೆ ಬಳಸುವ ಬಂದೂಕುಗಳು ಅಥವಾ ಯವುದೇ ಇತರ

ಆಯುಧದೊಂದಿಗೆ ಯಾವುದೇ ಮೀಸಲು ಅರಣ್ಯ ಪ್ರದೇಶಗಳ ಬೇಟೆಯಾಡುವ,][1] ಗುಂಡು ಹಾರಿಸುವ, ಮೀನು ಹಿಡಿಯುವ ಅಥವಾ ಬೋನುಗಳನ್ನು ಇಡುವ, ಅಥವಾ ಬಲೆಗಳನ್ನು ಹಾಕುವ,

1. 1981ರ ಅಧಿನಿಯಮ 1ರ ಮೂಲಕ 23.02.1981ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

-ಅಥವಾ ಮೇಲೆ ನಿಷೇಧಿಸಲಾದ ಕಾರ್ಯಗಳ ಪೈಕಿ ಯಾವುದೇ ಕಾರ್ಯವನ್ನ ಮಾಡಲು ಪ್ರೇರೇಪಿಸುವ ಅಂಥ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ [1][ಒಂದು ವರ್ಷದವರೆಗೆ][1]ವಿಸ್ತರಿಸಬಹುದಾದ ಅವಧಿವರೆಗೆ ಕಾರಾವಾಸದಿಂದ ಅಥವಾ [1][ಎರಡು ಸಾವಿರ ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವರೆಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಪರಾದ ನಿರ್ಣಯ ಮಾಡುವ ನ್ಯಾಯಾಲಯವು, ಅರಣ್ಯಗಳಿಗೆ ಉಂಟಾದ ಹಾನಿಯ ಬಗ್ಗೆ ಸಂದಾಯ ಮಾಡಲು ನಿರ್ದೇಶಿಸಬಹುದಾದಂಥ ಪರಿಹಾರವನ್ನು ಸಂದಾಯ ಮಾಡುವುದಕ್ಕೂ ಹೊಣೆಯಾಗಿರತಕ್ಕದ್ದು.

1. 1989ರ ಅಧಿನಿಯಮ 10ರ ಮೂಲಕ 16.03.1989 ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**25. 24ನೇ ಪ್ರಕರಣದಿಂದ ಹೊರತುಪಡಿಸಲಾದ ಕಾರ್ಯಗಳು .-** (1) 24ನೇ ಪ್ರಕರಣದಲ್ಲಿರುವುದಾವುದೂ,-

(ಎ) 14ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳು, ಯಾವುದಾದರೂ ಇದ್ದರೆ, ಅವುಗಳಿಗನುಸಾರವಾಗಿ ಆ ಪ್ರಕರಣದ ಅಡಿಯಲ್ಲಿ ಮುಂದುವರಿಸಲಾದ ಯಾವುದೇ ಹಕ್ಕನ್ನು ಚಲಾಯಿಸುವುದನ್ನು, ಅಥವಾ

(ಬಿ) 20ನೇ ಪ್ರಕರಣದಲ್ಲಿ ವಿವರಿಸಲಾದಂತೆ ನೀಡಿಕೆ ಅಥವಾ ಕರಾರಿನ ಮೂಲಕ ಸೃಜಿಸಿದ ಯಾವುದೇ ಹಕ್ಕನ್ನು ಚಲಾಯಿಸುವುದು, ಅಥವಾ

(ಸಿ) ಆ ಬಗ್ಗೆ ವಿದ್ಯುಕ್ತವಾಗಿ ಅಧಿಕೃತನಾದ ಅರಣ್ಯ ಅಧಿಕಾರಿಯ ಲಿಖಿತ ಅನುಮತಿಯನ್ನು ಪಡೆದುಕೊಂಡು ಮಾಡಲಾದ ಅಥವಾ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯವನ್ನು,

- ನಿಷೇಧಿಸುವುದೆಂದು ಭಾವಿಸತಕ್ಕದ್ದಲ್ಲ.

**26. ಮೀಸಲು ಅರಣ್ಯಗಳಲ್ಲಿ ವಿಶೇಷಾಧಿಕಾರಗಳನ್ನು ನೀಡಬಹುದು.-** ರಾಜ್ಯ ಸರ್ಕಾರವು, ಯಾವುದೇ ಮೀಸಲು ಅರಣ್ಯದಲ್ಲಿ ಅರಣ್ಯವನ್ನು ಸುಸ್ಥಿತಿಯಲ್ಲಿಡುವುದಕ್ಕೆ

ಸಂಗತವಾಗಬಹುದಾದಂಥ ವಿಶೇಷಾಧಿಕಾರಗಳನ್ನು ಮಂಜೂರು ಮಾಡಬಹುದು, ಮತ್ತು ಕಾರಣವನ್ನು ಕೂಡದೆ, ಅಂಥ ಮಂಜೂರಾತಿಯನ್ನು ರದ್ದು ಮಾಡಬಹುದು:

ಪರಂತು, ಹಾಗೆ ಮಂಜೂರು ಮಾಡಲಾದ ಎಲ್ಲ ವಿಶೇಷಾಧಿಕಾರಿಗಳನ್ನು, 13ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಡೆಪ್ಯುಟಿ ಕಮಿಷನರು ಯಾವಾಗಲೂ ಮುಂಚಿತವಾಗಿಯೇ ನಿರ್ದಿಷ್ಟಪಡಿಸತಕ್ಕದ್ದು:

ಮತ್ತು ಪರಂತು, ಈ ಪ್ರಕರಣದ ಅಡಿಯಲ್ಲಿ ಯಾವುದೇ ವಿಶೇಷಾಧಿಕಾರವನ್ನು ಚಲಾಯಿಸುವುದು, ಅದಕ್ಕೆ ಹಕ್ಕುಳ್ಳವನಾಗಿರುವ ವ್ಯಕ್ತಿಯ ಉಪಯೋಗದ ಸಲುವಾಗಿ ಇರತಕ್ಕದ್ದು ಮತ್ತು ರಫ್ತು ವಿನಿಮಯ ಅಥವಾ ವ್ಯಾಪಾರದ ಉದ್ದೇಶಕ್ಕಾಗಿ ಇರತಕ್ಕದ್ದಲ್ಲ.

**27. ಮೀಸಲು ಅರಣ್ಯದಲ್ಲಿ ಹಕ್ಕುಳ್ಳ ವ್ಯಕ್ತಿಗಳು ಮಾಡಿದ ಅಪರಾಧಗಳ ಬಗ್ಗೆ ದಂಡಗಳು.-** ಮೀಸಲು ಅರಣ್ಯಗಳಲ್ಲಿ ಹಕ್ಕುಳ್ಳ ವ್ಯಕ್ತಿಯು ಅಥವಾ ಅವನ ನಿಯೋಜನೆಯಲ್ಲಿದ್ದ ಯಾವೊಬ್ಬ ವ್ಯಕ್ತಿಯು ಅಂಥ ಅರಣ್ಯದಲ್ಲಿ ಉದ್ದೇಶ ಪೂರ್ವಕವಾಗಿ ಅಥವಾ ಕೇವಲ ನಿರ್ಲಕ್ಷ್ಯದಿಂದ ಬೆಂಕಿ ಸಂಭವಿಸುವಂತೆ ಮಾಡಿದಾಗ ಅಥವಾ ಅಂಥ ಅರಣ್ಯದಲ್ಲಿ ಹಕ್ಕುಳ್ಳ ಯಾವೊಬ್ಬ ವ್ಯಕ್ತಿಯು 21ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದಾಗ, ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ದಂಡನೆಗೆ ಬಾಧಕವಾಗದಂತೆ, ಅಂಥ ಅರಣ್ಯದಲ್ಲಿ ಅಥವಾ ಅದರ ಯಾವುದೇ ನಿರ್ದಿಷ್ಟ ಭಾಗದಲ್ಲಿ ಮೇಯಿಸುವುದರ ಅಥವಾ ಅರಣ್ಯದ ಉತ್ಪನ್ನದ ಸಂಬಂಧದ ಎಲ್ಲ ಅಥವಾ ಯಾವುದೇ ಹಕ್ಕುಗಳನ್ನು ಅಂಥ ಯಾವೊಬ್ಬ ವ್ಯಕ್ತಿಯು ಚಲಾಯಿಸುವುದು ಅಳಿದು ಹೋಗತಕ್ಕದೆಂದು ಅಥವಾ ತನಗೆ ಸೂಕ್ತವೆನಿಸಬಹುದಾದ ಅವಧಿಯವರೆಗೆ ಅಮಾನತುಗೊಳಿಸತಕ್ಕದೆಂದು ನಿರ್ದೇಶಿಸಬಹುದು.

**28. ಅರಣ್ಯಗಳು ಇನ್ನು ಮುಂದೆ ಮೀಸಲು ಅರಣ್ಯಗಳಾಗಿರುವುದಿಲ್ಲವೆಂದು ಘೋಷಿಸಲು ಅಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ, ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಈ ಅಧಿನಿಯಮದ ಅಡಿಯಲ್ಲಿ ಮೀಸಲಾಗಿಟ್ಟ ಅರಣ್ಯವೆಂದು ನಿರ್ಮಿಸಲಾದ ಯಾವುದೇ ಅರಣ್ಯವು ಅಥವಾ ಅದರ ಯಾವುದೇ ಭಾಗವು ಮೀಸಲು ಅರಣ್ಯವಾಗಿರುವುದು ನಿಂತುಹೋಗುವುದೆಂದು ನಿರ್ದೇಶಿಸಬಹುದು :

[1][ಪರಂತು, ಅಂಥ ಯಾವುದೇ ಅಧಿಸೂಚನೆಯನ್ನು, ಆ ತಾತ್ಪರ್ಯದ ಒಂದು ನಿರ್ಣಯವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಂಗೀಕರಿಸಿದ್ದ ಹೊರತು, ಹೊರಡಿಸತಕ್ಕದ್ದಲ್ಲ.][1]

[2][ಮತ್ತು ಪರಂತು, ಅಂಥ ಯಾವುದೇ ನಿರ್ಣಯವು, ಯಾವುದೇ ಮೀಸಲು ಅರಣ್ಯದ ಅಥವಾ ಅದರ ಭಾಗದ ಅನಧಿಕೃತ ಅನುಭೋಗವನ್ನು ಸಕ್ರಮಗೊಳಿಸುವುದಕ್ಕೆ ಸಂಬಂಧಪಟ್ಟಿದ್ದಲ್ಲಿ, ಅಂಥ ಅನುಭೋಗವು ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 1978ಕ್ಕೆ ಪ್ರಾರಂಭಕ್ಕೆ ಮೊದಲಾಗಿದ್ದರೆ, ಅವಶ್ಯಕವಾಗತಕ್ಕದ್ದಲ್ಲ.][2]

1. 1974ರ ಅಧಿನಿಯಮ 23ರ ಮೂಲಕ 16.09.1974. ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1978ರ ಅಧಿನಿಯಮ 15ರ ಮೂಲಕ 27.04.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಹಾಗೆ ಉಲ್ಲೇಖಿಸಿದ ದಿನಾಂಕದಿಂದ ಅಂಥ ಅರಣ್ಯವು ಅಥವಾ ಭಾಗವು ಮೀಸಲು ಅರಣ್ಯವಾಗಿರುವುದು ನಿಂತುಹೋಗತಕ್ಕದ್ದು, ಆದರೆ ಅವುಗಳಲ್ಲಿ ಅಳಿದುಹೋಗಿದ್ದ ಹಕ್ಕುಗಳು, ಯಾವುದೇ ಇದ್ದರೆ, ಹೀಗೆ ನಿಂತು ಹೋಗುವಿಕೆಯ ಪರಿಣಾಮದಿಂದ ಪುನರುಜ್ಜೀವಿತವಾಗತಕ್ಕದ್ದಲ್ಲ.

## ಅಧ್ಯಾಯ- III

## ಗ್ರಾಮ ಅರಣ್ಯಗಳು

**29. ಗ್ರಾಮ ಅರಣ್ಯಗಳ ನಿರ್ಮಾಣ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಸರ್ಕಾರದ ವಶದಲ್ಲಿರುವ, ಯಾವುದೇ ಭೂಮಿಯನ್ನು, ಯಾವುದೇ ಗ್ರಾಮ ಸಮುದಾಯದ ಅಥವಾ ಗ್ರಾಮ ಸಮುದಾಯಗಳ ಗುಂಪಿನ ಪ್ರಯೋಜನಕ್ಕಾಗಿ ಗ್ರಾಮ ಅರಣ್ಯವಾಗಿ ರಚಿಸಬಹುದು ಮತ್ತು ಇದೇ ರೀತಿ ಯಾವುದೇ ಅಧಿಸೂಚನೆಯನ್ನು ವ್ಯತ್ಯಾಸಗೊಳಿಸಬಹುದಾದ ಅಥವಾ ರದ್ದು ಮಾಡಬಹುದು.

(2) ಅಂಥ ಪ್ರತಿಯೊಂದು ಅಧಿಸೂಚನೆಯ, ಅಂಥ ಗ್ರಾಮ ಅರಣ್ಯದ ಪರಿಮಿತಿಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

**30. ಗ್ರಾಮ ಅರಣ್ಯಗಳ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರಿ.-** (1) ರಾಜ್ಯ ಸರ್ಕಾರವು, ಗ್ರಾಮ ಅರಣ್ಯಗಳ ಆಡಳಿತವನ್ನು ಕ್ರಮಗೊಳಿಸುವುದಕ್ಕಾಗಿ ಯಾವುದೇ ಜನ ಸಮುದಾಯದ ಅಥವಾ ಜನ ಸಮುದಾಯಗಳ ಗುಂಪಿನ ಪ್ರಯೋಜನಕ್ಕಾಗಿ ಅಂಥ ಯಾವುದೇ ಅರಣ್ಯವು ನಿರ್ಮಿಸಲಾಗಿದೆಯೇ ಅಂಥ ಸಮುದಾಯಕ್ಕೆ ಅಥವಾ ಸಮುದಾಯಗಳ ಗುಂಪಿಗೆ ಅರಣ್ಯದ ಉತ್ಪನ್ನ ಅಥವಾ ಮೇವು ಒದಗಿಸುವ ಮತ್ತು ಅಂಥ

ಅರಣ್ಯದ ರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಅವರ ಕರ್ತವ್ಯಗಳನ್ನು ನಿಯಮಿಸುವುದಕ್ಕೆ ನಿಯಮಗಳನ್ನು ರಚಿಸಬಹುದು.

(2) ರಾಜ್ಯ ಸರ್ಕಾರವು, ಅಂಥ ನಿಯಮಗಳ ಮೂಲಕ ಈ ಅಧಿನಿಯಮದ IIನೇ ಅಧ್ಯಾಯದ ಎಲ್ಲ ಅಥವಾ ಯಾವುದೇ ಉಪಬಂಧಗಳು ಗ್ರಾಮ ಅರಣ್ಯಗಳಿಗೆ ಅನ್ವಯಿಸುವುದೆಂದು ಘೋಷಿಸಬಹುದು.

**31. ಹಕ್ಕುಗಳ ವಿಚಾರಣೆ ಮತ್ತು ಇತ್ಯರ್ಥ.-** ಒಂದು ಗ್ರಾಮ ಸಮುದಾಯದ ಅಥವಾ ಗ್ರಾಮ ಸಮುದಾಯಗಳ ಗುಂಪಿನ ಪ್ರಯೋಜನಕ್ಕಾಗಿ ರಚಿಸಲಾಗಿರುವ ಅಂಥ ಗ್ರಾಮ ಅರಣ್ಯವು ಆ ಗ್ರಾಮ ಸಮುದಾಯದ ಅಥವಾ ಗ್ರಾಮ ಸಮುದಾಯಗಳ ಗುಂಪಿನ ಆ ಹಕ್ಕುಗಳ ಹೊರತಾಗಿ ಇತರ ಹಕ್ಕುಗಳ ಸಂಬಂಧವಾದ ಎಲ್ಲ ಕ್ಲೇಮುಗಳನ್ನು ಈ ಅಧಿನಿಯಮದ IIನೇ ಅಧ್ಯಾಯದಲ್ಲಿ ಹೇಳಿದ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಮತ್ತು ಅವುಗಳಿಗೆ ಅವಕಾಶ ಮಾಡಿಕೊಡತಕ್ಕದ್ದು.

[1][**31ಎ. ಜಂಟಿ ಅರಣ್ಯಯೋಜನೆ ಮತ್ತು ಅರಣ್ಯದ ವ್ಯವಸ್ಥಾಪನೆಗಾಗಿ ಗ್ರಾಮ ಅರಣ್ಯ ಸಮಿತಿಯ ರಚನೆ.-** (1) ಜಂಟಿ ಅರಣ್ಯ ಯೋಜನೆ ಮತ್ತು ಅರಣ್ಯದ ವ್ಯವಸ್ಥಾಪನೆಗಾಗಿ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗ್ರಾಮ ಅಥವಾ ಗ್ರಾಮಗಳ ಗುಂಪಿನ ಸಂಬಂಧದಲ್ಲಿ, ಒಂದು ಗ್ರಾಮ ಅರಣ್ಯ ಸಮಿತಿಯನ್ನು ರಚಿಸಬಹುದು.

(2) ಸರ್ಕಾರವು ನಿಯಮಗಳ ಮೂಲಕ :-

(i) ಗ್ರಾಮ ಅರಣ್ಯ ಯೋಜನಾ ಸಮಿತಿಯ ಅಧಿಕಾರಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು;

(ii) ಸಮಿತಿಗೆ ಚುನಾವಣೆಗಳನ್ನು ನಡೆಸುವುದು;

(iii) ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಅರ್ಹತೆ ಮತ್ತು ಅನರ್ಹತೆಗಳು;

(iv) ಅರಣ್ಯಾಧಿಕಾರಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(v) ನಿರ್ವಹಣಾ ಯೋಜನೆಗಳನ್ನು ತಯಾರಿಸುವುದು ಮತ್ತು ಅವುಗಳ ನಿರ್ವಹಣೆ ;

(vi) ಸಮಿತಿಯಿಂದ ಅರಣ್ಯ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆ;

(vii) ಪಾಲುಮಾಡಿಕೊಳ್ಳುವ ವಿಧಾನ, ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳು;

(viii) ಆಡಳಿತಗಾರರ ಅಥವಾ ಆಡಳಿತ ಸಮಿತಿಗಳ ನೇಮಕ;

(ix) ವಿವಾದಗಳ ಇತ್ಯರ್ಥ;

(x) ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ; ಮತ್ತು

(xi) ಅದಕ್ಕೆ ಅನುಷಂಗಿಕವಾದ ಇತರ ಯಾವುದೇ ವಿಷಯ,

- ಇವುಗಳಿಗೆ ಉಪಬಂಧ ಕಲ್ಪಿಸಬಹುದು. ][1]

1. ಪ್ರಕರಣ 31ಎ ಅನ್ನು 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ – IV
## ಜಿಲ್ಲಾ ಅರಣ್ಯಗಳು

**32. ಜಿಲ್ಲಾ ಅರಣ್ಯಗಳಲ್ಲಿ ವಿಶೇಷಾಧಿಕಾರಗಳನ್ನು ಮಂಜೂರು ಮಾಡಲು ಅಧಿಕಾರ.-** ರಾಜ್ಯ ಸರ್ಕಾರವು, ಯಾವುದೇ ಜಿಲ್ಲಾ ಅರಣ್ಯದ ಬಗ್ಗೆ ನಿಯಮಿಸಲಾದ ಉದ್ದೇಶಗಳಿಗಾಗಿ ಅಗತ್ಯವಾದ ಅರಣ್ಯ ಉತ್ಪನ್ನವನ್ನು ವ್ಯವಸಾಯ ಮಾಡುವ ರೈತರು ಅಥವಾ ವ್ಯಕ್ತಿಗಳ ಇತರ ವರ್ಗಗಳು, ಸಾಗಿಸುವ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವ ವಿಶೇಷಾಧಿಕಾರಗಳನ್ನು ಮಂಜೂರು ಮಾಡಬಹುದು ಮತ್ತು ಆ ಬಗ್ಗೆ ಕಾರಣವನ್ನು ಕೊಡದ ಅಂಥ ಮಂಜೂರಾತಿಯನ್ನು ರದ್ದು ಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಯಾವುದೇ ವಿಶೇಷಾಧಿಕಾರವನ್ನು ಚಲಾಯಿಸುವುದು ಯಾವಾಗಲೂ ಅದಕ್ಕೆ ಹಕ್ಕುಳ್ಳವನಾಗಿರುವವನ ಉಪಯೋಗಕ್ಕಾಗಿರತಕ್ಕದ್ದಲ್ಲ ಮತ್ತು ರಫ್ತು ಅಥವಾ ವ್ಯಾಪಾರದ ಉದ್ದೇಶಕ್ಕಾಗಿರತಕ್ಕದ್ದಲ್ಲ.

**33. ಜಿಲ್ಲಾ ಅರಣ್ಯಗಳ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ.-** (1) ವ್ಯಕ್ತಿಗಳಲ್ಲಿ ಮತ್ತು ಜನ ಸಮುದಾಯಗಳಲ್ಲಿ ಈಗ ಕಾನೂನುಬದ್ಧವಾಗಿ ನಿಹಿತವಾದ ಎಲ್ಲ ಹಕ್ಕುಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು, ಯಾವುದೇ ಜಿಲ್ಲೆ ಅಥವಾ ಜಿಲ್ಲೆಯ ಭಾಗದ ಸಂಬಂಧದಲ್ಲಿ ಅಥವಾ ಸರ್ಕಾರದ ವಿಲೇಯಲ್ಲಿರುವ ಮೀಸಲು ಅಥವಾ ಗ್ರಾಮ ಅರಣ್ಯದಲ್ಲಿ ಸೇರಿಸಲ್ಪಡದಿರುವ ಯಾವುದಾದರೂ ಹುಲ್ಲುಗಾವಲಿನ ಮತ್ತು ಭೂಮಿಯ ಉಪಯೋಗವನ್ನು ನಿಯಂತ್ರಿಸಲು ನಿಯಮಗಳನ್ನು ರಚಿಸಬಹುದು.

(2) ಪೂರ್ವೋಕ್ತ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ,-

(i) ಮೀಸಲು ಮರಗಳೆಂದು ವರ್ಗೀಕರಿಸಿರದ ಕೆಲವು ಮರಗಳನ್ನು ಅನುಕೂಲಕರವಾದ, ಸರ್ಕಾರಿ ಪಾಲು ತೀರುವಳಿ (Seigniorage)

ದರದಲ್ಲಿ ಬೇಸಾಯಗಾರ ರೈತರಿಗೆ ಮಂಜೂರು ಮಾಡತಕ್ಕದ್ದೆಂದು ಘೋಷಿಸಬಹುದು.

(ii) ಯಾವುದೇ ಪ್ರದೇಶವನ್ನು ಇನ್ನು ಮುಂದೆ ಮೀಸಲು ಅರಣ್ಯವೆಂದು ಇತ್ಯರ್ಥಮಾಡುವ ಮತ್ತು ನಿರ್ಮಿಸುವ ದೃಷ್ಟಿಯಿಂದ ಅಥವಾ ಬೇರೆ ಯಾವುದೇ ಉದ್ದೇಶಕ್ಕಾಗಿ ವಿಶೇಷ ರಕ್ಷಣೆಯಲ್ಲಿ ಸರ್ಕಾರದ ವಶದಲ್ಲಿ ಇರಿಸುವುದಕ್ಕಾಗಿ ಉಪಬಂದಿಸಬಹುದು ಮತ್ತು ಅಂಥ ವಿಶೇಷ ರಕ್ಷಣೆಗೆ ಸಂಬಂಧಪಟ್ಟ ಷರತ್ತುಗಳನ್ನು ಮತ್ತು ದಂಡಗಳನ್ನು ನಿಯಮಿಸಬಹುದು.

(iii) ವ್ಯವಸಾಯಕ್ಕೆ ಅಥವಾ ಇತರ ಉದ್ದೇಶಗಳಿಗೆ ಭೂಮಿಯನ್ನು ಮಂಜೂರು ಮಾಡವುದನ್ನು ಮತ್ತು ಅದನ್ನು ಅಣಿ ಮಾಡುವುದನ್ನು ಹಾಗೂ ಮಟ್ಟ ಮಾಡುವುದನ್ನು ನಿಯಂತ್ರಸಬಹುದು ಅಥವಾ ನಿಷೇಧಿಸಬಹುದು.

[1][(iiiಎ) ಯಾವುದೇ ಉದ್ದೇಶಕ್ಕಾಗಿ ಭೂಮಿಯ ಅನಧಿಕೃತ ಅನುಭೋಗ ದಾರಿಕೆಯನ್ನು ನಿಷೇಧಿಸಬಹುದು;][1]

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iv) ಬೆಂಕಿ ಹೊತ್ತಿಸುವುದನ್ನು ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು ಮತ್ತು ಬೆಂಕಿ ಹರಡುವುದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ನಿಯಮಿಸಬಹುದು.

(v)ಯಾವುದೇ ಮರಗಳನ್ನು ಕೆಡಹುವುದು, ಕಡಿಯುವುದು, ಸುತ್ತುಪಟ್ಟಿ ಕೆತ್ತುವುದು, ಗರ್ತು ಮಾಡುವುದು, ಕೊಂಬೆ ಸವರುವುದು, ಕಚ್ಚು ಹಾಕುವುದು ಅಥವಾ ಬೆಂಕಿಯಿಂದ ಅಥವಾ ಬೇರೆ ರೀತಿಯಲ್ಲಿ ಹಾನಿ ಮಾಡುವುದನ್ನು ಮರಗಳನ್ನು ಮತ್ತು ಚೌಬೀನೆಯನ್ನು ಗರಗಸದಿಂದ ಕೊಯ್ಯುವುದು, ರೂಪಾಂತರಿಸುವುದು ಮತ್ತು ಸಾಗಿಸುವುದು ಮತ್ತು ಇತರ ಅರಣ್ಯದ ಉತ್ಪನ್ನವನ್ನು ಶೇಖರಿಸುವುದು ಮತ್ತು ಸಾಗಿಸುವುದನ್ನು ನಿಯಂತ್ರಿಸಬಹುದು.

(vi) ಕಲ್ಲು ಅಥವಾ ಕಾಂಕಲೆಯನ್ನು ತೆಗೆಯುವುದು ಸುಣ್ಣ ಅಥವಾ ಇದ್ದಲ್ಲನ್ನು ಸುಡುವುದು, ಅದಿರನ್ನು ಕರಗಿಸುವುದು ಅಥವಾ ಕಾಚನ್ನು ಕುದಿಸುವುದನ್ನು ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು;

(vii) ಹುಲ್ಲು ಕತ್ತರಿಸುವುದನ್ನು ಮತ್ತು ಜಾನುವಾರುಗಳನ್ನು ಮೇಯಿಸುವುದನ್ನು ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು ಮತ್ತು ಹಾಗೆ ಕತ್ತರಿಸಲು ಅಥವಾ ಮೇಯಿಸಲು ಮಾಡಬೇಕಾದ ಸಂದಾಯವನ್ನು (ಯಾವುದಾದರೂ ಇದ್ದಲ್ಲಿ) ನಿಯಮಿಸಬಹುದು;

(viii)ಬೇಟೆಯಾಡುವುದು, ಗುಂಡು ಹಾರಿಸುವುದು, ಬೇಟೆಗಾಗಿ ತಮಟೆ ಬಾರಿಸುವುದು ಅಥವಾ ಅಟ್ಟಿಸಿಕೊಂಡು ಬರುವುದು, ಮೀನು ಹಿಡಿಯುವುದು, ನೀರಿಗೆ ವಿಷ

ಹಾಕುವುದು ಅಥವಾ ನೀರನ್ನು ಡೈನಾಮೈಟ್‌ದಿಂದ ಆಸ್ಫೋಟಿಸುವುದು ಮತ್ತು ಬೋನುಗಳನ್ನು ಇಡುವುದು ಅಥವಾ ಬಲೆಗಳನ್ನು ಬೀಸುವುದನ್ನು ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು;

(ix) ಮಾರಾಟದ ಮೂಲಕ ಅಥವಾ ಉಚಿತವಾಗಿ ಕೊಡುವ ಮೂಲಕ ಚೌಬೀನೆ ಮತ್ತು ಇತರ ಅರಣ್ಯದಉತ್ಪನ್ನವನ್ನು ವಿಲೇ ಮಾಡುವುದನ್ನು ನಿಯಂತ್ರಿಸುವುದು;

(x) ಅಂಥ ಚೌಬೀನೆ ಮತ್ತು ಇತರ ಅರಣ್ಯದ ಉತ್ಪನ್ನದ ಕುರಿತು ಶುಲ್ಕ, ರಾಯಧನಗಳು ಅಥವಾ ಇತರ ಸಂದಾಯಗಳನ್ನು ಮತ್ತು ಅವು ವಿಧಿಸಲ್ಪಡತಕ್ಕ ರೀತಿಯನ್ನು ನಿಯಮಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವಾಗ ರಾಜ್ಯ ಸರ್ಕಾರವು ಆ ನಿಯಮವನ್ನು ಉಲ್ಲಂಘಿಸಿ ತಪ್ಪಿತಸ್ಥನಾಗಿರುವ ವ್ಯಕ್ತಿಯ ಅಪರಾಧ ನಿರ್ಣಯವಾದ ಬಳಿಕ, [1][ಮೂರು ತಿಂಗಳವರೆಗೆ][1] ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ [1][ಒಂದು ಸಾವಿರ ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದೆಂದು ಉಪಬಂಧಿಸಬಹುದು.

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) (2)ನೇ ಉಪ ಪ್ರಕರಣದ (ii)ನೆಯ ಖಂಡವನ್ನು ಅನುಸರಿಸಿ ರಚಿಸಲಾಗಿರುವ ನಿಯಮದ ಅಡಿಯಲ್ಲಿ ವಿಶೇಷ ರಕ್ಷಣೆಯಲ್ಲಿ ಇಡಲಾದ ಭೂಮಿಯನ್ನು "ರಕ್ಷಿತ ಅರಣ್ಯ" ವೆಂದು ಕರೆಯತಕ್ಕದ್ದು ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಹಾಗೆಂದು ವಿದ್ಯುಕ್ತವಾಗಿ ಅಧಿಸೂಚಿಸತಕ್ಕದ್ದು.

**34. ಉದ್ದೇಶಪೂರ್ವಕವಾಗಿ ಅಥವಾ ಕೇವಲ ನಿರ್ಲಕ್ಷ್ಯದಿಂದ ಬೆಂಕಿ ತಗಲಿದ ಸಂದರ್ಭಗಳಲ್ಲಿ ಹಕ್ಕುಗಳನ್ನು ಅಮಾನತುಗೊಳಿಸುವುದು.-** 33ನೇ ಪ್ರಕರಣದ (4)ನೇ ಉಪ ಪ್ರಕರಣದ ಅಡಿಯಲ್ಲಿ ರಕ್ಷಿತ ಅರಣ್ಯವೆಂಬುದಾಗಿ ಅದಿಸೂಚಿಸಲಾಗಿರುವ ಯಾವುದೇ ಭೂಮಿಯಲ್ಲಿ ಜಾನುವಾರುಗಳನ್ನು ಮೇಯಿಸುವ ಅಥವಾ ಅರಣ್ಯದ ಉತ್ಪಾದನೆಯನ್ನು ಪಡೆದಿಕೊಳ್ಳುವ ಹಕ್ಕುಗಳನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯು ಅಥವಾ ಅವನ ನಿಯೋಜನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, ಉದ್ದೇಶಪೂರ್ವಕವಾಗಿ ಅಥವಾ ಕೇವಲ ನಿರ್ಲಕ್ಷ್ಯದಿಂದ ಬೆಂಕಿಯನ್ನುಂಟು ಮಾಡಿದಾಗ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ದಂಡನೆಗೆ ಬಾಧಕವುಂಟಾಗದಂತೆ, ಅಂಥ ವ್ಯಕ್ತಿಯು ಜಾನುವಾರುಗಳನ್ನು ಮೇಯಿಸುವ ಅಥವಾ ಅರಣ್ಯದ ಉತ್ಪಾದನೆಯನ್ನು ಪಡೆದುಕೊಳ್ಳುವ ವಿಚಾರದಲ್ಲಿ ಹೊಂದಿರುವ ಎಲ್ಲ

ಅಥವಾ ಯಾವುದೇ ಹಕ್ಕುಗಳನ್ನು ಚಲಾಯಿಸುವುದನ್ನು ರಾಜ್ಯ ಸರ್ಕಾರವು, ತನಗೆ ಯುಕ್ತವೆಂದು ಕಂಡುಬರುವಂಥ ಕಾಲಾವಧಿಯವರೆಗೆ ಅಮಾನತುಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

**35. ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ನಿರ್ಮಿಸಲಾಗಿರುವ ಸಣ್ಣ ಅರಣ್ಯಗಳು.-** (1) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕಕ್ಕೆ ಮೊದಲು ಮೈಸೂರು ಅರಣ್ಯ ಅಧಿನಿಯಮ, 1900ರ ಅಡಿಯಲ್ಲಿ "ಸಣ್ಣ ಅರಣ್ಯ" ಎಂದು ಅಥವಾ ಭಾರತೀಯ ಅರಣ್ಯ ಅಧಿನಿಯಮ, 1927ರ ಅಡಿಯಲ್ಲಿ ಅಥವಾ ಹೈದರಾಬಾದ್ ಅರಣ್ಯ ಅಧಿನಿಯಮ, 1355-ಎಫ್ ಅಡಿಯಲ್ಲಿ "ರಕ್ಷಿತ ಅರಣ್ಯ" ಎಂದು ಅಧಿಸೂಚಿಸಲಾದ ರಾಜ್ಯದ ಯಾವುದೇ ಅರಣ್ಯವು, ಈ ಅಧಿನಿಯಮದ ಅಡಿಯಲ್ಲಿ ರಕ್ಷಿತ ಅರಣ್ಯಗಳಿಗೆ ಅನ್ವಯಿಸತಕ್ಕದ್ದು.

(2) ಅಂಥ ಅರಣ್ಯಗಳನ್ನು ನಿರ್ಮಿಸುವುದರ ಸಂಬಂಧದಲ್ಲಿ ತೀರ್ಮಾನಿಸಲಾಗಿರುವ ಎಲ್ಲ ಪ್ರಶ್ನೆಗಳು, ಹೊರಡಿಸಲಾದ ಆದೇಶಗಳು ಮತ್ತು ತಯಾರಿಸಲಾಗಿರುವ ದಾಖಲೆಗಳನ್ನು ಈ ಅಧಿನಿಯಮದ ಅಡಿಯಲ್ಲಿ ತೀರ್ಮಾನಿಸಲಾಗಿರುವುದಾಗಿ, ಹೊರಡಿಸಲಾಗಿರುವುದಾಗಿ ಮತ್ತು ತಯಾರಿಲಾಗಿರುವುದಾಗಿ ಭಾವಿಸತಕ್ಕದ್ದು.

## ಅಧ್ಯಾಯ-V
## ಸರ್ಕಾರದ ಸ್ವತ್ತಾಗಿರದ ಅರಣ್ಯಗಳ ಮತ್ತು ಭೂಮಿಗಳ ಮೇಲೆ ನಿಯಂತ್ರಣ

**36. ಅರ್ಥೈಸುವಿಕೆ** .- ಈ ಅಧ್ಯಾಯದ ಉದ್ದೇಶಕ್ಕಾಗಿ :-

(i) "ಅರಣ್ಯ ಎಂಬುದರಲ್ಲಿ ಮರಗಳು ಮತ್ತು ಕುರುಚುಲು ಮರಗಳು ಇರುವ ಯಾವುದೇ ಭೂಮಿ, ಹುಲ್ಲುಗಾವಲುಗಳು ಮತ್ತು ರಾಜ್ಯ ಸರ್ಕಾರವು ಈ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯ ಮೂಲಕ ಅರಣ್ಯವೆಂಬುದಾಗಿ ಘೋಷಿಸುವ ಯಾವುದೇ ಭೂಮಿಯೂ ಸೇರುತ್ತದೆ.

(ii)ಯಾವುದೇ ಅರಣ್ಯದ ಸಂಬಂಧದಲ್ಲಿ "ಮಾಲೀಕ" ಎಂಬುದರಲ್ಲಿ ಅಡಮಾನವಿಟ್ಟುಕೊಂಡಿರುವವನೂ, ಗುತ್ತಿಗೆದಾರನೂ ಅಥವಾ ಅರಣ್ಯದ ಸ್ವಾಧೀನ ಮತ್ತು ಉಪಬೋಗಕ್ಕೆ ಹಕ್ಕುಳ್ಳ ಇತರ ವ್ಯಕ್ತಿಯೂ ಸೇರಿರುತ್ತಾರೆ.

**37. ಖಾಸಗಿ ಅರಣ್ಯಗಳ ರಕ್ಷಣೆ**.- ಅರಣ್ಯದ ಮಾಲೀಕನು ಅಥವಾ ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚಿತವಾಗಿ ಅಥವಾ ಜಾರಿಗೆ ಬಂದ ತರುವಾಯ ಮಾಡಿಕೊಂಡಿರುವ ಕರಾರಿನ, ಲೈಸೆನ್ಸಿನ ಅಥವಾ ಇತರ ಯಾವುದೇ

ವ್ಯವಹಾರಕ್ಕನುಸಾರವಾಗಿ ಅವನ ಮೂಲಕವಾಗಿ ಕ್ಲೇಮು ಮಾಡುವ ಯಾವನೇ ವ್ಯಕ್ತಿಯ ಅಥವಾ ಇತರ ಯಾವೊಬ್ಬ ವ್ಯಕ್ತಿಯು, [1][ಅರಣ್ಯ ಉಪ ಸಂರಕ್ಷಣಾಧಿಕಾರಿಯಿಂದ][1] ಪೂರ್ವಾನುಮತಿಯನ್ನು ಪಡೆದುಕೊಳ್ಳದೆ ಮರಗಳನ್ನು ಕಡಿಯತಕ್ಕದ್ದಲ್ಲ ಅಥವಾ ಸುತ್ತುಪಟ್ಟಿ ಕೆತ್ತತಕ್ಕದ್ದಸಲ್ಲ ಅಥವಾ ಅರಣ್ಯವನ್ನು ನಾಶಗೊಳಿಸುವ ಅಥವಾ ಅರಣ್ಯದ ಉಪಯುಕ್ತತೆಯನ್ನು ಕಡಿಮೆಮಾಡುವ ಸಂಭವವಿರುವ ಯಾವ ಕಾರ್ಯವನ್ನೂ ಮಾಡತಕ್ಕದ್ದಲ್ಲ:

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಈ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಬಿದ್ದುಹೋಗಿರುವ ಮರಗಳನ್ನು ಸಾಗಿಸುವುದಕ್ಕೆ ಅಥವಾ ರೂಢಿಗತವಾಗಿ ಅಥವಾ ಮಾಲೀಕನು ಸ್ವಾಭಾವಿಕವಾಗಿ ವ್ಯವಸಾಯದ ಉಪಕರಣಗಳನ್ನು ತಯಾರಿಸುವುದಕ್ಕಾಗಿ ಮಾಡಿರುವ ಯಾವುದೇ ಕಾರ್ಯಕ್ಕೆ ಅನ್ವಯಿಸತಕ್ಕದ್ದಲ್ಲ.

(2) (1) ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಮತ್ತು ಅಂಥ ಅಧಿಸೂಚನೆಯಲ್ಲಿ ಉಲ್ಲಖಿಸಿದ ಕಾರಣಗಳಿಗಾಗಿ, ಯಾವುದೇ ವರ್ಗದ ಅರಣ್ಯಗಳನ್ನು ಅಥವಾ ಅದರಲ್ಲಿರತಕ್ಕ ಯಾವುದಾದರೂ ವರ್ಗದ ಮರಗಳನ್ನು ಅಥವಾ ಅರಣ್ಯದ ಯಾವುದೇ ಉತ್ಪನ್ನಗಳನ್ನು ಈ ಪ್ರಕರಣದ ಎಲ್ಲ ಅಥವಾ ಯಾವುದೇ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

**38. ನಿಯಮಗಳ ರಚನಾಧಿಕಾರ**.- 37ನೇ ಪ್ರಕರಣದ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು,-

(ಎ) ಯಾವ ವರ್ಗಗಳ ಅಥವಾ ಬಗೆಯ ಮರಗಳನ್ನು ಕಡಿಯಬಹುದು ಮತ್ತು ಅವುಗಳ ಸುತ್ತುಪಟ್ಟಿಯನ್ನು ಕೆತ್ತಬಹುದು ಎಂದು ಅನುಮತಿಯನ್ನು ಕೊಡುವ ಮತ್ತು ಅಂಥ ಮರಗಳ ಸುತ್ತಳತೆಯ ಎಷ್ಟಿರಬೇಕು ಎಂದು ನಿಗದಿ ಪಡಿಸುವ ಬಗ್ಗೆ;

(ಬಿ) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಅನುಮತಿಯನ್ನು ನೀಡಬಹುದು ಎಂಬ ಬಗ್ಗೆ; ಮತ್ತು

(ಸಿ) ಅನುಮತಿಯನ್ನು ಕೊಡುವುದಕ್ಕೆ ಮುಂಚೆ [1][ಅರಣ್ಯ ಉಪ ಸಂರಕ್ಷಣಾಧಿಕಾರಿಯು][1] ಅನುಸರಿಸಬೇಕಾದ ಪ್ರಕ್ರಿಯೆಯ ಬಗ್ಗೆ,

-ನಿಯಮಿಸಲು ನಿಯಮಗಳನ್ನು ರಚಿಸಬಹುದು.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**39. ವಿಶೇಷ ಉದ್ದೇಶಗಳಿಗಾಗಿ ಅರಣ್ಯಗಳ ರಕ್ಷಣೆ**.- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ,-

(ಎ) ಯಾವುದೇ ಅರಣ್ಯದಲ್ಲಿ,-

(i) ಯಾವುದೇ ಭೂಮಿಯನ್ನು ಮಟ್ಟಗೊಳಿಸುವುದನ್ನು ಅಥವಾ ಹಸನು ಮಾಡುವುದನ್ನು;

(ii) ಜಾನುವಾರುಗಳನ್ನು ಮೇಯಿಸುವುದನ್ನು;

(iii) ಸಸ್ಯಗಳಿಗೆ ಬೆಂಕಿ ಹಚ್ಚುವುದನ್ನು ಅಥವಾ ಕಡಿದು ಹಸನುಗೊಳಿಸುವುದನ್ನು;

(iv) ಯಾವುದೇ ಮರಕ್ಕೆ ಸುತ್ತುಪಟ್ಟಿ ಕಟ್ಟುವುದನ್ನು, ಕಚ್ಚು ಹಾಕುವುದನ್ನು ಅಥವಾ ಸುಡುವುದನ್ನು ಅಥವಾ ಯಾವುದೇ ಮರದಿಂದ ತೊಗಟೆಯನ್ನು ಅಥವಾ ಎಲೆಗಳನ್ನು ತೆಗೆದುಹಾಕುವುದನ್ನು;

(v) ಮರಗಳ ಕೊಂಬೆಗಳನ್ನು ಕತ್ತರಿಸುವುದನ್ನು ಅಥವಾ ಅವುಗಳನ್ನು ಸವರಿ ಗುಂಡಗೆ ಮಾಡುವುದನ್ನು;

(vi) ಮರಗಳನ್ನು ಮತ್ತು ಚೌಬೀನೆಯನ್ನು ಕತ್ತರಿಸುವುದನ್ನು, ಗರಗಸದಿಂದ ಕೊಯ್ಯುವುದನ್ನು, ಪರಿವರ್ತಿಸುವುದನ್ನು, ಅಥವಾ ಸಾಗಿಸುವುದನ್ನು; ಅಥವಾ

(vii) ಕಲ್ಲುಗಳನ್ನು ತೆಗೆಯುವುದನ್ನು ಅಥವಾ ಸುಣ್ಣವನ್ನು ಅಥವಾ ಕಲ್ಲಿದ್ದಲನ್ನು ಸುಡುವುದನ್ನು ಅಥವಾ ಅರಣ್ಯದ ಯಾವುದೇ ಉತ್ಪನ್ನವನ್ನು ಸಂಗ್ರಹಿಸುವುದನ್ನು ಅಥವಾ ಅದನ್ನು ಯಾವುದೇ ತಯಾರಿಕೆಯ ಪ್ರಕ್ರಿಯೆಗೆ ಒಳಪಡಿಸುವುದನ್ನು,

-ನಿಯಂತ್ರಿಸಬಹುದು, ಅಥವಾ ನಿಷೇಧಿಸಬಹುದು,

(ಬಿ) ಯಾವುದೇ ಅರಣ್ಯದಲ್ಲಿ ಅರಣ್ಯಗಳ ಪುನರ್‌ನಿರ್ಮಾಣ ಮತ್ತು ಬೆಂಕಿಯಿಂದ ಅವುಗಳ ಸುರಕ್ಷೆಯನ್ನು ನಿಯಂತ್ರಸಬಹುದು,

(ಸಿ) ಅಂಥ ಅರಣ್ಯ ಅಥವಾ ಅರಣ್ಯಗಳಲ್ಲಿ ಸಾಂಪ್ರಧಾಯಿಕ ಮತ್ತು ದೀರ್ಘಕಾಲಿಕ ಹಕ್ಕುಗಳನ್ನು ಚಲಾಯಿಸುವುದನ್ನು ನಿಯಂತ್ರಸಬಹುದು .

(2) ಹಾಗೆ ನಿಯಂತ್ರಿಸುವುದು ಅಥವಾ ನಿಷೇಧಿಸುವುದು ಅವಶ್ಯಕವೆಂದು ಕಂಡುಬಂದಾಗ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ,-

(ಎ) ಮರಗಳ ಹಾಗೂ ಅರಣ್ಯಗಳ ಸಂರಕ್ಷಣೆಗಾಗಿ;

(ಬಿ) ಮೇಲ್ಮಣ್ಣಿನ ಸಂರಕ್ಷಣೆ ಮತ್ತು ಅಭಿವೃದ್ಧಿ ಅಥವಾ ಉಪ್ಪುಗೂಡಿದ ಅಥವಾ ನೀರು ನಿಂತ ಭೂಮಿಯನ್ನು ಪುನಃ ಪಡೆಯುವುದು, ಭೂಪಾತ್ರಗಳನ್ನು ತಡೆಗಟ್ಟುವುದು ಅಥವಾ ದರಿಗಳು ಅಥವಾ ನುಗ್ಗು ಹೊನಲುಗಳು ಆಗದಂತೆ ತಡೆಗಟ್ಟುವುದು ಅಥವಾ ಭೂಮಿಯು ಸವೆದುಹೋಗದಂತೆ ರಕ್ಷಿಸುವುದು ಅಥವಾ ಅದರ ಮೇಲೆ ಮರಳು, ಕಲ್ಲುಗಳು ಅಥವಾ ಕಂಕರೆ ಸೇರದಂತೆ ರಕ್ಷಿಸುವುದು;

(ಸಿ) ಗೋಮಾಳ ಭೂಮಿಯನ್ನು ಉತ್ತಮಗೋಳಿಸುವುದಕ್ಕಾಗಿ;

(ಡಿ) ಚಿಲುಮೆಗಳು, ನದಿಗಳು ಮತ್ತು ಕೆರೆಗಳಲ್ಲಿ ನೀರು ಇರುವಂತೆ ನೋಡಿಕೊಳ್ಳುವುದಕ್ಕಾಗಿ;

(ಇ) ಮೇವು, ಎಲೆಗಳ ಗೊಬ್ಬರ, ಚೌಬೀನೆ ಅಥವಾ ಸೌದೆಗಳ ಸರಬರಾಜನ್ನು ಮುಂದುವರಿಸಿಕೊಂಡು ಬರುವುದು, ಅವುಗಳನ್ನು ಹೆಚ್ಚಿಸುವುದು ಮತ್ತು ಹಂಚುವುದಕ್ಕಾಗಿ;

(ಎಫ್) ಜಲಾಶಯಗಳು ಅಥವಾ ನೀರಾವರಿ ಕಾಮಗಾರಿಗಳು ಮತ್ತು ಜಲ ವಿದ್ಯುತ್ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಬರುವುದಕ್ಕಾಗಿ;

(ಜಿ) ಮಳೆ, ಬಿರುಗಾಳಿ, ಗಾಳಿ, ಉರುಳಿ ಬೀಳುವ ಕಲ್ಲುಗಳು, ಪ್ರವಾಹಗಳು ಮತ್ತು ಅನಾವೃಷ್ಟಿಗಳಿಂದ ರಕ್ಷಿಸುವುದಕ್ಕಾಗಿ;

(ಹೆಚ್) ರಸ್ತೆಗಳು, ಸೇತುವೆಗಳು, ರೈಲು ಮಾರ್ಗಗಳೂ ಮತ್ತು ಇತರ ಸಂಪರ್ಕ ಮಾರ್ಗಗಳನ್ನು ರಕ್ಷಿಸುವುದಕ್ಕಾಗಿ; ಮತ್ತು

(ಐ) ಸಾರ್ವಜನಿಕ ಆರೋಗ್ಯ ಸಂರಕ್ಷಣೆಗಾಗಿ,

-ಉಪಬಂಧ ಕಲ್ಪಿಸಬಹುದು.

(3) ರಾಜ್ಯ ಸರ್ಕಾರವು (1)ನೇ ಮತ್ತು (2)ನೇ ಉಪ ಪ್ರಕರಣಗಳಲ್ಲಿ ನಿರ್ದೇಶಿಸಲಾದ ಯಾವುದೇ ಉದ್ದೇಶಕ್ಕಾಗಿ, ತನ್ನ ಸ್ವಂತ ಖರ್ಚಿನಿಂದ ಯಾವುದೇ ಅರಣ್ಯದಲ್ಲಿ ಸೂಕ್ತವೆನಿಸಿದ ಕಾಮಗಾರಿಗಳನ್ನು ಮಾಡಬಹುದು.

**40. ಅಪೀಲುಗಳು.-** 37ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಆ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಮಂಜೂರಾತಿಯ ಅಥವಾ ಅನುಮತಿಯ ಬಗ್ಗೆ ಹೊರಡಿಸಲಾದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆ ಆದೇಶವು ತಲುಪಿದ ಮೂವತ್ತು ದಿನಗಳೊಳಗಾಗಿ ಲಿಖಿತದ ಮೂಲಕ ಡೆಪ್ಯುಟಿ ಕಮೀಷನರು, ನಿಯಮಿಸಲಾದ ಪ್ರಕ್ರಿಯೆಯನ್ನು ಅನುಸರಿಸಿದ ಬಳಿಕ ಅದರ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದ ಆದೇಶಗಳನ್ನು ಮಾಡಬಹುದು.

**41. ದಂಡನೆಗಳು**.- (1) 37ನೇ ಪ್ರಕರಣದ (1)ನೇ ಉಪ ಪ್ರಕರಣದ ಉಪಬಂಧಗಳನ್ನು ಅಥವಾ 38ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಅಥವಾ 39ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಇತರ ಯಾವುದೇ ಕಾರ್ಯಕ್ಕೆ ಬಾಧಕವಾಗದಂತೆ, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

[2][[1][(2) xx xx xx][1]][2]

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**42. ದಾವೆಗಳಿಗೆ ಪ್ರತಿಬಂಧ.-** ರಾಜ್ಯ ಸರ್ಕಾರದ ಯಾವುದೇ ಆದೇಶವನ್ನು ಅಥವಾ ಈ ಅಧಿನಿಯಮದ ಅಡಿಯಲ್ಲಿ [1][ಅರಣ್ಯ ಉಪ ಸಂರಕ್ಷಣಾಧಿಕಾರಿಯ][1] ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅರಣ್ಯ ಅಧಿಕಾರಿಯ ಆದೇಶವನ್ನು ಮತ್ತು 39ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಿಂದ ಹೊರಡಿಸಲಾದ ಯಾವುದೇ ಅಧಿಸೂಚನೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**43. ಅರಣ್ಯಗಳ ಆಡಳಿತವನ್ನು ವಹಿಸಿಕೊಳ್ಳಲು ಅಧಿಕಾರ.-** (1) 37ನೇ ಪ್ರಕರಣದ ಉಪಬಂಧಗಳನ್ನು ಅಥವಾ 38ನೇ ಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ನಿರ್ಲಕ್ಷಿಸಿದ್ದಲ್ಲಿ ಅಥವಾ 39ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ವಿನಿಯಮವನ್ನು ಅಥವಾ ಪ್ರತಿಬಂಧವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದ್ದಲ್ಲಿ ಅಥವಾ ಆ ಪ್ರಕರಣದ ಅಡಿಯಲ್ಲಿ ನಿರ್ಮಿಸಬೇಕಾದ ಕಾಮಗಾರಿಯ ಉದ್ದೇಶಗಳು ಹಾಗೆ ಅಗತ್ಯಪಡಿಸಿದಲ್ಲಿ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಅರಣ್ಯದ ಸಂರಕ್ಷಣೆ ಮತ್ತು ರಕ್ಷಣೆಗಳಿಗಾಗಿ ಅಂಥ ಅರಣ್ಯದ ಆಡಳಿತವನ್ನು ವಹಿಸಿಕೊಳ್ಳುವುದು ಅವಶ್ಯಕವಾಗಿದೆಯೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಲ್ಲಿ, ಅಂಥ ಅರಣ್ಯದ ಮಾಲೀಕನಿಗೆ ಲಿಖಿತ ನೋಟೀಸನ್ನು ಕೊಟ್ಟ ಆನಂತರ ಮತ್ತು ಈ ಬಗ್ಗೆ ಆತನ ಆಕ್ಷೇಪಗಳೇನಾದರೂ ಇದ್ದರೆ, ಅವುಗಳನ್ನು ಪರಿಗಣಿಸಿದ ನಂತರ, ಅಧಿಸೂಚನೆಯನ್ನು ಹೊರಡಿಸುವುದರ ಮೂಲಕ ಮೀಸಲು ಅರಣ್ಯಗಳಿಗೆ ಸಂಬಂಧಪಟ್ಟ

ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳು ಅಂಥ ಅರಣ್ಯಕ್ಕೆ ಅನ್ವಯಿಸತಕ್ಕದ್ದೆಂದು ರಾಜ್ಯ ಸರ್ಕಾರವು ಘೋಷಿಸಬಹುದು. ಈ ಉಪ ಪ್ರಕರಣದ ಅಡಿಯಲ್ಲಿ ಯಾವುದೊಂದು ಅರಣ್ಯದ ಆಡಳಿತವನ್ನು ವಹಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಅಧಿಸೂಚನೆಯು ನಿರ್ಣಾಯಕವಾಗಿರತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ಮತ್ತು ಅರಣ್ಯದ ಆಡಳಿತವನ್ನು ವಹಿಸಿಕೊಳ್ಳುವ ಬಗ್ಗೆ ಹೊರಡಿಸಲಾದ ಅಧಿಸೂಚನೆ ಯಾವುದಾದರೂ ಇದ್ದರೆ, ಅದನ್ನು ಸಮನುಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರಲ್ಲಿ (1908ರ ಕೇಂದ್ರ ಅಧಿನಿಯಮ V) ಉಪಬಂಧಿಸಿರುವ ರೀತಿಯಲ್ಲಿ ಅಂಥ ಅರಣ್ಯದ ಮಾಲೀಕನಿಗೆ ಜಾರಿ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು ಅರಣ್ಯದ ಆಡಳಿತವನ್ನು ನೋಡಿಕೊಳ್ಳುವುದು, ರಾಜ್ಯಪತ್ರದಲ್ಲಿ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯ ಪ್ರಕಟಿಸುವ ದಿನಾಂಕದಿಂದ ಪ್ರಾರಂಭವಾಗಿದೆಯೆಂದು ಭಾವಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅರಣ್ಯದ ಪ್ರಭಾರದಲ್ಲಿರಲು ಒಬ್ಬ ಅರಣ್ಯ ಅಧಿಕಾರಿಯನ್ನು ನೇಮಿಸತಕ್ಕದ್ದು.

(4) (ಎ) ರಾಜ್ಯ ಸರ್ಕಾರವು, ಅರಣ್ಯದ ಆಡಳಿತ ನಿರ್ವಹಣೆಯ ಕಾಲದಲ್ಲಿ ನಿಯಮಿಸಲಾದ ನಿಯತ ಕಾಲಗಳಲ್ಲಿ ಅರಣ್ಯದ ಮಾಲೀಕನಿಗೆ ಪರಿಹಾರಗಳನ್ನು ಕೊಡತಕ್ಕದ್ದು; ಆ ಪರಿಹಾರವು,-

(i) ಪ್ರತಿ ವರ್ಷ ಎಕರೆಯೊಂದಕ್ಕೆ ಹತ್ತು ಪೈಸೆಗಳ ದರದಲ್ಲಿ ಅರಣ್ಯಗಳ ಸಂರಕ್ಷಕರು ನಿರ್ಧರಿಸಿದಂತೆ ಅರಣ್ಯದ ಒಟ್ಟು ಪ್ರದೇಶದ ಮೇಲೆ ಲೆಕ್ಕಹಾಕಲಾದಂಥ ಭತ್ಯದ; ಮತ್ತು

(ii) ಅರಣ್ಯದ ಕಾರ್ಯನಿರ್ವಹಣೆ ಮತ್ತು ಆಡಳಿತದಿಂದ ಪ್ರಾಪ್ತವಾದ ನಿವ್ವಳ ಲಾಭಗಳು, ಯಾವುದಾದರೂ ಇದ್ದರೆ, ಅವುಗಳ,

-ಒಟ್ಟು ಮೊಬಲಗಾಗಿರತಕ್ಕದ್ದು.

(ಬಿ) ನಿವ್ವಳ ಲಾಭವನ್ನು ಲೆಕ್ಕ ಮಾಡುವ ಉದ್ದೇಶಕ್ಕಾಗಿ, ಅರಣ್ಯದಲ್ಲಿ ಕಾರ್ಯನಿರ್ವಹಣೆ ಮತ್ತು ಆಡಳಿತಕ್ಕಾಗಿ ವಹಿಸಿದ ಒಟ್ಟು ವೆಚ್ಚವನ್ನು ಲೆಕ್ಕದ ದಿನಾಂಕದವರೆಗೆ ಕಾರ್ಯನಿರ್ವಹಣೆ ಮತ್ತು ಆಡಳಿತದಿಂದ ಬಂದ ಒಟ್ಟು ವರಮಾನ ಇವುಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು ಮತ್ತು ಯಾವುದೇ ಕೊರತೆಯ ಮೊಬಲಗು ಭರ್ತಿಯಾಗುವವರೆಗೆ ಮತ್ತು ಉಳಿತಾಯ ಉಂಟಾಗುವವರೆಗೆ ವರ್ಷದಿಂದ ವರ್ಷಕ್ಕೆ ನಿಯಮಿಸಲಾದ ದರದ ಬಡ್ಡಿಯೊಡನೆ ಮುಂದಕ್ಕೆ ಹಾಕತಕ್ಕದ್ದು.

(5) (ಎ) ಆಡಳಿತ ನಿರ್ವಣೆಯ ಕಾಲದಲ್ಲಿ ರಾಜ್ಯ ಸರ್ಕಾರವು, ಅರಣ್ಯದ ಕಾರ್ಯನಿರ್ವಹಣೆ ಮತ್ತು ಆಡಳಿತ ನಿರ್ವಹಣೆಯಿಂದ ಬರುವ ಎಲ್ಲ ಆದಾಯಗಳನ್ನು ಪಡೆಯತಕ್ಕದ್ದು ಮತ್ತು ಅಂಥ ಅರಣ್ಯದಲ್ಲಿ ಕಾರ್ಯನಿರ್ವಹಣೆಗಾಗಿ ಮತ್ತು ಆಡಳಿತಕ್ಕಾಗಿ ವಹಿಸಿದ ಎಲ್ಲ ವೆಚ್ಚವನ್ನೂ ಕೊಡತಕ್ಕದ್ದು ಮತ್ತು ಆಡಳಿತದ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದ ಯಾವುದೇ ವೆಚ್ಚಕ್ಕೆ ಯಾವುದೇ ಆಕ್ಷೇಪಣೆ ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(ಬಿ) ರಾಜ್ಯ ಸರ್ಕಾರವು, ಅರಣ್ಯದ ಆದಾಯ ಮತ್ತು ವೆಚ್ಚದ ಲೆಕ್ಕವನ್ನಿಡತಕ್ಕದ್ದು ಮತ್ತು ಮಾಲೀಕನು ಕೋರಿದರೆ ಅವನಿಗೆ, ಹಾಗೆ ಇಡಲಾದ ವಾರ್ಷಿಕ ಲೆಕ್ಕದ ಉದ್ಧೃತ ಭಾಗವನ್ನು ಒದಗಿಸತಕ್ಕದ್ದು.

**44. ಆಡಳಿತವನ್ನು ವಹಿಸಿಕೊಂಡುದರ ಪರಿಣಾಮಗಳು.-** 43ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಅರಣ್ಯದ ಆಡಳಿತವನ್ನು ವಹಿಸಿಕೊಂಡಾಗ ಈ ಕೆಳಗಿನ ಪರಿಣಾಮಗಳುಂಟಾಗತಕ್ಕದ್ದು,-

(ಎ) ಇತ್ಯರ್ಥವಾಗದಿರುವ ಎಲ್ಲ ಕಾನೂನುಬಧ್ಧ ವ್ಯವಹರಣೆಗಳು ಮತ್ತು ಅರಣ್ಯದ ಅಥವಾ ಅದರ ಒಂದು ಭಾಗದ ವಿರುಧ್ಧ ಜಾರಿ ಮಾಡಬಹುದಾದ ಋಣಗಳಿಗೆ ಮತ್ತು ಹೊಣೆಗಳಿಗೆ ಸಂಬಂಧಿಸಿದ ಎಲ ಪ್ರೊಸೆಸ್ಸುಗಳು, ಜಾರಿಗೊಳಿಸುವ ಕ್ರಮಗಳು ಅಥವಾ ಜಪ್ತಿಗಳು ಅಮಾನತುಗೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆಡಳಿತವು ಮುಂದುವರಿಸುತ್ತಿರುವವರಿಗೆ ಅವುಗಳ ಸಂಬಂಧದಲ್ಲಿ ಯಾವುದೇ ಹೊಸ ವ್ಯವಹರಣೆಗಳು, ಪ್ರೊಸೆಸ್ಸುಗಳು, ಜಾರಿ ಕ್ರಮಗಳು ಅಥವಾ ಜಪ್ತಿಗಳನ್ನು ಹೂಡತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ, ಒತ್ತಾಯಪಡಿಸತಕ್ಕದ್ದಲ್ಲ ಅಥವಾ ಜಾರಿ ಮಾಡತಕ್ಕದ್ದಲ್ಲ.

(ಬಿ) ರಾಜ್ಯ ಸರ್ಕಾರದ ಆಡಳಿತವು ಮುಂದುವರೆಯುವವರೆಗೆ ಅರಣ್ಯದ ಮಾಲೀಕನು,-

(i) ಅರಣ್ಯದ ಸಂಬಂಧದಲ್ಲಿ ಯಾವುದೇ ಕರಾರು ಮಾಡಿಕೊಳ್ಳಲು;

(ii) ಆ ಅರಣ್ಯವನ್ನು ಅದರ ಯಾವುದೇ ಭಾಗವನ್ನು ಅಥವಾ ಯಾವುದೇ ಉತ್ಪನ್ನವನ್ನು ಅಡಮಾನ ಮಾಡಲು, ಹೊಣೆಗೆ ಗುರಿ ಮಾಡಲು, ಗುತ್ತಿಗೆಗೆ ಕೊಡಲು ಅಥವಾ ಪರಭಾರೆ ಮಾಡಲು; ಅಥವಾ

(iii) ಅವುಗಳಿಂದ ಉಂಟಾಗುವ ಅಥವಾ ಲಾಭಗಳಿಗೆ ಕಾನೂನು ಸಮ್ಮತ ರಸೀದಿಗಳನ್ನು ಕೊಡಲು ಸಕ್ಷಮನಾಗಿರತಕ್ಕದ್ದಲ್ಲ.

(ಸಿ) ರಾಜ್ಯ ಸರ್ಕಾರದ ಆಡಳಿತವು ಮುಂದುವರೆಯುವವರೆಗೆ, ರಾಜ್ಯ ಸರ್ಕಾರದ ಆದೇಶಗಳಿಗೊಳಪಟ್ಟು ಅರಣ್ಯದ ಪ್ರಭಾರದಲ್ಲಿ ಇಡಲಾದ ಅರಣ್ಯ ಅಧಿಕಾರಿಯ ಹೊರತಾಗಿ

ಇತರ ವ್ಯಕ್ತಿಯು (ಬಿ) ಖಂಡದ (i) (ii) ಮತ್ತು (iii)ನೇ ಉಪಖಂಡಗಳಲ್ಲಿ ಉಲ್ಲೇಖಿಸಲಾದ ಕಾರ್ಯಗಳನ್ನು ಮಾಡಲು ಸಕ್ಷಮನಾಗಿರತಕ್ಕದ್ದಲ್ಲ.

(ಡಿ) ರಾಜ್ಯ ಸರ್ಕಾರದ ಆದೇಶಗಳಿಗೊಳಪಟ್ಟು, ಅರಣ್ಯದ ಪ್ರಭಾರದಲ್ಲಿ ಇರುವ ಅರಣ್ಯ ಅಧಿಕಾರಿಯು, ಆ ಅರಣ್ಯದ ಆಡಳಿತ ಅವಧಿಯಲ್ಲಿ ಆಡಳಿತದ ಉದ್ದೇಶಗಳ ಬಗ್ಗೆ ಮಾಲೀಕನು ಚಲಾಯಿಸಬಹುದಾದಂಥ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಆಡಳಿತಕ್ಕೊಳಪಟ್ಟ ಸ್ವತ್ತಿನ ಸಂಬಂಧವಾಗಿ ಸಲ್ಲತಕ್ಕ ಎಲ್ಲ ಗೇಣಿಗಳನ್ನು ಮತ್ತು ಲಾಭಗಳನ್ನು ಪಡೆಯತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು ಮತ್ತು ಆ ಉದ್ದೇಶಗಳ ಬಗ್ಗೆ ಮಾಲೀಕನ ಯಾವುದೇ ಅಧಿಕಾರಗಳ ಜೊತೆಗೆ ಅರಣ್ಯ ಅಧಿಕಾರಿಯು ಒಂದು ಮೀಸಲು ಅರಣ್ಯದ ಸಂಬಂಧವಾಗಿ ಅವನು ಚಲಾಯಿಸಬಹುದಾದಂಥ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಸಕ್ಷಮನಾಗಿರತಕ್ಕದ್ದು.

**45. ಆಡಳಿತದ ಅವಧಿ.-** (1) ಯಾವುದೇ ಅರಣ್ಯದ ಆಡಳಿತದ ಅವಧಿಯು, 43ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಹತ್ತು ವರ್ಷಗಳಾಗಿರತಕ್ಕದ್ದು, ಆದರೆ, ಅಂಥ ಅವಧಿಯನ್ನು ಆಮೇಲೆ ಪ್ರತಿ ಹತ್ತು ವರ್ಷಗಳ ಅವಧಿಗಿಂತ ಹೆಚ್ಚಾಗಿರದ ತದನಂತರ ಅನುಕ್ರಮವಾಗಿ ಬರುವ ಕಾಲಾವಧಿಗಳವರೆಗೆ ಅಧಿಸೂಚನೆಯ ಮೂಲಕ ವಿಸ್ತರಿಸಬಹುದು :

ಪರಂತು, ಅಂಥ ಆಡಳಿತದ ಅವಧಿಯು, ಒಟ್ಟಿನಲ್ಲಿ 43ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅರಣ್ಯದ ಆಡಳಿತವನ್ನು ವಹಿಸಿಕೊಳ್ಳುವ ಬಗ್ಗೆ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ವರ್ಷಗಳಿಗೆ ಮೀರತಕ್ಕದ್ದಲ್ಲ.

(2) ಅರಣ್ಯವನ್ನು ಯಾರ ಆಡಳಿತದಲ್ಲಿ ಇಡಲಾಗಿದೆಯೋ ಆ ಅರಣ್ಯ ಅಧಿಕಾರಿಯು, (1)ನೇ ಉಪ ಪ್ರಕರಣದಲ್ಲಿ ನಿರ್ದೇಶಿಸಲಾದ ಯಾವುದೇ ಅವಧಿಯು ಮುಗಿಯುವುದಕ್ಕೆ ಆರು ತಿಂಗಳುಗಳಿಗೆ ಮೊದಲು ಅಂಥ ನಿಯಂತ್ರಣದ ಬಗ್ಗೆ ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಅದರಲ್ಲಿ ಆಡಳಿತ ಅವಧಿಯನ್ನು ವಿಸ್ತರಿಸಬೇಕೇ ಎಂಬ ಬಗ್ಗೆ ತನ್ನ ಅಭಿಪ್ರಾಯವನ್ನು ತಿಳಿಸತಕ್ಕದ್ದು.

(3) ಅಂಥ ಯಾವುದೇ ವರದಿಯನ್ನು ಪರಿಶೀಲಿಸಿದ ತರುವಾಯ ಮತ್ತು (1)ನೇ ಉಪ ಪ್ರಕರಣಕ್ಕೊಳಪಟ್ಟು ರಾಜ್ಯ ಸರ್ಕಾರವು, ಆಡಳಿತದ ಅವಧಿಯನ್ನು ವಿಸ್ತರಿಸಬೇಕೇ ಅಥವಾ 46ನೇ ಪ್ರಕರಣದಲ್ಲಿ ಉಪಬಂಧಿಸಲಾದಂಥ ರೀತಿಯಲ್ಲಿ ಅದನ್ನು ಕೊನೆಗಾಣಿಸಬೇಕೇ ಎಂಬುದನ್ನು ನಿರ್ಧರಿಸತಕ್ಕದ್ದು.

(4) ಅಂಥ ಅವಧಿಯ ವಿಸ್ತರಣೆಗೆ ವಿರೋಧವಾಗಿರುವ ಕಾರಣವನ್ನು ತೋರಿಸುವ ಬಗ್ಗೆ ಮಾಲೀಕನಿಗೆ ಸೂಕ್ತ ಅವಕಾಶವನ್ನು ಕೊಟ್ಟ ಹೊರತು ಮತ್ತು ಅರಣ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವ ಬಗ್ಗೆ ಮತ್ತು ಕಾಪಾಡುವ ಬಗ್ಗೆ ಅಂಥ ವಿಸ್ತರಣೆಯು ಅಗತ್ಯವೆಂದು ಸರ್ಕಾರಕ್ಕೆ ತೃಪ್ತಿಯಾದ ಹೊರತು ಆಡಳಿತ ಅವಧಿಯನ್ನು ವಿಸ್ತರಸತಕ್ಕದ್ದಲ್ಲ.

**46. ಆಡಳಿತ ಕೊನೆಗೊಳಿಸುವಿಕೆ.-** (1) ಯಾವುದೇ ಅರಣ್ಯದ ಯಾವುದೇ ಆಡಳಿತದ ಅವಧಿಯನ್ನು ಕೊನೆಗೊಳಿಸಬೇಕೆಂದು ರಾಜ್ಯ ಸರ್ಕಾರವು ನಿರ್ಧರಿಸಿದ್ದಲ್ಲಿ, ಅದು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ಮತ್ತು ನಿಯಮಿಸಬಹುದಾದಂಥ ಬೇರೆ ಯಾವುದಾದರೂ ರೀತಿಯಲ್ಲಿ ಅಂಥ ಕೊನೆಗೊಳಿಸುವಿಕೆಯನ್ನು ಘೋಷಿಸತಕ್ಕದ್ದು ಮತ್ತು ಆಮೇಲೆ ಅರಣ್ಯದ ಸ್ವಾಧೀನಕ್ಕೆ ಹಕ್ಕುಳ್ಳವನಾಗಿರುವ ಯಾವೊಬ್ಬ ವ್ಯಕ್ತಿಗೆ ಅಂಥ ಮಾಲೀಕನಿಗೆ ನೀಡಬೇಕಾಗಿರುವ ಯಾವುದೇ ಮೊಬಲಗು ಸೇರಿದಂತೆ ಸ್ವಾಧೀನಕ್ಕೆ ಕೊಡತಕ್ಕದ್ದು.

(2) ಅರಣ್ಯ ಅಧಿಕಾರಿಯು ಆಡಳಿತದಲ್ಲಿರುವ ಯಾವುದೇ ಅರಣ್ಯದ ಸಂಬಂಧದಲ್ಲಿ ಅಂತಹ ಆಡಳಿತದಲ್ಲಿ ಆತನು ಮಾಡಿದ ಅಥವಾ ಮಾಡಿದ್ದಾನೆಂದು ತಾತ್ಪರ್ಯವಾಗುವ ಎಲ್ಲ ಕಾರ್ಯಗಳಿಗೆ ಅಂಥ ಅರಣ್ಯದ ಮಾಲೀಕನು ಅಥವಾ ಈ ಪ್ರಕರಣದ ಅಡಿಯಲ್ಲಿ ಅರಣ್ಯದ ಸ್ವಾಧೀನತೆಯನ್ನು ಕೊಡಲಾದ ವ್ಯಕ್ತಿಯು, ಬದ್ಧನಾಗಿರತಕ್ಕದ್ದು.

(3) ಯಾವುದೇ ಅರಣ್ಯದ ಆಡಳಿತದ ಕೊನೆಗೊಳಿಸುವಿಕೆಯ ಅವಧಿಯು ಮುಗಿದ ಬಳಿಕ [1][ಕಾಲ ಪರಿಮಿತಿ ಅಧಿನಿಯಮ, 1963ರಲ್ಲಿ][1] ಏನೇ ಇದ್ದರೂ, ಆದರೆ ಆಗ ಜಾರಿಯಲ್ಲಿರಬಹುದಾದ ಯಾವುದೇ ಕಾನೂನಿಗೆ ಒಳಪಟ್ಟು, 44ನೇ ಪ್ರಕರಣದ (ಎ) ಖಂಡದ ಅಡಿಯಲ್ಲಿ ಅಮಾನತುಗೊಳಿಸಲಾಗಿದ್ದ ಎಲ್ಲ ವ್ಯವಹರಣೆಗಳು, ಪ್ರೊಸೆಸ್ಸುಗಳು, ನಿರ್ವಹಣೆಗಳು ಅಥವಾ ಜಪ್ತಿಗಳು, ಪುನರುಜ್ಜೀವಿತವಾಗತಕ್ಕದ್ದು ಮತ್ತು ಅವು ಯಾವ ಹಂತದಲ್ಲಿ ಅಮಾನತು ಹೊಂದಿದ್ದವೋ ಆ ಹಂತದಿಂದ ಅವುಗಳನ್ನು ಮುಂದುವರಿಸತಕ್ಕದ್ದು. ಮತ್ತು ಸದರಿ ಖಂಡದ ಅಡಿಯಲ್ಲಿ ತಡೆಯಲಾಗಿದ್ದ ಎಲ್ಲ ವ್ಯವಹರಣೆಗಳನ್ನು, ಪ್ರೊಸೆಸ್ಸುಗಳನ್ನು, ನಿರ್ವಹಣೆಗಳನ್ನು ಅಥವಾ ಜಪ್ತಿಗಳನ್ನು ಅವುಗಳನ್ನು ತಡೆಯಲಾಗಿದ್ದ ಹಂತದಲ್ಲಿ ಹೂಡಬಹುದು, ಹೊರಡಿಸಬಹುದು, ಜಾರಿಗೆ ತರಬಹುದು ಅಥವಾ ನಿರ್ವಹಿಸಬಹುದು.

1. 1989ರ ಅಧಿನಿಯಮ 10ರ ಮೂಲಕ 16.03.1989 ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**47. ಮಾಲೀಕರ ಕೋರಿಕೆಯಂತೆ ಅರಣ್ಯಗಳ ಸಂಬಂಧದಲ್ಲಿ ಸರ್ಕಾರದ ಆಡಳಿತ.-** (1) ಯಾವುದೇ ಭೂಮಿಯ ಯಾವೊಬ್ಬ ಮಾಲೀಕನಿಗಿಂತ ಹೆಚ್ಚುಮಾಲೀಕರು ಇದ್ದರೆ, ಅದರಲ್ಲಿ ಪಾಲಿರುವ ಎಲ್ಲ ಮಾಲೀಕರು ಅಂಥ ಭೂಮಿಯನ್ನು ಒಂದು ಅರಣ್ಯವನ್ನು ನಿರ್ಮಿಸುವ ಅಥವಾ ಸಂರಕ್ಷಿಸುವ ದೃಷ್ಟಿಯಿಂದ ಅದರ ಆಡಳಿತವನ್ನು ವಹಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಅರ್ಜಿ ಬರೆದು ಸಲ್ಲಿಸಬಹುದು ಮತ್ತು ಅಂಥ ಅರ್ಜಿಯ ಮೇಲೆ ರಾಜ್ಯ ಸರ್ಕಾರವು, ಅರಣ್ಯವನ್ನು ನಿರ್ಮಿಸುವುದು ಅಥವಾ ಸಂರಕ್ಷಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಯುಕ್ತವಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ ಅದು ಅಧಿಸೂಚನೆಯ ಮೂಲಕ ಅಂಥ ಭೂಮಿಯ ಆಡಳಿತವನ್ನು ವಹಿಸಿಕೊಳ್ಳಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ಭೂಮಿಯ ಆಡಳಿತದಿಂದ ಉದ್ಭವಿಸುವ ನಿವ್ವಳ ಲಾಭಗಳು, ಯಾವುದಾದರೂ ಇದ್ದರೆ, ಅವುಗಳನ್ನು ಮಾಲೀಕರಿಗೆ ಕೊಡತಕ್ಕದ್ದು.

(3) ಆಡಳಿತದ ಅವಧಿಯು, ರಾಜ್ಯ ಸರ್ಕಾರವು ಮತ್ತು ಅರ್ಜಿದಾರರು ಒಪ್ಪಿಕೊಳ್ಳಬಹುದಾದಂಥದ್ದು ಆಗಿರಕ್ಕದ್ದು.

(4) ಇತರ ಎಲ್ಲ ವಿಷಯಗಳಲ್ಲಿ 43ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು, ಆಡಳಿತವನ್ನು ವಹಿಸಿಕೊಂಡಿರುವ ಅರಣ್ಯಕ್ಕೆ ಅನ್ವಯಿಸುವ, ಈ ಅಧ್ಯಾಯದ ಉಪಬಂಧಗಳು ಅನ್ವಯವಾಗತಕ್ಕದ್ದು.

**48. ಕೆಲವು ಸಂದರ್ಭಗಳಲ್ಲಿ ಅರಣ್ಯಗಳ ಆರ್ಜನೆ.-** ಅರಣ್ಯದ ಆಡಳಿತವನ್ನು ವಹಿಸಿಕೊಳ್ಳುವ ಬದಲು ಸಾರ್ವಜನಿಕ ಉದ್ದೇಶಗಳಿಗಾಗಿ ಅದನ್ನು ಆರ್ಜನೆ ಮಾಡಬೇಕೆಂದು ರಾಜ್ಯ ಸರ್ಕಾರವು, ಈ ಅಧ್ಯಾಯದ ಅಡಿಯಲ್ಲಿ ಯಾವುದೇ ಸಂದರ್ಭದಲ್ಲಿ ಪರಿಗಣಿಸಿದರೆ, ರಾಜ್ಯ ಸರ್ಕಾರವು, ಭೂ ಆರ್ಜನೆ ಅಧಿನಿಯಮ, 1894ರಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಅದನ್ನು ಆರ್ಜಿಸಲು ಮುಂದುವರಿಯಬಹುದು.

**49. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** ಈ ಅಧ್ಯಾಯದ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು

ಉದ್ಭವಿಸಿದರೆ, ರಾಜ್ಯ ಸರ್ಕಾರವು ಸಂದರ್ಭಕ್ಕೆ ತಕ್ಕಂತೆ ತೊಂದರೆಗಳನ್ನು ನಿವಾರಿಸುವ ಉದ್ದೇಕ್ಕಾಗಿ ಅಗತ್ಯವೆಂದು ಕಂಡುಬರುವ ಯಾವುದೇ ಕಾರ್ಯಗಳನ್ನು ಮಾಡಬಹುದು.

## ಅಧ್ಯಾಯ –VI

## ಸಾಗಣೆಯಲ್ಲಿರುವ ಚೌಬೀನೆಯ ಮತ್ತು ಇತರ ಅರಣ್ಯ ಉತ್ಪನ್ನದ ನಿಯಂತ್ರಣ

**50. ಅರಣ್ಯ ಉತ್ಪನ್ನದ ಸಾಗಾಣಿಕೆಯನ್ನು ನಿಯಂತ್ರಿಸುವ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ.-** (1) ಚೌಬೀನೆಯನ್ನು ತೇಲಿಸುವ ಬಗ್ಗೆ, ಎಲ್ಲ ನದಿಗಳ ಮತ್ತು ಅವುಗಳ ದಡದಲ್ಲಿ ನಿಯಂತ್ರಣ ಮಾಡುವುದು ಮತ್ತು ಭೂಮಾರ್ಗವಾಗಿ ಅಥವಾ ಜಲಮಾರ್ಗವಾಗಿ ಸಾಗಿಸಲಾಗುವ ಎಲ್ಲ ಮರದ ಮತ್ತು ಬೇರೆ ಅರಣ್ಯ ಉತ್ಪನ್ನದ ನಿಯಂತ್ರಣವು ರಾಜ್ಯ ಸರ್ಕಾರದಲ್ಲಿ ವಿಹಿತವಾಗಿರತಕ್ಕದ್ದು ಮತ್ತು ಅದು ಎಲ್ಲ ಚೌಬೀನೆಯ ಮತ್ತು ಅರಣ್ಯ ಉತ್ಪನ್ನದ ಸಾಗಣೆಯನ್ನು ನಿಯಂತ್ರಿಸುವ ಬಗ್ಗೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳು,-

(ಎ)ಚೌಬೀನೆಯನ್ನು ಅಥವಾ ಅರಣ್ಯದ ಇತರ ಉತ್ಪನ್ನವನ್ನು ರಾಜ್ಯದೊಳಗಡೆ ಯಾವ ಮಾರ್ಗಗಳಿಂದ ಮಾತ್ರ ಸಾಗಿಸಬಹುದು ಅಥವಾ ಒಯ್ಯುಬಹುದು ಎಂಬುದನ್ನು ನಿಯಮಿಸಬಹುದು.

(ಬಿ)ಅಂತಹ ಚೌಬೀನೆಯನ್ನು ರಾಜ್ಯದೊಳಗೆ, ರಾಜ್ಯದಲ್ಲಿ ಅಥವಾ ರಾಜ್ಯದ ಹೊರಗೆ ಸಾಗಿಸುವುದನ್ನು ಅಥವಾ ಪಾಸನ್ನು ಕೊಡಲು ಸೂಕ್ತ ರಿತಿಯಿಂದ ಅಧಿಕೃತನಾದ ಅಧಿಕಾರಿಯ ಕಡೆಯಿಂದ ಪಡೆದ ಪಾಸಿನ ಹೊರತಾಗಿ ಅಥವಾ ಇಂಥ ಪಾಸಿನ ಹೊರತಾಗಿ ಅಥವಾ ಇಂಥ ಚೌಬೀನೆಯನ್ನು ಅಥವಾ ಇತರ ಉತ್ಪನ್ನವನ್ನು ಮತ್ತು ಚೌಬೀನೆಯ ಸಂದರ್ಭದಲ್ಲಿ ಸರ್ಕಾರ ಸಾಗಣೆ ಗುರ್ತನ್ನು ಲಗತ್ತಿಸದೆ ಸಂಗ್ರಹಿಸುವುದನ್ನು ನಿಷೇಧಿಸಬಹುದು.

(ಸಿ) ಇಂಥ ಪಾಸನ್ನು ಕೊಡುವ, ಹಾಜರುಪಡಿಸುವ ಮತ್ತು ವಾಪಸ್ಸು ಮಾಡುವ ಬಗ್ಗೆ ಚೌಬೀನೆಯ ಸಂಧರ್ಬದಲ್ಲಿ ಸರ್ಕಾರಿ ಸಾಗಣೆ ಗುರ್ತನ್ನು ಲಗತ್ತಿಸುವುದಕ್ಕಾಗಿ ಮತ್ತು ಪಾಸನ್ನು ನೀಡುವ ಬಗ್ಗೆ ಶುಲ್ಕ ಸಂದಾಯ ಮಾಡುವುದಕ್ಕೆ ಉಪಬಂಧ ಕಲ್ಪಿಸಬಹುದು.

(ಡಿ) ತೆಪ್ಪದ ರೂಪದಲ್ಲಿರುವ ಅಥವಾ ದಂಡೆಗೆ ಕಟ್ಟಲಾದ ಚೌಬೀನೆಯ ಸಂದರ್ಭದಲ್ಲಿ ಅದರ ಮಾಲೀಕನಾಗಿರದ ಅಥವಾ ಅಂತಹ ಮಾಲೀಕನ ಅಥವಾ ಸರ್ಕಾರದ ಪರವಾಗಿ ಕಾರ್ಯ ನಿರ್ವಹಿಹಿಸದ ಯಾವೊಬ್ಬ ವ್ಯಕ್ತಿಯು ಅಂಥ ಚೌಬೀನೆಯನ್ನು ಸಡಿಲಿಸುವುದನ್ನು ಅಥವಾ ನೆಲೆ ಇಲ್ಲದೆ ತೇಲುವಂತೆ ಮಾಡುವುದನ್ನು ನಿಷೇಧಿಸಬಹುದು.

(ಇ) ಸಾಗಣೆಯಲ್ಲಿರುವ ಚೌಬೀನೆಯ ಅಥವಾ ಅರಣ್ಯ ಉತ್ಪನ್ನದ ಸಂಬಂಧದಿಂದ ಯಾವುದೇ ಹಣವು ಸರ್ಕಾರಕ್ಕೆ ಸಂದಾಯವಾಗಬೇಕೆಂದು ನಂಬಲು ಕಾರಣವಿದ್ದಾಗ ಅಥವಾ ಈ ಅಧಿನಿಯಮದ ಉದ್ದೇಶಕ್ಕಾಗಿ ಅದಕ್ಕೆ ಗುರ್ತನ್ನು ಹಾಕುವುದು ಅಪೇಕ್ಷಣೀಯವೆಂದು ಅಂತಹ ಚೌಬೀನೆಯನ್ನು ಅಥವಾ ಅರಣ್ಯದ ಇತರ ಉತ್ಪನ್ನವನು ನಿಲ್ಲಿಸುವ, ವರದಿ ಮಾಡುವ, ಪರೀಕ್ಷಿಸುವ ಮತ್ತು ಗುರ್ತು ಮಾಡುವ ಬಗ್ಗೆ ಉಪಬಂಧ ಕಲ್ಪಿಸಬಹುದು;

(ಎಫ್) ಅರಣ್ಯದ ಉತ್ಪನ್ನದ ಸಂಬಂಧದಲ್ಲಿ ಅರಣ್ಯ ಸಂಬಂಧವಾದ ಅಪರಾಧಗಳು ಮಾಡುವುದನ್ನು ಪ್ರತಿಬಂಧಿಸುವ ಅಥವಾ ತಡೆಯುವ ಬಗ್ಗೆ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಸ್ಥಳಗಳಲ್ಲಿ ಶೋಧನಾ ಠಾಣೆಗಳನ್ನು ಸ್ಥಾಪಿಸಲು ಅಥವಾ ಅಡ್ಡಗಟ್ಟೆಗಳನ್ನು ನಿರ್ಮಿಸಲು ಮತ್ತು ಅಂತಹ ಶೋಧನಾ ಠಾಣೆ ಅಥವಾ ಅಡ್ಡಗಟ್ಟೆ ಸ್ಥಳಗಳಲ್ಲಿ ಯಾವುದೇ ವಾಹನ ಅಥವಾ ನೌಕೆಯಲ್ಲಿ ಸಾಗಿಸುತ್ತಿರುವ ಸಾಮಾನುಗಳನ್ನು ತಡೆದುನಿಲ್ಲಿಸಲು ಆ ಬಗ್ಗೆ ವರದಿ ಮಾಡಲು ಮತ್ತು ಪರೀಕ್ಷಿಸಲು ಉಪಬಂಧ ಕಲ್ಪಿಸಬಹುದು.

(ಜಿ) ಅಂಥ ಚೌಬೀನೆಯನ್ನು ಅಥವಾ ಇತರ ಅರಣ್ಯ ಉತ್ಪನ್ನವನ್ನು ಪರೀಕ್ಷೆಗಾಗಿ ಅಥವಾ ಅಂಥ ಹಣವನ್ನು ಸಂದಾಯ ಮಾಡುವುದಕ್ಕಾಗಿ ಅಥವಾ ಅಂಥ ಗುರುತನ್ನು ಲಗತ್ತಿಸಬೇಕೆಂದು ಅವುಗಳ ಪ್ರಭಾವದಲ್ಲಿರುವವರು ಒಯ್ಯಬೇಕಾದ ಕೋಠಿಗಳ ಸ್ಥಾಪನೆ ಮತ್ತು ನಿಯಂತ್ರಣ ಮತ್ತು ಅಂಥ ಚೌಬೀನೆಯನ್ನು ಇತರ ಅರಣ್ಯ ಉತ್ಪನ್ನವನ್ನು ಅಂಥ ಕೋಠಿಗಳಿಗೆ ತರುವಲ್ಲಿ ಅಥವಾ ಸಂಗ್ರಹಿಸುವ ಮತ್ತು ಅವುಗಳಿಂದ ಸಾಗಿಸುವ ಬಗ್ಗೆ ಷರತ್ತುಗಳು ಮತ್ತು ಅವುಗಳಲ್ಲಿ ನಿಯೋಜಿತರಾದ ವ್ಯಕ್ತಿಗಳ ನೇಮಕವನ್ನು ಮತ್ತು ಕರ್ತವ್ಯಗಳನ್ನು ನಿಯಂತ್ರಿಸುವ ಉಪಬಂಧಗಳನ್ನು ಕಲ್ಪಿಸಬಹುದು;

(ಹೆಚ್) ಅಂಥ ಚೌಬೀನೆಯನ್ನು ಅಥವಾ ಇತರ ಅರಣ್ಯ ಉತ್ಪನ್ನವನ್ನು ಯಾವುದೇ ಭೂಮಿಯ ಮೇಲೆ ಸಾಗಿಸುವುದನ್ನು ಅಧಿಕೃತಗೊಳಿಸಬಹುದು ಮತ್ತು ಅಂಥ ಚೌಬೀನೆಯ ಅಥವಾ ಇತರ ಅರಣ್ಯ ಉತ್ಪನ್ನದ ಸಾಗಾಣಿಕೆಯಿಂದ ಉಂಟಾದ ಯಾವುದೇ ನಷ್ಟದ ಬಗ್ಗೆ ಪರಿಹಾರವನ್ನು ನಿರ್ಧರಿಸಲು ಮತ್ತು ಸಂದಾಯ ಮಾಡಲು ಉಪಬಂಧ ಕಲ್ಪಿಸಬಹುದು.

(ಐ) ಚೌಬೀನೆಯ ಅಥವಾ ಇತರ ಅರಣ್ಯ ಉತ್ಪನ್ನದ ಸಾಗಾಣಿಕೆಗಾಗಿ ಉಪಯೋಗಿಸಲಾದ ಯಾವುದೇ ಕಾಲುವೆಯನ್ನು ಅಥವಾ ನದಿಯ

ದಂಡೆಗಳನ್ನು ಮುಚ್ಚುವುದನ್ನು ಅಥವಾ ಅವುಗಳಿಗೆ ಅಡ್ಡಿ ಉಂಟು ಮಾಡುವುದನ್ನು ಮತ್ತು ಹುಲ್ಲನ್ನು, ಕುರುಚಲು ಗಿಡಗಳನ್ನು, ಕೊಂಬೆಗಳನ್ನು ಅಥವಾ ಇಂಥ ನದಿ ದಂಡೆ ಮುಚ್ಚುವುದ್ಕೆ ಅಥವಾ ಅದಕ್ಕೆ ಅಡಿಯನ್ನುಂಟುಮಾಡುವುದಕ್ಕೆ ಕಾರಣವಾಗುವಂಥ ಯಾವುದೇ ಕಾರ್ಯವನ್ನು ನಿಷೇಧಿಸಬಹುದು;

(ಜೆ) ಅಂಥ ನದಿಯ ಕಾಲುವೆಗೆ ಅಥವಾ ದಂಡೆಗಳಿಗೆ ಅಡ್ಡಿಯನ್ನು ಪ್ರತಿಬಂಧಿಸುವ ಅಥವಾ ತೆಗೆದುಹಾಕುವ ಬಗ್ಗೆ ಮತ್ತು ಯಾವ ವ್ಯಕ್ತಿಗಳ ಕಾರ್ಯವು ಅಥವಾ ಅದಕ್ಕೆ ಕಾರಣವಾಯಿತೋ ಅವರಿಂದ ಅಂಥ ಪ್ರತಿಬಂಧದ ಅಥವಾ ತೆಗೆದುಹಾಕಿದುದರ ವೆಚ್ಚವನ್ನು ವಸೂಲು ಮಾಡುವ ಬಗ್ಗೆ ಉಪಬಂಧ ಕಲ್ಪಿಸಬಹುದು.

(ಕೆ) [1][ಇಡೀ ಕರ್ನಾಟಕ ರಾಜ್ಯದೊಳಗೆ ಅಥವಾ ಸ್ಪಷ್ಟಪಡಿಸಲಾದ ಸ್ಥಳೀಯ ಮೇರೆಗಳೊಳಗೆ ಸಂಪೂರ್ಣವಾಗಿ ಅಥವಾ ಷರತ್ತುಗಳಿಗೊಳಪಟ್ಟು][1] ಮರ ಕೊಯ್ಯುವ ಗುಂಡಿಗಳನ್ನು ಅಥವಾ ಮರ ಕೊಯ್ಯುವ ಯಂತ್ರಾಗಾರಗಳನ್ನು ಅಥವಾ ಬೇರೆ ಯಾವುದೇ ಮರಕೊಯ್ಯುವ ಸಾಧನವನ್ನು ಸ್ಥಾಪಿಸುವುದನ್ನು ಮತ್ತು ಚೌಬೀನೆಯನ್ನು ಅಥವಾ ಇತರ ಅರಣ್ಯ ಉತ್ಪನ್ನವನ್ನು ಪರಿವರ್ತಿಸುವುದನ್ನು, ಕೊಯ್ಯುವುದನ್ನು, ಸಂಸ್ಕರಿಸುವುದನ್ನು , ಬಟ್ಟಿ ಇಳಿಸುವುದನ್ನು, ಸಂಗ್ರಹಿಸುವುದನ್ನು, ಸುಡುವುದನ್ನು, ಮುಚ್ಚಿಡುವುದನ್ನು, ಗುರುತುಮಾಡುವುದನ್ನು, ಅಥವಾ ಮೇಲು ಗುರುತು ಮಾಡುವುದನ್ನು, ಅವುಗಳ ಮೇಲಿನ ಯಾವುದೇ ಗುರುತುಗಳನ್ನು ಬದಲಾಯಿಸುವುದನ್ನು ಅಥವಾ ಬೇರೆ ಗುರುತು ಹಾಕುವುದನ್ನು ಅಥವಾ ಗುರುತು ಮಾಡುವ ಸುತ್ತಿಗೆಗಳನ್ನು ಅಥವಾ ಚೌಬೀನೆಗೆ ಗುರುತು ಮಾಡುವುದಕ್ಕಾಗಿ ಉಪಯೋಗಿಸುವ ಇತರ ಉಪಕರಣಗಳನ್ನು ವಶದಲ್ಲಿ ಇಟ್ಟುಕೊಳ್ಳುವುದನ್ನು ಅಥವಾ ಒಯ್ಯುವುದನ್ನು ನಿಷೇಧಿಸಬಹುದು;

1. 1974ರ ಅಧಿನಿಯಮ 23ರ ಮೂಲಕ 16.09.1974 ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಕೆ-ಎ) ಮಾಲೀಕ ಅಥವಾ ಪ್ರೊಪ್ರೈಟರ್ ನು ಲೈಸೆನ್ಸು ಪಡೆಯಬೇಕೆಂದು [2][ಅಥವಾ ಅದರ ನವೀಕರಣ ಮಾಡಿಸಿಕೊಳ್ಳಬೇಕೆಂದು][2] ವಿಧಿಸುವುದು ಸೇರಿದಂತೆ ಈಗಿರತಕ್ಕ ಮರಕೊಯ್ಯುವ ಗುಂಡಿ, [2][ಮರಕೊಯ್ಯುವ ಹೊಸಗುಂಡಿಗಳನ್ನು][2] ಪ್ರಾರಂಭಿಸುವುದು, ಮರಕೊಯ್ಯುವ ಯಂತ್ರಾಗಾರ ಅಥವಾ ಬೇರೆ ಯಾವುದೇ ಮರಕೊಯ್ಯುವ ಸಾಧನವನ್ನು ನಿಯಂತ್ರಿಸಬಹುದು; ][1]

1. 1974ರ ಅಧಿನಿಯಮ 23ರ ಮೂಲಕ 16.09.1974ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಕೆ-ಬಿ) ಮರಕೊಯ್ಯುವ ಮಿಲ್ಲುಗಳು ಮರಕೊಯ್ಯುವ ಗುಂಡಿಗಳು ಮತ್ತು ಮರಕೊಯ್ಯುವ ಇತರ ಸಾಧನಗಳಿಗಾಗಿ ಲೈಸೆನ್ಸು ನೀಡಿಕೆಗೆ ಅಥವಾ ಅದರ ನವೀಕರಣಕ್ಕಾಗಿ ಶುಲ್ಕವನ್ನು ವಿಧಿಸಲು ಉಪಬಂಧ ಕಲ್ಪಿಸುವುದು; ][1]

1. 1998ರ ಅಧಿನಿಯಮ 12ರ ಮೂಲಕ 11.05.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎಲ್) ಚೌಬೀನೆಯ ಅಥವಾ ಇತರ ಅರಣ್ಯ ಉತ್ಪನ್ನದ ಸ್ವತ್ತುಗಳ ಗುರುತುಗಳ ಉಪಯೋಗವನ್ನು ಮತ್ತು ಅಂಥ ಗುರುತುಗಳ ನೋಂದಣಿಯನ್ನು ನಿಯಂತ್ರಿಸಬಹುದು, ಅಂಥ ನೋಂದಣಿಯು ಎಷ್ಟು ಕಾಲದವರೆಗೆ ಅಸ್ತಿತ್ವದಲ್ಲಿರತಕ್ಕದ್ದು ಎಂಬುದನ್ನು ನಿಯಮಿಸಬಹುದು, ಯಾವೊಬ್ಬ ವ್ಯಕ್ತಿಯು ನೋಂದಣಿ ಮಾಡಬಹುದಾದಂಥ ಗುರುತುಗಳ ಸಂಖ್ಯೆಯನ್ನು ಸೀಮಿತಗೊಳಿಸಬಹುದು ಮತ್ತು ಅಂತಹ ನೋಂದಣಿಗಾಗಿ ಶುಲ್ಕ ವಿಧಿಸುವ ಬಗ್ಗೆ ಉಪಬಂಧಕಲ್ಪಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ನಿಯಮವನ್ನು ರಚಸುವಲ್ಲಿ, ರಾಜ್ಯ ಸರ್ಕಾರವು, ಸದರಿ ನಿಯಮದ ಉಲ್ಲಂಘನೆಯ ಬಗ್ಗೆ ತಪ್ಪಿತಸ್ತನಾಗಿರುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದ ದಂಡಿತನಾಗತಕ್ಕದ್ದೆಂದು ಮತ್ತು ಸದರಿ ಉಲ್ಲಂಘನೆಯನ್ನು ಸೂರ್ಯಾಸ್ತದ ತರುವಾಯ ಅಥವಾ ಸೂರ್ಯೋದಯಕ್ಕಿಂತ ಮುಂಚೆ ಅಥವಾ ಕಾನೂನು ಸಮ್ಮತ ಪ್ರಾಧಿಕಾರಿಯನ್ನು ಪ್ರತಿಭಟಿಸುವ ಸಲುವಾಗಿ ಸಿದ್ಧತೆಯನ್ನು ಮಾಡಿದ ಮೇಲೆ ಮಾಡಲಾಗಿದ್ದರೆ ಅಥವಾ ಅಪರಾಧಿಯು ಅಂಥಹುದೇ ಅಪರಾಧದ ಬಗ್ಗೆ ಮುಂಚೆ ನಿರ್ಣೀತ ಅಪರಾಧಿಯಾಗಿದ್ದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದೆಂದು ಉಪಬಂಧಿಸಬಹುದು.

**51. ರಾಜ್ಯ ಸರ್ಕಾರವು ಮತ್ತು ಅರಣ್ಯ ಅಧಿಕಾರಿಯು ಕೋಠಿಯಲ್ಲಿ ಅರಣ್ಯ ಉತ್ಪನ್ನಕ್ಕೆ ಉಂಟಾದ ನಷ್ಟದ ಬಗ್ಗೆ ಹೊಣೆಯಾಗಿರತಕ್ಕದ್ದಲ್ಲ.-** ರಾಜ್ಯ ಸರ್ಕಾರವು, 50ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳಿಗನುಸಾರ ಸ್ಥಾಪಿತವಾದ ಯಾವುದೊಂದು ಕೋಠಿಯಲ್ಲಿ ಯಾವುದೇ ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನವು ಇದ್ದಾಗ ಅಥವಾ ಈ ಅಧಿನಿಯಮದ ಉದ್ದೇಶಕ್ಕಾಗಿ ಅದನ್ನು ಹಿಡಿದಿಟ್ಟಾಗ ಅದಕ್ಕೆ ಉಂಟಾಗಬಹುದಾದ ಯಾವುದೇ ಹಾನಿಯ ಅಥವಾ ನಷ್ಟದ ಬಗ್ಗೆ ಜವಾಬ್ದಾರನಾಗಿರತಕ್ಕದ್ದಲ್ಲ ಮತ್ತು ಯಾವ ಅರಣ್ಯ ಅಧಿಕಾರಿಯೂ ಇಂಥ ಯಾವುದೇ ಹಾನಿಯ ಅಥವಾ ನಷ್ಟದ ಬಗ್ಗೆ, ಅವನು ಇಂಥ ಹಾನಿಯನ್ನು ಅಥವಾ ನಷ್ಟವನ್ನು ಬುದ್ಧಿ ಪೂರ್ವಕವಾಗಿ, ನಿರ್ಲಕ್ಷ್ಯದಿಂದ, ದುರ್ಭಾವನೆಯಿಂದ ಅಥವಾ ಮೋಸದಿಂದ ಉಂಟುಮಾಡಿದ್ದ ಹೊರತು ಜವಾಬ್ದಾರನಾಗಿರತಕ್ಕದ್ದಲ್ಲ.

**52. ಕೋಠಿಯಲ್ಲಿ ಅಪಘಾತ ಸಂಭವಿಸಿದ ಸಂಧರ್ಭದಲ್ಲಿ ನೆರವು ನೀಡಲು ಎಲ್ಲ ವ್ಯಕ್ತಿಗಳು ಬದ್ಧರಿರತಕ್ಕದ್ದು.-** ಅಂಥ ಯಾವುದೇ ಕೋಠಿಯಲ್ಲಿ ಯಾವುದೇ ಸ್ವತ್ತಿಗೆ ಅಪಾಯವನ್ನುಂಟುಮಾಡುವ ಯಾವುದೇ ಅಪಘಾತವು ಅಥವಾ ಅಪಾಯ ಸ್ಥಿತಿಯು ಉಂಟಾದ ಸಂಧರ್ಭದಲ್ಲಿ, ರಾಜ್ಯ ಸರ್ಕಾರವು ಅಥವಾ ಯಾವೊಬ್ಬ ಖಾಸಗಿ ವ್ಯಕ್ತಿಯು ಅಥವಾ ಅಂಥ ಸ್ವತ್ತನ್ನು ಹಾನಿಯಿಂದ ಅಥವಾ ನಷ್ಟದಿಂದ ಉಳಿಸುವುದಕ್ಕಾಗಿ ಅಂಥ ಕೋಠಿಯಲ್ಲಿ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಅಪಾಯವನ್ನು ತಪ್ಪಿಸುವುದಕ್ಕಾಗಿ ತನ್ನ ನೆರವನ್ನು ಕೇಳಿದ ಯಾವೊಬ್ಬ ಅರಣ್ಯ ಅಧಿಕಾರಿಗೆ ಅಥವಾ ಪೊಲೀಸು ಅಧಿಕಾರಿಗೆ ನೆರವು ನೀಡತಕ್ಕದ್ದು.

## ಅಧ್ಯಾಯ-VII

## ತೇಲಿ ಬಂದ ಮತ್ತು ದಡದಲ್ಲಿ ಸಿಕ್ಕ ಚೌಬೀನೆಯ ಸಂಗ್ರಹಣೆ

**53. ಕೆಲವು ಬಗೆಗಳ ಚೌಬೀನೆಗಳು ಅದರ ಬಗ್ಗೆ ಹಕ್ಕು ರುಜುವಾತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತಾಗಿದೆ ಎಂದು ಭಾವಿಸತಕ್ಕದ್ದು.-** (1) ತೇಲಿಬಂದ, ದಡದಲ್ಲಿ ಸಿಕ್ಕಿಕೊಂಡ, ದೊರೆತ ಅಥವಾ ಮುಳುಗಿದ ಎಲ್ಲ ಚೌಬೀನೆಯು, 50ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳಿಗನುಸಾರವಾಗಿ ನೋಂದಣಿಯಾಗಿರದಂಥ ಗುರುತುಗಳುಳ್ಳ ಅಥವಾ ಮೇಲುಗುರುತಿನಿಂದ ಗುರುತುಹಾಕಲಾದ ಅಥವಾ ಬೆಂಕಿಯ ಮೂಲಕ ಅಥವಾ ಬೇರೆ ರೀತಿಯಿಂದ ಗುರುತುಗಳನ್ನು ಅಳಿಸಿಹೋಗಿರುವಂಥ, ಬದಲಾಯಿಸಲಾಗಿರುವಂಥ ಅಥವಾ ವಿರೂಪಗೊಳಿಸಲಾಗಿರುವಂಥ ಎಲ್ಲ ಮರ ಅಥವಾ ಚೌಬೀನೆ ಮತ್ತು ರಾಜ್ಯಸರ್ಕಾರವು ನಿರ್ದೇಶಿಸುವಂಥ ಪ್ರದೇಶಗಳಲ್ಲಿ ಗುರುತು ಹಾಕಲಾಗದಿದ್ದ ಎಲ್ಲ ಮರವೂ ಮತ್ತು ಚೌಬೀನೆ, ಯಾವೊಬ್ಬ ವ್ಯಕ್ತಿಯು ಈ ಪ್ರಕರಣದಲ್ಲಿ ಉಪಬಂಧಿಸಲಾದಂತೆ, ಆ ಬಗ್ಗೆ ತನ್ನ ಅಧಿಕಾರ ಮತ್ತು ಹಕ್ಕನ್ನು ಸ್ಥಾಪಿಸಿದ ಹೊರತು ಮತ್ತು ಸ್ಥಾಪಿಸುವವರೆಗೆ, ರಾಜ್ಯ ಸರ್ಕಾರದ ಸ್ವತ್ತೆಂದು ಭಾವಿಸತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ನಿರ್ದೇಶಿಸಲಾದ ಚೌಬೀನೆಯನ್ನು ಯಾವೊಬ್ಬ ಅರಣ್ಯ ಅಧಿಕಾರಿಯು ಅಥವಾ 59ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಮೂಲಕ ಅದನ್ನು ಸಂಗ್ರಹಿಸಲು ಹಕ್ಕುಳ್ಳ ಬೇರೆ ಯಾವೊಬ್ಬ ವ್ಯಕ್ತಿಯು ಸಂಗ್ರಹಿಸಬಹುದು ಮತ್ತು ಅರಣ್ಯ ಅಧಿಕಾರಿಯು ತೇಲಿಬಂದ ಚೌಬೀನೆಯನ್ನು ಸ್ವೀಕರಿಸುವ ಕೋಠಿ ಎಂದು ಪ್ರಕಟಿಸಿದಂಥ ಕೋಠಿಗೆ ತರಬಹುದು.

(3) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಯಾವುದೇ ವರ್ಗದ ಚೌಬೀನೆಯನ್ನು ಈ ಪ್ರಕರಣದ ಉಪಬಂಧಗಳಿಂದ ಹೊರತುಪಡಿಸಬಹುದು.

**54. ತೇಲಿಬಂದ ಚೌಬೀನೆಯ ಕ್ಲೇಮುದಾರರಿಗೆ ನೋಟೀಸು.-** 53ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ಚೌಬೀನೆಯ ಬಗ್ಗೆ ಅರಣ್ಯ ಅಧಿಕಾರಿಯು ಕಾಲಕಾಲಕ್ಕೆ ಬಹಿರಂಗ ನೋಟೀಸನ್ನು ನೀಡತಕ್ಕದ್ದು, ಅಂತಹ ನೋಟೀಸು ಚೌಬೀನೆಯ ವಿವರವನ್ನೊಳಗೊಂಡಿರತಕ್ಕದ್ದು ಮತ್ತು ಅದನ್ನು ಕ್ಲೇಮುಮಾಡುವ ಯಾವೊಬ್ಬ ವ್ಯಕ್ತಿಯು, ಅಂತಹ ನೋಟೀಸಿನ ದಿನಾಂಕದಿಂದ ಮೂವತ್ತು ದಿನಗಳಿಗೆ ಕಡಿಮೆ ಇರದ ಅವಧಿಯೊಳಗಾಗಿ ಅಂತಹ ಕ್ಲೀಮಿನ ಸಂಬಂಧದಲ್ಲಿ ಲಿಖಿತ ಒಂದು ಹೇಳಿಕೆಯನ್ನು ಅಂತಹ ಅಧಿಕಾರಿಗೆ ಹಾಜರು ಪಡಿಸಬೇಕೆಂದು, ಅಂತಹ ನೋಟೀಸಿನ ಮೂಲಕ ಅಗತ್ಯಪಡಿಸತಕ್ಕದ್ದು.

**55. ಅಂತಹ ಚೌಬೀನೆಯ ಕ್ಲೇಮಿನ ಬಗ್ಗೆ ಪ್ರಕ್ರಿಯೆ.-** (1) 54ನೇ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಹೇಳಿಕೆಯನ್ನು ಹಾಜರುಪಡಿಸಿದಾಗ ಅರಣ್ಯ ಅಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದ ತನಿಖೆಯನ್ನು ನಡೆಸಿದ ತರುವಾಯ, ನಿರಾಕರಿಸಲು ಕಾರಣಗಳನ್ನು ದಾಖಲ್ಮಾಡಿ, ಕ್ಲೇಮನ್ನು ನಿರಾಕರಿಸಬಹುದು, ಅಥವಾ ಕ್ಲೇಮನ್ನು ಒಪ್ಪಿಕೊಂಡು ಕ್ಲೇಮುದಾರನಿಗೆ ಚೌಬೀನೆಯನ್ನು ನೀಡಬಹುದು.

(2) ಅಂಥ ಚೌಬೀನೆಯ ಸಂಬಂಧದಲ್ಲಿ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳು ಕ್ಲೇಮುಮಾಡಿದ್ದರೆ, ಅವರ ಪೈಕಿ ಅರಣ್ಯದ ಅಧಿಕಾರಿಯು ಅದಕ್ಕೆ ಹಕ್ಕುಳ್ಳವನೆಂದು ಭಾವಿಸುವ ವ್ಯಕ್ತಿಗೆ ಅದನ್ನು ನೀಡಬಹುದು ಅಥವಾ ಕ್ಲೇಮುದಾರರಿಗೆ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಹೇಳಬಹುದು ಮತ್ತು ಅದರ ವಿಲೆಯ ಬಗ್ಗೆ ಅಂಥ ನ್ಯಾಯಾಲಯದಿಂದ ಆದೇಶ ಬರುವವರೆಗೆ ಸದರಿ ಚೌಬೀನೆಯನ್ನು ಅಥವಾ ಮರವನ್ನು ತನ್ನ ವಶದಲ್ಲಿಟ್ಟುಕೊಳ್ಳಬಹುದು.

(3) ಈ ಪ್ರಕರಣದ ಅಡಿಯಲ್ಲಿ ಯಾರ ಕ್ಲೇಮು ನಿರಾಕರಿಸಲ್ಪಟ್ಟಿದೆಯೋ ಅಂಥ ವ್ಯಕ್ತಿಯು, ಅಂಥ ನಿರಾಕರಣೆಯ ಆದೇಶವನ್ನು ತಿಳಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅವನಿಂದ ಕ್ಲೇಮು ಮಾಡಲಾದ ಚೌಬೀನೆಯ ಸ್ವಾಧೀನವನ್ನು ವಾಪಸ್ಸು ಪಡೆಯಲು ದಾವೆಯನ್ನು ಹೂಡಬಹುದು. ಆದರೆ, ಯಾವ ವ್ಯಕ್ತಿಯೂ ಹಾಗೆ ನಿರಾಕರಿಸಿದುದರ ಕಾರಣದ ಮೇಲೆ ಅಥವಾ ಯಾವುದೇ ಚೌಬೀನೆಯನ್ನು ಅಥವಾ

ಮರವನ್ನು ಹಿಡಿದಿಟ್ಟು ಅಥವಾ ಸ್ಥಳಾಂತರಿಸಿದ ಕಾರಣದಿಂದ ಈ ಪ್ರಕರಣದ ಅಡಿಯಲ್ಲಿ ಅದನ್ನು ಬೇರೆ ಅಥವಾ ಯಾವನೇ ವ್ಯಕ್ತಿಗೆ ಒಪ್ಪಿಸಿದ ಕಾರಣದಿಂದ ರಾಜ್ಯ ಸರ್ಕಾರದಿಂದ ಅಥವಾ ಯಾವನೇ ಅರಣ್ಯದ ಅಧಿಕಾರಿಯಿಂದ, ಯಾವುದೇ ಪರಿಹಾರವನ್ನು ಅಥವಾ ವೆಚ್ಚವನ್ನು ಪಡೆಯತಕ್ಕದ್ದಲ್ಲ.

(4) ಅಂಥ ಯಾವುದೇ ಚೌಬೀನೆಯು ಅದನ್ನು ವಶಪಡಿಸುವವರೆಗೆ ಅಥವಾ ಈ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಮಾಡಲಾದ ದಾವೆಯು ಇತ್ಯರ್ಥವಾಗುವವರೆಗೆ ಯಾವುದೇ ಸಿವಿಲ್, ಕ್ರಿಮಿನಲ್, ಅಥವಾ ರೆವಿನ್ಯೂ ನ್ಯಾಯಾಲಯದ ಪ್ರಕ್ರಿಯೆಗೆ ಒಳಪಡತಕ್ಕದ್ದಲ್ಲ.

**56. ಕ್ಲೇಮು ಮಾಡದೆ ಇರುವ ಚೌಬೀನೆಯ ವಿಲೆ.-** 54ನೇ ಪ್ರಕರಣದ ಅಡಿಯಲ್ಲಿ ಯಾವ ಹೇಳಿಕೆಯನ್ನು ಕೊಡದಿದ್ದರೆ, ಹಾಜರುಪಡಿಸದಿದ್ದರೆ, ಅಥವಾ 54ನೇ ಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ಮತ್ತು ಅವಧಿಯೊಳಗೆ ಕ್ಲೇಮುದಾರನು ತನ್ನ ಕ್ಲೇಮನ್ನು ಮಾಡಲು ತಪ್ಪಿದರೆ, ಅಥವಾ ಅವನು ಅಂಥ ಕ್ಲೇಮನ್ನು ಮಾಡಿದ್ದು ಅದನ್ನು ನಿರಾಕರಿಸಿದ್ದರೆ ಅವನು 55ನೇ ಪ್ರಕರಣದ ಮೂಲಕ ಗೊತ್ತುಪಡಿಸಲಾದ ಹೆಚ್ಚಿನ ಅವಧಿಯೊಳಗಾಗಿ ಅಂಥ ಚೌಬೀನೆಯ ಸ್ವಾಧೀನವನ್ನು ಪಡೆಯಲು, ದಾವೆ ಹೂಡಲು ತಪ್ಪಿದರೆ ಅಂಥ ಚೌಬೇನೆಯ ಒಡೆತನವು ಎಲ್ಲ ಋಣಭಾರಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ಅಥವಾ ಅಂಥ ಚೌಬೀನೆಯನ್ನು 55ನೇ ಪ್ರಕರಣದ ಅಡಿಯಲ್ಲಿ ಬೇರೊಬ್ಬ ವ್ಯಕ್ತಿಯ ವಶಕ್ಕೆ ಕೊಟ್ಟಿದ್ದರೆ ಅಂಥ ವ್ಯಕ್ತಿಯು ಸೃಜಿಸಿರದಿದ್ದ ಎಲ್ಲ ಋಣಭಾರಗಳಿಂದ ಮುಕ್ತವಾಗಿ ಅವನಲ್ಲಿ ವಿಹಿತವಾಗತಕ್ಕದ್ದು.

**57. ರಾಜ್ಯ ಸರ್ಕಾರವು ಮತ್ತು ಅದರ ಅಧಿಕಾರಿಗಳು ಅಂಥ ಚೌಬೀನೆಗೆ ಉಂಟಾದ ಯಾವುದೇ ಹಾನಿಗೆ ಹೊಣೆಗಾರರಾಗಿರತಕ್ಕದ್ದಲ್ಲ.-** 53ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ಯಾವುದೇ ಚೌಬೀನೆಯ ಸಂಬಂಧದಲ್ಲಿ ಉಂಟಾಗಬಹುದಾದ ಯಾವುದೇ ಹಾನಿ ಅಥವಾ ನಷ್ಟದ ಬಗ್ಗೆ ರಾಜ್ಯ ಸರ್ಕಾರದ ಮೇಲೆ ಜವಾಬ್ದಾರಿ ಇರತಕ್ಕದ್ದಲ್ಲ ಮತ್ತು ಯಾವ ಅರಣ್ಯ ಅಧಿಕಾರಿಯು, ಅವನು ಅಂಥ ಹಾನಿಯನ್ನು ಅಥವಾ ನಷ್ಟವನ್ನು ಉದ್ದೇಶ ಪೂರ್ವಕವಾಗಿ ನಿರ್ಲಕ್ಷ್ಯದಿಂದ, ದುರ್ಭಾವನೆಯಿಂದ ಅಥವಾ ಮೋಸದಿಂದ ಉಂಟುಮಾಡಿದ್ದ ಹೊರತು ಅಂಥ ಯಾವುದೇ ಹಾನಿಯ ಅಥವಾ ನಷ್ಟದ ಬಗ್ಗೆ ಜವಾಬ್ದಾರನಾಗಿರತಕ್ಕದ್ದಲ್ಲ.

**58. ಚೌಬೀನೆಯನ್ನು ಕ್ಲೇಮುದಾರನ ವಶಕ್ಕೆ ಕೊಡುವುದಕ್ಕೆ ಮೊದಲು ಅವನು ಮಾಡಬೇಕಾದ ಸಂದಾಯಗಳು.-** ಯಾವ ವ್ಯಕ್ತಿಯೂ, ಅವನು 59ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಅಡಿಯಲ್ಲಿ ಬಾಕಿ ಇರುವ ತತ್ಸಂಬಂಧದ ಹಣವನ್ನು ಅರಣ್ಯ ಅಧಿಕಾರಿಗೆ ಅಥವಾ ಅದನ್ನು ಪಡೆಯಲು ಹಕ್ಕುಳ್ಳ ಬೇರೆ ವ್ಯಕ್ತಿಗೆ ಸಂದಾಯ ಮಾಡಿದ ಹೊರತು ಮೇಲೆ ಹೇಳಿದಂತೆ ಸಂಗ್ರಹಿಸಲಾದ ಅಥವಾ ನೀಡಲಾದ ಯಾವುದೇ ಚೌಬೀನೆಯ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**59. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧ್ಯಾಯದ ಉದ್ದೇಶಗಳನ್ನು ನೆರವೇರಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳನ್ನು ಈ ಕೆಳಗಿನ ವಿಷಯಗಳನ್ನು ನಿಯಂತ್ರಿಸುವುದಕ್ಕಾಗಿ ರಚಿಸಬಹುದು, ಎಂದರೆ :-

(ಎ) 53ನೇ ಪ್ರಕರಣದಲ್ಲಿ ಹೇಳಲಾದ ಎಲ್ಲ ಚೌಬೀನೆಯ ರಕ್ಷಣೆ, ಸಂಗ್ರಹಣೆ ಮತ್ತು ವಿಲೆ;

(ಬಿ) ಚೌಬೀನೆಯನ್ನು ರಕ್ಷಿಸಲು ಮತ್ತು ಸಂಗ್ರಹಿಸಲು ಉಪಯೋಗಿಸಲಾಗುವ ದೋಣಿಗಳ ಅಥವಾ ಬೇರೆ ಯಾವುದಾದರೂ ಬೇರೆ ಸಾಧನದ ಉಪಯೋಗ ಮತ್ತು ನೋಂದಣಿ;

(ಸಿ) ಅಂಥ ಚೌಬೀನೆಯನ್ನು ರಕ್ಷಿಸುವ, ಸಂಗ್ರಹಿಸುವ, ಸ್ಥಳಾಂತರಿಸುವ, ಶೇಖರಿಸುವ ಮತ್ತು ವಿಲೆ ಮಾಡುವ ಬಗ್ಗೆ ಸಂದಾಯ ಮಾಡಬೇಕಾದ ಮೊಬಲಗುಗಳು; ಮತ್ತು

(ಡಿ) ಅಂಥ ಚೌಬೀನಗೆ ಗುರುತುಮಾಡುವುದಕ್ಕಾಗಿ ಉಪಯೋಗಿಸುವ ಸುತ್ತಿಗೆಗಳು ಮತ್ತು ಬೇರೆ ಸಾಧನಗಳ ಉಪಯೋಗ ಮತ್ತು ನೋಂದಣಿ;

(3) ಈ ಪ್ರಕರಣದ ಆಡಿಯಲ್ಲಿ ನಿಯಮಗಳನ್ನು ರಚಿಸುವಾಗ ರಾಜ್ಯ ಸರ್ಕಾರವು ಸದರಿ ನಿಯಮದ ಉಲ್ಲಂಘನೆಯ ಬಗ್ಗೆ ತಪ್ಪಿತಸ್ಥನಾದ ಯಾವೊಬ್ಬ ವ್ಯಕ್ತಿಯು, ಅವನ ಅಪರಾಧ ನಿರ್ಣಯವಾದ ತರುವಾಯ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವರಡರಿಂದಲೂ ದಂಡಿತ ನಾಗತಕ್ಕದ್ದೆಂದು ಉಪಬಂಧಿಸಬಹುದು.

## ಅಧ್ಯಾಯ-VIII
## ಜಾನುವಾರುಗಳ ಅತಿಕ್ರಮ ಪ್ರವೇಶ

**60. ಜಾನುವಾರುಗಳ ಅತಿಕ್ರಮ ಪ್ರವೇಶ ಅಧಿನಿಯಮ, 1871ರ ಅನ್ವಯ.-** ಯಾವುದೇ ಮೀಸಲು ಅರಣ್ಯದಲ್ಲಿ ಅಥವಾ ಗ್ರಾಮ ಅರಣ್ಯದಲ್ಲಿ ಅಥವಾ 33ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮೇಯುವುದಕ್ಕೆ ಕಾನೂನು ಸಮ್ಮತವಾಗಿ ಮುಚ್ಚಲಾದಂಥ ಯಾವುದೇ ಜಿಲ್ಲಾ ಅರಣ್ಯ ಭಾಗದಲ್ಲಿ ಅತಿಕ್ರಮ ಪ್ರವೇಶ ಮಾಡುವ ಜಾನುವಾರುಗಳ ಅತಿಕ್ರಮ ಪ್ರವೇಶ ಅಧಿನಿಯಮ, 1871ರ 11ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಒಂದು ಸಾರ್ವಜನಿಕ ನೆಡುತೋಪಿಗೆ, ನಷ್ಟವನ್ನುಂಟುಮಾಡುವ ಜಾನುವಾರುಗಳೆಂದು ಭಾವಿಸತಕ್ಕದ್ದು ಮತ್ತು ಅವುಗಳನ್ನು ಅಂಥ ಜಾನುವಾರುಗಳೆಂದು ಯಾವೊಬ್ಬ ಅರಣ್ಯ ಅಧಿಕಾರಿಯು ಅಥವಾ ಪೋಲಿಸ್ ಅಧಿಕಾರಿಯು ಹಿಡಿಯಬಹುದು ಮತ್ತು ದೊಡ್ಡಿಗೆ ಹಾಕಬಹುದು.

**61. ಆ ಅಧಿನಿಯಮದ ಅಡಿಯಲ್ಲಿ ನಿಗದಿಪಡಿಸಲಾದ ಜುಲ್ಮಾನೆಗಳನ್ನು ಬದಲಾಯಿಸಲು ಅಧಿಕಾರ.-** ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಜಾನುವಾರುಗಳ ಅತಿಕ್ರಮ ಪ್ರವೇಶ ಅಧಿನಿಯಮ, 1971ರ 12ನೇ ಪ್ರಕರಣದ ಅಡಿಯಲ್ಲಿ ನಿಗದಿಪಡಿಸಲಾದ ಜುಲ್ಮಾನೆಗಳ ಬದಲಾಗಿ ಈ ಅಧಿನಿಯಮದ 60ನೇ ಪ್ರಕರಣದ ಅಡಿಯಲ್ಲಿ ದೊಡ್ಡಿಗೆ ಹಾಕಲಾದ ಪ್ರತಿಯೊಂದು ಜಾನುವಾರಿಗೆ ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸುವಂಥ ಆದರೆ ಕೆಳಗೆ ನಮೂದಿಸಿದವುಗಳಿಗೆ ಮೀರದ ಜುಲ್ಮಾನೆಗಳನ್ನು ವಿಧಿಸತಕ್ಕದ್ದು, ಎಂದರೆ :-

| | |
|---|---|
| ಪ್ರತಿಯೊಂದು ಆನೆಗೆ | ಇಪ್ಪತ್ತು ರೂಪಾಯಿಗಳು |
| ಪ್ರತಿಯೊಂದು ಎಮ್ಮೆ, ಕೋಣ ಅಥವಾ ಒಂಟೆಗೆ | ನಾಲ್ಕು ರೂಪಾಯಿಗಳು |
| ಪ್ರತಿಯೊಂದು ಕುದುರೆ, ಹೆಣ್ಣು ಕುದುರೆ, ಬೀಜ ಒಡೆದ ಕುದುರೆ, ತಟ್ಟು , ಗಂಡು ಕುದುರೆ ಮರಿ, ಹೆಣ್ಣು ಕುದುರೆ ಮರಿ, ಹೇಸರುಗತ್ತೆ, ಹೋರಿ, ಹಸು, ಎತ್ತು ಅಥವಾ ಕಡಸು –ಇವುಗಳಿಗೆ | ಎರಡು ರೂಪಾಯಿಗಳು |
| ಪ್ರತಿಯೊಂದು ಕರು, ಕತ್ತೆ, ಹಂದಿ, ಟಗರು, ಹೆಣ್ಣು ಕುರಿ, ಕುರಿ ಮರಿ, ಆಡು, ಆಡಿನ ಮರಿ – ಇವುಗಳಿಗೆ | ಒಂದು ರೂಪಾಯಿಗಳು |

## ಅಧ್ಯಾಯ IX

## ದಂಡಗಳು ಮತ್ತು ಪ್ರಕ್ರಿಯೆ

**62. ಮುಟ್ಟುಗೋಲಾಗಬಹುದಾದ ಸ್ವತ್ತಿನ ಜಪ್ತಿ.-** (1) ಯಾವುದೇ ಅರಣ್ಯ ಉತ್ಪನ್ನದ ಸಂಬಂಧದಲ್ಲಿ ಅರಣ್ಯ ಅಪರಾಧ ಮಾಡಲಾಗಿದೆಯೆಂದು ನಂಬಲು ಕಾರಣವಿದ್ದಲ್ಲಿ. ಅಂಥ ಉತ್ಪನ್ನವನ್ನು ಅಂಥ ಯಾವುದೇ ಅಪರಾಧನ್ನು ಮಾಡುವುದಕ್ಕೆ ಉಪಯೋಗಿಸಲಾದ ಎಲ್ಲಾ ಉಪಕರಣಗಳು, ದೋಣಿಗಳು, ವಾಹನಗಳು ಅಥವಾ [1][ಜಾನುವಾರುಗಳೊಂದಿಗೆ ಅಥವಾ ಬಳಸಿದ ಯಾವುದೇ ಇತರ ಸ್ವತ್ತಿನೊಂದಿಗೆ,][1] ಯಾರೇ ಅರಣ್ಯ ಅಧಿಕಾರಿಯು ಅಥವಾ ಪೊಲೀಸು ಅಧಿಕಾರಿಯು ಜಪ್ತಿ ಮಾಡಬಹುದು.

1.1998ರ ಅಧಿನಿಯಮ ಸಂಖ್ಯೆ12 ದಿನಾಂಕ 11.05.1998ರ ಮೂಲಕ ಪ್ರತಿಯೋಜಿಸಲಾಗಿದೆ.

(2) ಯಾರೇ ಅಧಿಕಾರಿ ಅಥವಾ ಪೊಲೀಸು ಅಧಿಕಾರಿಯು, ಯಾವ ಅರಣ್ಯದ ಉತ್ಪನ್ನದ ಸಂಬಂಧದಲ್ಲಿ ಅರಣ್ಯ ಅಪರಾಧವನ್ನು ಮಾಡಲಾಗಿದೆಯೆಂದು ಅಥವಾ ಮಾಡಲಾಗುತ್ತಿದೆಯೆಂದು ಅಥವಾ ಮಾಡಲಾಗುತ್ತಿದೆಯೆಂದು ನಂಬಲು ಕಾರಣವಿರುವುದೋ ಅಂಥ ಅರಣ್ಯ ಉತ್ಪನ್ನವನ್ನು ಸಾಗಿಸುವುದಕ್ಕಾಗಿ ಯಾವುದೇ ವಾಹನವನ್ನು ಉಪಯೋಗಿಸಲಾಗಿದೆ ಎಂದು ಅಥವಾ ಉಪಯೋಗಿಸಲಾಗುತ್ತಿದೆ ಎಂದು ನಂಬಲು ತನಗೆ ಕಾರಣವಿದ್ದರೆ, ಅಂಥ ವಾಹನದ ಪ್ರಭಾರದಲ್ಲಿರುವ ಚಾಲಕನಿಗೆ ಅಥವಾ ಬೇರೆ ವ್ಯಕ್ತಿಗೆ ಸದರಿ ವಾಹನವನ್ನು ನಿಲ್ಲಿಸಲು ಮತ್ತು ಸದರಿ ವಾಹನದಲ್ಲಿರುವ ವಸ್ತುಗಳನ್ನು ಪರೀಕ್ಷಿಸುವದಕ್ಕೆ ಮತ್ತು ಅಂಥ ಚಾಲಕನ ಅಥವಾ ವಾಹನ ಪ್ರಭಾರದಲ್ಲಿರುವ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರುವಂಥ ಮತ್ತು ಒಯ್ಯಲಾದ ಸರಕುಗಳಿಗೆ ಸಂಬಂಧ ಪಡುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವದಕ್ಕೆ ಯುಕ್ತವಾಗಿ ಅಗತ್ಯವಿರಬಹುದಾದ ಅವಧಿಯವರೆಗೆ ಆ ವಾಹನವನ್ನು ತಟಸ್ಥವಾಗಿರಿಸಲು ಅಗತ್ಯಗೊಳಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ [1][xxx][1] ಯಾವುದೇ ಸ್ವತ್ತನ್ನು ಜಪ್ತಿ ಮಾಡಿದ ಪ್ರತಿಯೊಬ್ಬ ಅಧಿಕಾರಿಯು, ಸಾಧ್ಯವಾದಷ್ಟು ಬೇಗನೆ [2][ಹಾಗೆ ಜಪ್ತಿ ಮಾಡಿದ ಬಗ್ಗೆ ಒಂದು ವರದಿಯನ್ನು,-

(ಎ) ಅಪರಾಧವು, ರಾಜ್ಯ ಸರ್ಕಾರದ ಸ್ವತ್ತಾಗಿರುವ, ಚೌಬೀನೆ, ಆನೆ ದಂತ, [3][ಗುಳಮಾವು (ಮ್ಯಾಕಿಲಸ್ ಮ್ಯಾಕ್ರಾಂತೆ) ತೊಗಟೆ, ದಾಲ್ಚಿನ್ನಿ ಚಕ್ಕೆ, ಹಾಲ್ಮಡ್ಡಿ, (ಎಯ್ಲಾಂತರ್-ಮಲ ಬಾರಿಕಂ ಮರದ ಹಾಲು), ಬೆತ್ತಗಳು,][3] ಸೌದೆ ಅಥವಾ ಇದ್ದಿಲಿನ ಜಪ್ತಿಗೆ ಸಂಬಂಧಿಸಿದ್ದಲ್ಲಿ ಅಥವಾ ಗಂಧದ ಮರಗಳಿಗೆ

ಸಂಬಂಧಪಟ್ಟಿದ್ದಲ್ಲಿ, 71ಎ-ಪ್ರಕರಣದ ಅಡಿಯಲ್ಲಿ ಸಂಬಂಧಪಟ್ಟ ಪ್ರಾಧಿಕೃತ ಅಧಿಕಾರಿಗೆ ; ಮತ್ತು

(ಬಿ) ಇತರ ಪ್ರಕರಣಗಳಲ್ಲಿ, ಜಪ್ತಿ ಮಾಡಲು ಕಾರಣವಾದಂತಹ ಅಪರಾಧದ ವಿಚಾರಣೆಯನ್ನು ನಡೆಸಲು ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟ್ ರವರಿಗೆ ಸಲ್ಲಿಸತಕ್ಕದ್ದು:][2]

ಪರಂತು, ಯಾವ ಅರಣ್ಯ ಉತ್ಪನ್ನದ ಸಂಬಂಧದಲ್ಲಿ ಅಂಥ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲಾಗಿದೆಯೋ ಅಂಥ ಅರಣ್ಯ ಉತ್ಪನ್ನವು ಸರ್ಕಾರದ ಸ್ವತ್ತಾಗಿದ್ದರೆ ಮತ್ತು ಅಪರಾಧವನ್ನು ಮಾಡಿದವನು ಯಾರೆಂಬುದು ತಿಳಿಯದಿದ್ದರೆ, ಸದರಿ ಅಧಿಕಾರಿಯು ಸಾಧ್ಯವಾದಷ್ಟು ಬೇಗನೆ ತನ್ನ ವರಿಷ್ಠ ಅಧಿಕಾರಿಗೆ ಅಂಥ ಸನ್ನಿವೇಶಗಳ ಸಂಬಂಧದಲ್ಲಿ ಒಂದು ವರದಿಯನ್ನು ಮಾಡಿದರೆ ಸಾಕಾಗತಕ್ಕದ್ದು.

1. 1998ರ ಅಧಿನಿಯಮ ಸಂಖ್ಯೆ, 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1981ರ ಅಧಿನಿಯಮ 4ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1998ರ ಅಧಿನಿಯಮ ಸಂಖ್ಯೆ. 12 ದಿನಾಂಕ: 11.05.1998ರ ಮೂಲಕ ಸೇರಿಸಲಾಗಿದೆ.

[1][**62ಎ ತನಿಖೆಯ ವಿಷಯದಲ್ಲಿ ಅರಣ್ಯಾಧಿಕಾರಿಯ ಅಧಿಕಾರಗಳು.-** ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾಂಥ ನಿರ್ದಿಷ್ಟ ಪ್ರದೇಶದೊಳಗಿನ, ವಲಯ ಅರಣ್ಯಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಯಾವೊಬ್ಬ ಅರಣ್ಯಾಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿನ ಅಪರಾಧಿಗಳಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973ರ ಉಪಬಂಧಗಳ ಮೂಲಕ ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಒಬ್ಬ ಪೋಲೀಸ್ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು:

ಪರಂತು, ಅಂಥ ಯಾವುದೇ ಅಧಿಕಾರವು ರಾಜ್ಯ ಸರ್ಕಾರವು ನಿರ್ದಿಷ್ಟ ಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಮಾರ್ಪಾಟುಗಳು ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟಿರತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973ರ 156ನೇ ಪ್ರಕರಣದ ಉದ್ದೇಶಗಳಿಗಾಗಿ (1)ನೇ ಉಪಪ್ರಕರಣದ ಅಡಿಯಲ್ಲಿ ಯಾವ ಪ್ರದೇಶಕ್ಕೆ ಸಂಬಂಧಿಸಿದಂತೆ ಅರಣ್ಯಾಧಿಕಾರಿಗೆ ಅಧಿಕಾರ ನೀಡಲಾಗಿದೆಯೋ ಆ ಪ್ರದೇಶವನ್ನು ಒಂದು ಪೊಲೀಸು ಠಾಣೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ಅಧಿಕಾರಿಯನ್ನು ಅಂಥ ಠಾಣೆಯ ಪ್ರಭಾರೆಯಲ್ಲಿರುವ ಅಧಿಕಾರಿ ಎಂದು ಭಾವಿಸತಕ್ಕದ್ದು.

**62ಬಿ. ತನಿಖಾಧಿಕಾರಿಯಿಂದ ವರದಿ.-** 62ಎ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಕಾರ ನೀಡಲಾಗಿರುವ ಒಬ್ಬ ಅರಣ್ಯಾಧಿಕಾರಿಯು ಯಾವುದೇ ತನಿಖೆ ನಡೆಸಿದ ಮೇಲೆ, ಆಪಾದಿತನ ಪ್ರಾಸಿಕ್ಯೂಷನನ್ನು ಸಮರ್ಥಿಸಲು ಸಾಕ್ಷಿ ಇದೆಯೆಂದು ಕಂಡು ಬಂದರೆ, ತನಿಖಾಧಿಕಾರಿಯು, ಪ್ರಕರಣದ ತನಿಖೆ ನಡೆಸುವ ಅಥವಾ ವಿಚಾರ ಮಾಡುವ ಅಧಿಕಾರ ವ್ಯಾಪ್ತಿಯುಳ್ಳ ಮತ್ತು ಪೋಲೀಸು ವರದಿಗಳ ಮೇಲೆ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಅಧಿಕಾರವುಳ್ಳ ಮ್ಯಾಜಿಸ್ಟ್ರೇಟನಿಗೆ ಒಂದು ವರದಿಯನ್ನು (ಈ ವರದಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 190ನೇ ಪ್ರಕರಣದ ಉದ್ದೇಶಗಳಿಗಾಗಿ ಪೊಲೀಸು ವರದಿಯೆಂದು ಭಾವಿಸತಕ್ಕದ್ದು) ಸಲ್ಲಿಸತಕ್ಕದ್ದು.

**62ಸಿ. ಅರಣ್ಯಾಧಿಕಾರಿಗಳ ಪ್ರಮಾಣ ಪತ್ರ ಒಂದು ಸಾಕ್ಷ್ಯವಾಗಿರುವುದು.-** ಅರಣ್ಯ ಉತ್ಪನ್ನದ ಪರೀಕ್ಷೆಯಲ್ಲಿ ತರಬೇತಿ ಪಡೆದಿರುವಂಥ ಸುತ್ತು ಪರೀಕ್ಷೆ ಮಾಡುವ ಮತ್ತು ವರದಿ ನೀಡುವ ಸಲುವಾಗಿ ಹಾಗೆ ಸಲ್ಲಿಸಿದ ಅರಣ್ಯ ಉತ್ಪನ್ನದ ಸಂಬಂಧದಲ್ಲಿ ಈ ಪರವಾಗಿ ರಾಜ್ಯ ಸರ್ಕಾರವು ಪ್ರಮಾಣ ಪತ್ರ ನೀಡಲು ಪ್ರಾಧೀಕೃತಗೊಳಿಸಿರುವಂಥ ಒಬ್ಬ ವಲಯ ಅರಣ್ಯಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದಜೆಯ ಅರಣ್ಯಾಧಿಕಾರಿಯ ಸ್ವಹಸ್ತಾಕ್ಷರದಲ್ಲಿ ನೀಡಿರುವ ಪ್ರಮಾಣ ಪತ್ರವೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವ್ಯವಹಾರಗಳಲ್ಲಿ ಅಂಥ ಪ್ರಮಾಣ ಪತ್ರದಲ್ಲಿ ನಿರೂಪಿಸಲಾದ ವಾಸ್ತವಾಂಶಗಳ ಸಾಕ್ಷ್ಯವೆಂಬುದಾಗಿ ಬಳಸಿಕೊಳ್ಳಬಹುದು. ಆದರೆ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ ಮತ್ತು ಪ್ರಾಸಿಕ್ಯೂಷನ್ ಅಥವಾ ಆಪಾದಿತನು ಅರ್ಜಿ ಸಲ್ಲಿಸಿದರೆ, ಅರಣ್ಯಾಧಿಕಾರಿಯು ನೀಡಿರುವ ಪ್ರಮಾಣ ಪತ್ರದ ವಸ್ತು ವಿಷಯದ ಬಗ್ಗೆ ಅಂಥ ಯಾವೊಬ್ಬ ಅರಣ್ಯಾಧಿಕಾರಿಯನ್ನು ಸಮನು ಮಾಡತಕ್ಕದ್ದು ಮತ್ತು ವಿಚಾರಣೆ ನಡೆಸಬಹುದು.][1]

1. 2000ದ ಅಧಿನಿಯಮ 20ರ ಮೂಲಕ 62ಎ ರಿಂದ 62ಸಿ ಪ್ರಕರಣಗಳನ್ನು 04.10.2000 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**63. 62ನೇ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಲಾದ ಸ್ವತ್ತಿನ ಬಿಡುಗಡೆಗೆ ಅಧಿಕಾರ.-** ವಲಯ ಅರಣ್ಯಾಧಿಕಾರಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಯಾರೇ ಅರಣ್ಯ ಅಧಿಕಾರಿಯು ತಾನು ಅಥವಾ ತನ್ನ ಅಧೀನದಲ್ಲಿರುವ ಅಧಿಕಾರಿಯು [1][62ನೇ ಪ್ರಕರಣದ ಅಡಿಯಲ್ಲಿ, 71ಜಿ ಪ್ರಕರಣಕ್ಕೆ ಒಳಪಟ್ಟು,][1] ಯಾವುದೇ ಉಪಕರಣಗಳನ್ನು, ದೋಣಿಗಳನ್ನು, ವಾಹನಗಳನ್ನು ಅಥವಾ ಜಾನುವಾರುಗಳನ್ನು ಜಪ್ತಿ ಮಾಡಿದಲ್ಲಿ, [2][ಅಂಥ ಅಧಿಕಾರಿಯು

ಅಂದಾಜು ಮಾಡಿದ ಮೌಲ್ಯಕ್ಕೆ ಸಮನಾದ ಒಂದು ಬ್ಯಾಂಕು ಖಾತರಿಯನ್ನು ಆರೋಪಿತ ಅಪರಾಧದ ಸಂಬಂಧದಲ್ಲಿ ಹೂಡಲಾದ ಕ್ರಿಮಿನಲ್ ವ್ಯವಹರಣೆ ಅಂತಿಮವಾಗಿ ವಿಲೆಯಾಗುವವರೆಗೂ ಆಗ್ಗಾಗ್ಗೆ ನವೀಕರಿಸುತ್ತಿರತಕ್ಕದ್ದು) ಹಾಜರು ಪಡಿಸಿದ ಮೇಲೆ ಮತ್ತು][2] ಜಪ್ತಿಯನ್ನು ಯಾವ ಅಪರಾಧದ ಕಾರಣದಿಂದ ಮಾಡಲಾಗಿದೆಯೋ ಆ ಅಪರಾಧದ ಬಗ್ಗೆ ವಿಚಾರಣೆ ನಡೆಸಲು ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟಿನ ಮುಂದೆ ಬಿಡುಗಡೆ ಮಾಡುವ ಸ್ವತ್ತನ್ನು ಅಗತ್ಯವಿದ್ದರೆ ಮತ್ತು ಇದ್ದಾಗ ಹಾಜರು ಪಡಿಸಬೇಕೆಂದು ಕೇಳಿದರೆ, ಹಾಗೆ ಹಾಜರು ಪಡಿಸುವೆನೆಂದು ಮಾಲೀಕನಿಂದ ಒಂದು ಮುಚ್ಚಳಿಕೆಯನ್ನು ಬರಸಿಕೊಂಡ ಮೇಲೆ ಅವುಗಳನ್ನು ಬಿಡುಗಡೆ ಮಾಡಬಹುದು.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**64. [1][xxxx][1]**

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**[1][64ಎ. ಮೀಸಲು ಅರಣ್ಯ [2][ಜಿಲ್ಲಾ ಅರಣ್ಯ, ಗ್ರಾಮ ಅರಣ್ಯ, ಸಂರಕ್ಷಿತ ಅರಣ್ಯವಾಗಿ ರಚಿತವಾದ ಭೂಮಿಯನ್ನು ಮತ್ತು ಅರಣ್ಯ ಇಲಾಖೆಯ ನಿಯಂತ್ರಣದಲ್ಲಿ ಇರುವ ಯಾವುದೇ ಇತರ ಭೂಮಿಯನ್ನು][2] ಅನಧಿಕೃತವಾಗಿ ಸ್ವಾಧೀನತೆಗೆ ತೆಗೆದುಕೊಂಡದಕ್ಕೆ ದಂಡ.-** (1) ಮೀಸಲು ಅರಣ್ಯ, [2][ಜಿಲ್ಲಾ ಅರಣ್ಯ, ಗ್ರಾಮ ಅರಣ್ಯ, ಸಂರಕ್ಷಿತ ಅರಣ್ಯದಲ್ಲಿನ ಯಾವುದೇ ಭೂಮಿಯನ್ನು ಮತ್ತು ಅರಣ್ಯ ಇಲಾಖೆ ನಿಯಂತ್ರಣದಲ್ಲಿರುವ ಇತರ ಭೂಮಿಯನ್ನು][2] ಅನಧಿಕೃತವಾಗಿ ಸ್ವಾಧೀನ ಪಡಿಸಿಕೊಳ್ಳುವ ಯಾವನೇ ವ್ಯಕ್ತಿಯನ್ನು, ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಅಡಿಯಲ್ಲಿ ಅವನ ವಿರುದ್ಧವಾಗಿ ತೆಗೆದುಕೊಳ್ಳಬಹುದಾದ ಇತರ ಯಾವುದೇ ಕ್ರಮಕ್ಕೆ ಬಾಧಕ ಉಂಟಾಗದಂತೆ, ಸಹಾಯಕ ಅರಣ್ಯಗಳ ಸಂರಕ್ಷಣಾಧಿಕಾರಿ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಅರಣ್ಯ ಅಧಿಕಾರಿಯು ಕ್ಷಿಪ್ರವಾಗಿ ಹೊರಹಾಕಬಹುದು ಮತ್ತು ಮರಗಳು ಸೇರಿದಂತೆ ಭೂಮಿಯಲ್ಲಿ ಬೆಳೆದಿರುವ ಯಾವುದೇ ಬೆಳೆಯನ್ನು ಮತ್ತು ಅದರ ಮೇಲೆ ಕಟ್ಟಿರುವ ಯಾವುದೇ ಕಟ್ಟಡ ಅಥವಾ ಇತರ ರಚನೆಯನ್ನು, ಅರಣ್ಯಾಧಿಕಾರಿಯು ಗೊತ್ತುಪಡಿಸಬಹುದಾದಂಥ ಸಮಯದೊಳಗೆ ಅವನು ತೆಗೆದು ಹಾಕದಿದ್ದರೆ, ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಗುರಿಯಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಒಬ್ಬ ವ್ಯಕ್ತಿಯನ್ನು ಹೊರ ಹಾಕುವುದಕ್ಕೆ ಮೊದಲು ತನ್ನ ಅಹವಾಲು ಹೇಳಿಕೊಳ್ಳಲು ಅವನಿಗೆ ಸೂಕ್ತ ಅವಕಾಶವನ್ನು ಕೊಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮುಟ್ಟುಗೋಲು ಹಾಕಿ ಕೊಂಡ ಯಾವುದೇ ಸ್ವತ್ತನ್ನು ಅರಣ್ಯ ಅಧಿಕಾರಿಯು ನಿರ್ದೇಶಿಸಬಹುದಾದ ರೀತಿಯಲ್ಲಿ ವಿಲೆ ಮಾಡತಕ್ಕದ್ದು ಮತ್ತು ಯಾವುದೇ ಬೆಳೆ, ಕಟ್ಟಡ ಅಥವಾ ಇತರ ಕಾಮಗಾರಿಯನ್ನು ತೆಗೆದು ಹಾಕುವ ಮತ್ತು ಭೂಮಿಯನ್ನು ಅದರ ಪೂರ್ವಸ್ಥಿತಿಗೆ ತರಲು ಅವಶ್ಯಕವಾದ ಎಲ್ಲಾ ಕಾಮಗಾರಿಗಳ ವೆಚ್ಚವನ್ನು 109ನೇ ಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಹೊರ ಹಾಕಲಾದ ವ್ಯಕ್ತಿಯಿಂದ ವಸೂಲ್ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅರಣ್ಯಾಧಿಕಾರಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ, ಅಂಥ ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಪ್ರಾಧಿಕೃತಗೊಂಡ ಅಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅರಣ್ಯಾಧಿಕಾರಿಯ ಆದೇಶವು ಅಂಥ ಅಪೀಲಿನ ತೀರ್ಮಾನಕ್ಕೆ ಒಳಪಟ್ಟು, ಅಂತಿಮವಾಗಿರತಕ್ಕದ್ದು.][1]

1. ಪ್ರಕರಣ 64ಎ ಅನ್ನು 1974ರ ಅಧಿನಿಯಮ 23ರ ಮೂಲಕ 16.09.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**65. ಅರಣ್ಯ ಉತ್ಪನ್ನ, ಉಪಕರಣ ಇತ್ಯಾದಿಗಳು ಮುಟ್ಟುಗೋಲಿಗೆ ಗುರಿಯಾಗುವ ಸಂದರ್ಭಗಳು.-** (1) ಸರ್ಕಾರದ ಸ್ವತ್ತಾಗಿರದ ಆದರೆ, ಸದರಿ ಸ್ವತ್ತಿನ ಸಂಬಂಧವಾಗಿ ಅರಣ್ಯ ಅಪರಾಧ ಮಾಡಲಾಗಿದ್ದರೆ ಅಂಥ ಎಲ್ಲಾ ಚೌಬೀನೆ ಅಥವಾ ಅರಣ್ಯ ಉತ್ಪನ್ನಗಳು ಮತ್ತು ಅರಣ್ಯ ಸಂಬಂಧವಾದ ಅಪರಾಧ ಮಾಡುವಲ್ಲಿ ಉಪಯೋಗಿಸಲಾದ ಎಲ್ಲಾ ಉಪಕರಣಗಳು, ದೋಣಿಗಳು, ವಾಹನಗಳು ಮತ್ತು ಜಾನುವಾರಗಳು [1][(71ಜಿ ಪ್ರಕರಣಕ್ಕೆ ಒಳಪಟ್ಟು)][1] ಅಪರಾಧ ನಿರ್ಣಯ ಮಾಡಿದ ನ್ಯಾಯಾಲಯದ ಆದೇಶದ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲಾಗಲು ಗುರಿಯಾಗಿರತಕ್ಕದ್ದು.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಮುಟ್ಟುಗೋಲು, ಅಂಥ ಅಪರಾಧಕ್ಕಾಗಿ ನಿಯಮಿಸಲಾದ ಬೇರೆ ಯಾವುದೇ ದಂಡನೆಯೊಂದಿಗೆ ಹೆಚ್ಚುವರಿಯಾಗಿ ಇರಬಹುದು.

**66. ಅರಣ್ಯ ಅಪರಾಧದ ವಿಚಾರಣೆಯು ಮುಗಿದ ಮೇಲೆ ಅಪರಾಧವನ್ನು ಯಾವ ಉತ್ಪನ್ನದ ಸಂಬಂಧವಾಗಿ ಮಾಡಲಾಗಿತ್ತೋ ಆ ಉತ್ಪನ್ನದ ವಿಲೆ .-** ಯಾವುದೇ ಅರಣ್ಯ ಅಪರಾಧದ ವಿಚಾರಣೆ ಮುಗಿದ ಮೇಲೆ ಅಂಥ ಅಪರಾಧವನ್ನು ಯಾವ ಅರಣ್ಯ ಉತ್ಪನ್ನದ ಸಂಬಂಧವಾಗಿ ಮಾಡಲಾಗಿತ್ತೋ ಅಂಥ ಉತ್ಪನ್ನವನ್ನು, ಅದು ಸರ್ಕಾರದ ಸ್ವತ್ತಾಗಿದ್ದರೆ ಅಥವಾ ಅದು ಮುಟ್ಟುಗೋಲಾಗಿರುವಲ್ಲಿ, ಯಾರೇ ಅರಣ್ಯ ಅಧಿಕಾರಿಯು ಅದನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಬೇರೆ [1][ಯಾವುದೇ ಸಂದರ್ಭದಲ್ಲಿ 71ಜಿ ಪ್ರಕರಣಕ್ಕೆ ಒಳಪಟ್ಟು][1] ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**67. ಅಪರಾಧಿ ಯಾರೆಂದು ತಿಳಿಯದ ಅಥವಾ ಪತ್ತೆಯಾಗದ ಸಂಧರ್ಭದಲ್ಲಿ ಅನುಸರಿಸತಕ್ಕ ಪ್ರಕ್ರಿಯೆ.-** ಅಪರಾಧಿ ಯಾರೆಂದು ತಿಳಿಯದ ಅಥವಾ ಪತ್ತೆಯಾಗದ ಸಂಧರ್ಭದಲ್ಲಿ ಮ್ಯಾಜಿಸ್ಟ್ರೇಟನು, ಅವನಿಗೆ ಯಾವುದೊಂದು ಅಪರಾಧ ನಡೆದಿದೆ ಎಂದು ಕಂಡು ಬಂಧಲ್ಲಿ, [1][71ಜಿ ಪ್ರಕರಣಕ್ಕೆ ಒಳಪಟ್ಟು ಯಾವ ಸ್ವತ್ತಿನ ಸಂಬಂಧವಾಗಿ ಅಪರಾಧ ನಡೆದಿರುವುದೋ][1] ಆ ಸ್ವತ್ತನ್ನು ಅಪರಾಧ ಮಾಡಲು ಉಪಯೋಗಿಸಲಾದ ಮತ್ತು ಅರಣ್ಯ ಅಧಿಕಾರಿಯು ವಶಪಡಿಸಿಕೊಂಡ ಉಪಕರಣಗಳ, ದೋಣಿಗಳ, ವಾಹನಗಳ ಅಥವಾ ಜಾನುವಾರುಗಳ ಮತ್ತು ಬೇರೆ ವಸ್ತುಗಳ ಸಹಿತ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಮಾಡುವ ಅಥವಾ ಮ್ಯಾಜಿಸ್ಟ್ರೇಟರನು, ಅವುಗಳ ಬಗ್ಗೆ ಹಕ್ಕುಳ್ಳವನೆಂದು ಭಾವಿಸುವ ವ್ಯಕ್ತಿಗೆ ಅವುಗಳನ್ನು ಒಪ್ಪಿಸುವ ಆದೇಶ ಮಾಡಬಹುದು:

ಪರಂತು, ಸ್ವತ್ತನ್ನು ಜಪ್ತಿ ಮಾಡಲಾದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾಗುವವರೆಗೆ ಅಥವಾ ಅದನ್ನು ಕ್ಲೇಮು ಮಾಡುವ –ವ್ಯಕ್ತಿಯು, ಯಾರಾದರೂ ಇದ್ದಲ್ಲಿ, ಅವನ ಅಹವಾಲನ್ನು ಮತ್ತು ಕ್ಲೇಮನ್ನು ಸಮರ್ಥಿಸುವ ಬಗ್ಗೆ ಆತನು ಹಾಜರು ಪಡಿಸಬಹುದಾದ ಸಾಕ್ಷ್ಯ ಯಾವುದಾದರೂ ಇದ್ದಲ್ಲಿ, ಅಹವಾಲನ್ನು ಕೇಳದೇ ಅಂಥ ಅಧಿಕಾರಿಯು ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**68. 62ನೇ ಪ್ರಕರಣದ ಅಡಿಯಲ್ಲಿ ಜಪ್ತಿಮಾಡಿಕೊಳ್ಳಲಾದ ನಾಶ ಹೊಂದುವ ಸ್ವತ್ತಿನ ಬಗ್ಗೆ ಅನುಸರಿಸತಕ್ಕ ಪ್ರಕ್ರಿಯೆ.-**[1][[2][ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು 62ನೇ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಲಾದ ಅರಣ್ಯ ಅಧಿಕಾರಿ ಅಥವಾ ಯಾರೇ ಇತರ ಅರಣ್ಯ ಅಧಿಕಾರಿಯು][2] ಈ ಅಧಿನಿಯಮದಲ್ಲಿ ಅಥವಾ ಇತರೆ ಯಾವುದೇ

ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, 62ನೇ ಪ್ರಕರಣದ ಅಡಿಯಲ್ಲಿ ವಶಪಡಿಸಿಕೊಳ್ಳಲಾದ ಮತ್ತು ತ್ವರಿತವಾಗಿ ಮತ್ತು ಸ್ವಾಭಾವಿಕವಾಗಿ ನಾಶ ಹೊಂದುವ ಸ್ವತ್ತನ್ನು ಮಾರಾಟ ಮಾಡಬಹುದೆಂದು ನಿರ್ದೇಶಿಸಬಹುದು][1] ಮತ್ತು ಅಂಥ ಸ್ವತ್ತು ಮಾರಾಟವಾಗದಿದ್ದಲ್ಲಿ, ಹೇಗೆ ವ್ಯವಹರಿಸಬಹುದೋ ಹಾಗೆಯೇ ಬಂದ ಉತ್ಪನ್ನಗಳ ಬಗ್ಗೆ ವ್ಯವಹರಿಸಬಹುದು. [3][ಮತ್ತು ಅಂಥ ಪ್ರತಿಯೊಂದು ಮಾರಾಟದ ಬಗ್ಗೆ ತನ್ನ ಮೇಲಾಧಿಕಾರಿಗೆ ವರದಿ ಮಾಡಬಹುದು.][3]

1. 1981ರ ಅಧಿನಿಯಮ 1ರ ಮೂಲಕ 23.02.1981ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1984ರ ಅಧಿನಿಯಮ 11ರ ಮೂಲಕ 13.01.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**69. 65,66 ಮತ್ತು 67ನೇ ಪ್ರಕರಣದ ಅಡಿಯಲ್ಲಿನ ಆದೇಶಗಳ ಬಗ್ಗೆ ಅಪೀಲು.-** 62ನೇ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಿದ ಅಧಿಕಾರಿಯು ಅಥವಾ ಅವನ ವರಿಷ್ಠ ಅಧಿಕಾರಿಗಳ ಪೈಕಿ ಯಾರೇ ಅಧಿಕಾರಿಯು ಅಥವಾ ಹಾಗೆ ಜಪ್ತಿ ಮಾಡಲಾದ ಸ್ವತ್ತಿನಲ್ಲಿ ಹಿತಾಸಕ್ತಿಯಿದೆ ಎಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯು, 65,66 ಅಥವಾ 67ನೇ ಪ್ರಕರಣದ ಅಡಿಯಲ್ಲಿ ಆದೇಶಿಸಲಾದ ದಿನಾಂಕದಿಂದ ಮೂವತ್ತು ದಿನದೊಳಗೆ, ಸಾಮಾನ್ಯವಾಗಿ ಅಂಥ ಮ್ಯಾಜಿಸ್ಟ್ರೇಟರು ನೀಡಿದ ಆದೇಶಗಳ ಬಗ್ಗೆ ಅಪೀಲು ಮಾಡಬಹುದಾದ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು ಮತ್ತು ಅಂಥ ಅಪೀಲಿನ ಮೇಲೆ ಮಾಡಲಾದ ಆದೇಶವು ಅಂತಿಮವಾಗಿರತಕ್ಕದ್ದು.

**70. ಮುಟ್ಟುಗೋಲಾದ ಸ್ವತ್ತು ರಾಜ್ಯ ಸರ್ಕಾರದಲ್ಲಿ ನಿಹಿತವಾಗುವುದು.-** ಸಂದರ್ಭಾನುಸಾರ 65ನೇ ಪ್ರಕರಣದ ಅಥವಾ 67ನೇ ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಆದೇಶ ಹೊರಡಿಸಿದ್ದಲ್ಲಿ ಮತ್ತು ಆ ಆದೇಶ ವಿರುದ್ಧ ಅಪೀಲು ಮಾಡುವ ಬಗ್ಗೆ 69ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯ ಮುಕ್ತಾಯಗೊಂಡು ಅಂಥ ಯಾವುದೇ ಅಪೀಲು ಮಾಡಿರದಿದ್ದಲ್ಲಿ ಅಥವಾ ಅಂಥ ಅಪೀಲು ಮಾಡಲ್ಪಟ್ಟು, ಅಪೀಲು ನ್ಯಾಯಾಲಯವು ಅದರ ಮೇಲೆ ಅಂಥ ಸ್ವತ್ತಿನ ಸಂಬಂಧವಾಗಿ ಸಂಪೂರ್ಣ ಸ್ವತ್ತಿನ ಅಥವಾ ಅದರ ಭಾಗಗಳ ಸಂಬಂಧದಲ್ಲಿ ಅಂಥ ಆದೇಶವನ್ನು ಸ್ಥಿರೀಕರಿಸಿದಲ್ಲಿ, ಸಂದರ್ಭಾನುಸಾರ, ಅಂಥ ಸಂಪೂರ್ಣ ಸತ್ತು ಅಥವಾ ಅದರ ಭಾಗವು ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

**71. ಜಪ್ತಿ ಮಾಡಲಾದವನನ್ನು ಬಿಡುಗಡೆ ಮಾಡಲು ಅಧಿಕಾರದ ಉಳಿಸುವಿಕೆ.-** ಈ ಹಿಂದೆ ಹೇಳಿದ ಯಾವುದೂ 62ನೇ ಪ್ರಕರಣದ ಅಡಿಯಲ್ಲಿ ದಪ್ತಿ ಮಾಡಲಾದ ಆದರೆ, ಸರ್ಕಾರದ ಸ್ವತ್ತಾಗಿರದ ಸ್ವತ್ತನ್ನು ಕೂಡಲೇ ಬಿಟ್ಟು ಕೊಡುವುದಕ್ಕೆ ಮತ್ತು ಅಂಥ ಸ್ವತ್ತಿನ ಸಂಬಂಧವಾಗಿ ಮಾಡಲಾದ ಯಾವುದೇ ದೋಷಾರೋಪಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾರೇ ಅಧಿಕಾರಿಯು ನಿರ್ದೇಶಿಸುವುದನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ.

***1[71ಎ. ಕೆಲವು ಸಂದರ್ಭಗಳಲ್ಲಿ ಅರಣ್ಯ ಅಧಿಕಾರಿಯಿಂದ ಮುಟ್ಟುಗೋಲು.-** (1) ಈ ಅಧ್ಯಾಯದ ಮೇಲಿನ ಉಪಬಂಧಗಳಲ್ಲಿ [2][ಅಥವಾ ಇತರ ಯಾವುದೇ ಕಾನೂನಿನಲ್ಲಿ][2] ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರದ ಸ್ವತ್ತಾಗಿರುವಂಥ ಚೌಬೀನೇ, [3][ದಂತ, [4][ಗುಳ ಮಾವು ತೊಗಟೆ (ಮ್ಯಾಕಿಲಸ್ ಮರಾಂತ) ದಾಲ್ಚಿನ್ನಿ ಚಕ್ಕೆ, ಹಾಲುಮಡ್ಡಿ,][4] ಉರವಲು ಮತ್ತು ಇದ್ದಲಿನ ಸಂಬಂಧದಲ್ಲಿ ಮತ್ತು ಗಂಧದ ಮರದ ಸಂಬಂಧದಲ್ಲಿ][3] ಅರಣ್ಯ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲಾಗಿರುವಲ್ಲಿ 6ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಸ್ವತ್ತನ್ನು ವಶಪಡಿಸಿಕೊಂಡ ಅಧಿಕಾರಿಯು ಅದನ್ನು ಅಂಥ ಅಪರಾಧವನ್ನು ಮಾಡುವಾಗ ಬಳಸಿದಂಥ ಎಲ್ಲ ಸಲಕರಣೆಗಳು, ಹಗ್ಗಗಳು, ಸರಪಳಿಗಳು, ದೋಣಿಗಳು : ವಾಹನಗಳು ಮತ್ತು ಜಾನುವಾರುಗಳೊಂದಿಗೆ ರಾಜ್ಯ ಸರ್ಕಾರವು ಈ ಬಗ್ಗೆ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರಾಧಿಕೃತಗೊಳಿಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯ ಹುದ್ದೆಗೆ ಕಡಿಮೆಯಲ್ಲದ ಅಧಿಕಾರಿಯ (ಇಲ್ಲಿ ಇನ್ನು ಮುಂದೆ ಪ್ರಾಧಿಕೃತ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಮುಂದೆ ವಿನಾ ಕಾರಣ ವಿಳಂಬವಿಲ್ಲದೆ ಹಾಜರು ಪಡಿಸತಕ್ಕದ್ದು.

*1. 71ಎ ಯಿಂದ 71ಎಫ್ ಪ್ರಕರಣಗಳನ್ನು 1976ರ ಅಧಿನಿಯಮ 50ರ ಮೂಲಕ 22.06.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1981ರ ಅಧಿನಿಯಮ 1ರ ಮೂಲಕ 23.02.1981ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1981ರ ಅಧಿನಿಯಮ 1ರ ಮೂಲಕ 23.02.1981ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 1998ರ ಅಧಿನಿಯಮ 12ರ ಮೂಲಕ 11.05.1998 ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) 62ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಒಬ್ಬ ಪ್ರಾಧಿಕೃತ ಅಧಿಕಾರಿಯು ರಾಜ್ಯ ಸರ್ಕಾರದ ಕೃತ್ತಾಗಿರುವಂಥ ಯಾವುದೇ ಚೌಬೀನ, [1][ದಂತ, ಸೌದೆ, [2][ಗುಳ ಮಾವು ತೊಗಟೆ (ಮ್ಯಾಕಿಲಸ್ ಮರಾಂತ), ದಾಲ್ಚಿನ್ನಿ, ಚಕ್ಕೆ, ಹಾಲುಮಡ್ಡಿ (ಅಲಿಯಾಂತಾಸ್ ಮಲಬಾರಿಕಂನ ಹಾಲು) ಬೆತ್ತ][2] ಮತ್ತು ಇದ್ದಲು ಅಥವಾ ಗಂಧದ ಮರವನ್ನು][1] ವಶಪಡಿಸಿಕೊಂಡಲ್ಲಿ ಅಥವಾ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಂಥ

ಸ್ವತ್ತನ್ನು ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿದಲ್ಲಿ ಮತ್ತು ಅಂಥ ಸ್ವತ್ತಿನ ಸಂಬಂಧದಲ್ಲಿ ಅರಣ್ಯ ಅಪರಾಧವನ್ನು ಮಾಡಲಾಗಿದೆ ಎಂದು ತನಗೆ ಮನದಟ್ಟಾದರೆ, ಅಂಥ ಪ್ರಾಧಿಕೃತ ಅಧಿಕಾರಿಯು, ಅಂಥ ಅರಣ್ಯ ಅಪರಾಧಕ್ಕಾಗಿ ಪ್ರಾಸಿಕ್ಯೂಷನನ್ನು ಹೂಡಿರಲಿ ಅಥವಾ ಇಲ್ಲದಿರಲಿ, ಹಾಗೆ ಜಪ್ತಿ ಮಾಡಿದ ಸ್ವತ್ತನ್ನು ಅಂಥ ಅಪರಾಧ ಮಾಡುವಾಗ ಬಳಸಿದ ಎಲ್ಲಾ ಸಲಕರಣೆಗಳು, ಹಗ್ಗಗಳು, ಸರಪಳಿಗಳು, ದೋಣಿಗಳು, ವಾಹನಗಳು ಮತ್ತು ಜಾನುವಾರು ಗಳೊಂದಿಗೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಬಹುದು.

1. 1981ರ ಅಧಿನಿಯಮ 1ರ ಮೂಲಕ 23.02.1981ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998 ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(3) (ಎ) ಅಧಿಕೃತ ಅಧಿಕಾರಿಯು (2)ನೇ ಉಪ-ಪ್ರಕರಣ ಅಡಿಯಲ್ಲಿ ವಶಪಡಿಸಿಕೊಳ್ಳುವ ಆದೇಶವನ್ನು ಜಾರಿಗೊಳಿಸಿದ ತರುವಾಯ, ತಾನು, ಹಾಗೆ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ವಿಹಿತವಾಗಿದೆ ಎಂದು ಅಭಿಪ್ರಾಯ ಪಟ್ಟಲ್ಲಿ, ಅವನು, ವಶಪಡಿಸಿಕೊಳ್ಳಲಾದ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡುವಂತೆ ಆದೇಶಿಸಬಹುದು.

(ಬಿ) ಮೇಲೆ ಹೇಳಿದಂತೆ, ಯಾವುದೇ ವಶಪಡಿಸಿಕೊಂಡ ಸ್ವತ್ತನ್ನು ಮಾರಾಟ ಮಾಡಿದಲ್ಲಿ, ಯಾವುದೇ ಅಂಥ ಹರಾಜಿನ ಅಥವಾ ಅದಕ್ಕೆ ಸಂಬಂಧಪಟ್ಟ ಇತರೆ ಪ್ರಾಸಂಗಿಕ ವೆಚ್ಚಗಳನ್ನು ಕಳೆದ ತರುವಾಯ, 71ಸಿ ಅಥವಾ 71ಡಿ ಪ್ರಕರಣದ ಅಡಿಯಲ್ಲಿನ ಆದೇಶದ ಮೂಲಕ, 71ಎ ಪ್ರಕರಣದ ಅಡಿಯಲ್ಲಿ ಮಾಡಿದ ಮುಟ್ಟುಗೋಲನ್ನು ರದ್ದುಗೊಳಿಸಿದಲ್ಲಿ ಅಥವಾ ಶೂನ್ಯಗೊಳಿಸಿದಲ್ಲಿ ಅದನ್ನು ಅಂಥ ಆದೇಶದಲ್ಲಿ ನಿರ್ದಿಷ್ಟ ಪಡಿಸಿರಬಹುದಾದಂತ ಅದರ ಮಾಲೀಕನಿಗೆ ಅಥವಾ ಅದನ್ನು ಯಾರಿಂದ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತೋ ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.][1]

1. ಉಪಪ್ರಕರಣ 3(ಎ) ಮತ್ತು (ಬಿ) ಅನ್ನು 1981ರ ಅಧಿನಿಯಮ 1ರ ಮೂಲಕ 23.02.1981ಜಾರಿಗೆ ಬರುವಂತೆ ಸೇರಿಸಲಾಗಿದೆ.

**71ಬಿ. 71ಎ ಪ್ರಕರಣದ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಮೊದಲು - ಕಾರಣ ಕೇಳುವ ನೋಟೀಸು ನೀಡುವುದು.-** (1) ಯಾವುದೇ ಚೌಬೀನೆ, ಗಂಧದ ಮರ, ಇದ್ದಲು, ಸೌದ, [1][ಗುಳ ಮಾವು ತೊಗಟೆ (ಮಕಿಲಾಸ್ ಮರಾಂತ), ದಾಲಿನ್ನಿ ಚಕ್ಕೆ, ಹಾಲಮಡ್ಡಿ, (ಅಲಿಯಾಂತಸ್ ಮಲಬಾರಿಕಂ ಹಾಲು) ಬೆತ್ತಗಳು,][1] ದಂತ, ಸಲಕರಣೆಗಳು, ಹಗ್ಗಗಳು, ಸರಪಳಿಗಳು, ದೋಣಿಗಳು, ವಾಹನಗಳು ಅಥವಾ ಜಾನುವಾರುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಯಾವ ಆದೇಶವನ್ನೂ 71ಎ ಪ್ರಕರಣದ ಮೇರೆಗೆ ಯಾರಿಂದ ಅದನ್ನು ವಶಪಡಿಸಿಕೊಳ್ಳಲಾಗುವುದೋ ಆ ವ್ಯಕ್ತಿಗೆ ಲಿಖಿತ ನೋಟೀಸು ನೀಡಿದ ಹೊರತು ಮತ್ತು ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಪರಿಶೀಲಿಸಿದ ಹೊರತು ಹೊರಡಿಸತಕ್ಕದ್ದಲ್ಲ.

[2][ಪರಂತು, ಮೋಟಾರು ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವ ಯಾವ ಆದೇಶವನ್ನೂ, ಆ ವಾಹನದ ನೋಂದಾಯಿತ ಮಾಲೀಕನಿಗೆ ಲಿಖಿತ ನೋಟೀಸನ್ನು ಕೊಡುವುದು ಕಾರ್ಯಸಾಧ್ಯವೆಂದು ಪ್ರಾಧಿಕೃತ ಅಧಿಕಾರಿಗೆ ಮನದಟ್ಟಾದರೆ ಹಾಗೆ ನೋಟೀಸನ್ನು ಕೊಟ್ಟ ಹೊರತು ಮತ್ತು ಅವನ ಆಕ್ಷೇಪಣೆಗಳೇನಾದರೂ ಇದ್ದರೆ ಅದನ್ನು ಪರಿಶೀಲಿಸಿದ ಹೊರತು ಹೊರಡಿಸತಕ್ಕದ್ದಲ್ಲ.][2]

1.1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ
2.1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2)(1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಯಾವುದೇ ಸಲಕರಣೆ, ಹಗ್ಗ, ಸರಪಳಿ, ದೋಣಿ, ವಾಹನ ಅಥವಾ ಜಾನುವಾರನ್ನು ಮುಟ್ಟುಗೋಲು ಹಾಕಿಕೊಳ್ಳುವ ಯಾವ ಆದೇಶವನ್ನೂ, ಆ ಸಲಕರಣೆ, ಸರಪಳಿ, ದೋಣಿ, ಅಥವಾ ಜಾನುವಾರಿನ ಮಾಲೀಕನು ಸ್ವತಃ ತನ್ನ, ತನ್ನ ಏಜೆಂಟನು ಯಾರಾದರೂ ಇದ್ದರೆ ಅವನ ಮತ್ತು ಸಲಕರಣೆ, ಹಗ್ಗ, ಸರಪಳಿ, ದೋಣಿ, ವಾಹನ ಅಥವಾ ಜಾನುವಾರಿನ ಮೇಲ್ವಿಚಾರಣೆ ಹೊಂದಿದ್ದ ವ್ಯಕ್ತಿಯ ತಿಳುವಳಿಕೆಗೆ ಬಾರದೆ ಅಥವಾ ಪರೋಕ್ಷ ಸಮ್ಮತಿ ಇಲ್ಲದೆ ಚೌಬೀನೆ, ಗಂಧದ ಮರ, ಇದ್ದಿಲು, ಸೌದೆ, [1][ಗುಳ ಮಾವು ತೊಗಟೆ (ಮ್ಯಾಕಿಲಸ್ ಮರಾಂತ) ದಾಲ್ಚಿನ್ನಿ, ಚಕ್ಕೆ, ಹಾಲುಮಡ್ಡಿ (ಅಲಿಯಾಂತಾಸ್ ಮಲಬಾರಿಕಂನ ಹಾಲು) ಬೆತ್ತಗಳು][1] ಅಥವಾ ದಂತವನ್ನು ಸಾಗಿಸಲು ಅವುಗಳನ್ನು ಬಳಸಲಾಯಿತೆಂದು ಮತ್ತು ತಮ್ಮ ಪೈಕಿ ಪ್ರತಿಯೊಬ್ಬರೂ ಹಾಗೆ ಅವುಗಳನ್ನು ಬಳಸದಂತೆ ಮಾಡಲು ಎಲ್ಲಾ ಸಮಂಜಸ ಮತ್ತು ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದರೆಂದು ಪ್ರಾಧಿಕೃತ ಅಧಿಕಾರಿಗೆ ಮನವರಿಕೆಯಾಗುವಂತೆ ರುಜುವಾತು ಪಡಿಸಿದರೆ, 71ಎ ಪ್ರಕರಣದ ಅಡಿಯಲ್ಲಿ ಹೊರಡಿಸತಕ್ಕದ್ದಲ್ಲ.

1. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**71ಸಿ. ಪರಿಷ್ಕರಣೆ.-** [1][ರಾಜ್ಯ ಸರ್ಕಾರದಿಂದ ವಿಶೇಷವಾಗಿ ಪ್ರಾಧಿಕೃತಗೊಂಡ][1] ಅರಣ್ಯ ಸಂರಕ್ಷಣಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಯಾರೇ ಅರಣ್ಯ ಅಧಿಕಾರಿಯು, ಈ ಸಂಬಂಧದಲ್ಲಿ, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, 71ಎ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯ ಆದೇಶದ ದಿನಾಂಕದಿಂದ ಮೂವ್ವತ್ತು ದಿನಗಳು ಮುಕ್ತಾಯವಾಗುವುದಕ್ಕೆ ಮೊದಲು, ಆದೇಶದ ದಾಖಲೆಗಳನ್ನು ತಾನಾಗಿಯೇ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ತಾನು ಸೂಕ್ತವೆಂದು ಭಾವಿಸುವಂಥ

ವಿಚಾರಣೆಯನ್ನು ಮಾಡಬಹುದು ಅಥವಾ ಅಂಥ ವಿಚಾರಣೆಯನ್ನು ಮಾಡಲು ಕಾರಣವಾಗಬಹುದು ಹಾಗೂ ಅಂಥ ಆದೇಶವನ್ನು ಹೊರಡಿಸಬಹುದು:

ಪರಂತು, ಒಬ್ಬ ವ್ಯಕ್ತಿಗೆ ಬಾಧಕವಾಗಬಹುದಾದ, ಯಾವುದೇ ಆದೇಶವನ್ನೂ, ಅವನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು, ಈ ಪ್ರಕರಣದ ಅಡಿಯಲ್ಲಿ ಜಾರಿಗೊಳಿಸತಕ್ಕದ್ದಲ್ಲ.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**71ಡಿ. ಅಪೀಲು.-** 71ಎ ಮತ್ತು 71ಸಿ ಪ್ರಕರಣಗಳ ಅಡಿಯಲ್ಲಿ ಜಾರಿಗೊಳಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯ, ಅಂಥ ಆದೇಶವು ತನಗೆ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಯಾವ ಸ್ವತ್ತಿನ ಸಂಬಂಧದಲ್ಲಿ ಆದೇಶವನ್ನು ಹೊರಡಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೋ ಆ ಸ್ವತ್ತು ಇರುವ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿದ [1][ಸೆಷನ್ಸ್ ನ್ಯಾಯಾಧೀಶನಿಗೆ][1] ಅಪೀಲು ಮಾಡಿಕೊಳ್ಳಬಹುದು. ಮತ್ತು [1][ಸೆಷನ್ಸ್ ನ್ಯಾಯಾಧೀಶರು][1], ಅರ್ಜಿದಾರನಿಗೆ [2][ಮತ್ತು ಸಂದರ್ಭಾನುಸಾರ ಪ್ರಾಧಿಕೃತ ಅಧಿಕಾರಿ ಅಥವಾ 71ಸಿ ಪ್ರಕರಣದ ಅಡಿಯಲ್ಲಿ ವಿಶೇಷವಾಗಿ ಪ್ರಾಧಿಕೃತಗೊಂಡ ಅಧಿಕಾರಿಯು][2] ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ ಅಪೀಲಿನ ವಿರುದ್ಧ ಆದೇಶವನ್ನು ಸ್ಥಿರೀಕರಿಸಲು, ಮಾರ್ಪಾಟು ಮಾಡಲು ಅಥವಾ ರದ್ದುಗೊಳಿಸಲು ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2)(1)ನೇ ಉಪ-ಪ್ರಕರಣದ ಅಡಿಯಲ್ಲಿ ಸೆಶನ್ಸ್ ನ್ಯಾಯಾಧೀಶರ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದಲ್ಲ.][1]

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**71ಇ. ಮುಟ್ಟುಗೋಲಿನ ಐತೀರ್ಪು ಇತರ ಶಿಕ್ಷೆಗಳೊಂದಿಗೆ ಹಸ್ತಕ್ಷೇಪ ಮಾಡಕೂಡದು.-** [1][71ಎ ಪ್ರಕರಣ ಅಥವಾ 71ಸಿ ಪ್ರಕರಣ ಅಥವಾ 71ಡಿ ಪ್ರಕರಣದ ಅಡಿಯಲ್ಲಿ][1] ನೀಡಿದ ಯಾವುದೇ ಮುಟ್ಟುಗೋಲಿನ ಐತೀಪು, ಆ ಮೂಲಕ ಈ ಅಧಿನಿಯಮದ ಅಡಿಯಲ್ಲಿ ಹೊಣೆಗಾರನಾದ ಬಾಧಿತ ವ್ಯಕ್ತಿಗೆ ಯಾವುದೇ ಶಿಕ್ಷೆ ವಿಧಿಸುವುದನ್ನು ತಡೆ ಹಿಡಿಯತಕ್ಕದ್ದಲ್ಲ.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**71ಎಫ್. ಮುಟ್ಟುಗೋಲಾದ ಸ್ವತ್ತು ಸರ್ಕಾರದಲ್ಲಿ ಯಾವಾಗ ನಿಹಿತವಾಗುತ್ತದೆ.-** 71ಎ ಪ್ರಕರಣ ಅಥವಾ 71ಸಿ ಪ್ರಕರಣ [2][ಅಥವಾ 71ಡಿ ಪ್ರಕರಣದ][2] ಅಡಿಯಲ್ಲಿ ಪ್ರಕರಣಗಳ ಅಡಿಯಲ್ಲಿ ಯಾವುದೇ ಸ್ವತ್ತಿಗೆ ಮುಟ್ಟುಗೋಲಿಗಾಗಿ ಒಂದು ಆದೇಶವನ್ನು ನೀಡಿದಾಗ ಮತ್ತು ಅಂಥ ಆದೇಶವು, ಅಂದು ಪೂರ್ಣ ಸ್ವತ್ತಿಗೆ ಅಥವಾ ಅದರ ಭಾಗಕ್ಕೆ ಸಂಬಂಧಪಟ್ಟಂತೆ ಅಂತಿಮವಾದಾಗ, [2][ಅಂಥ ಸ್ವತ್ತು ಅಥವಾ ಅದರ ಭಾಗವು ಅಥವಾ 71ಎ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಅದು ಮಾರಾಟವಾಗಿದ್ದಲ್ಲಿ][2] ಅದಕ್ಕೆ ಸಂಬಂಧಪಟ್ಟ ಮಾರಾಟದಿಂದ ಬಂದ ಹಣವು ಸಂದರ್ಭಾನುಸಾರ, ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.][1*]

*1. 71ಎ ಯಿಂದ 71ಎಫ್ ಪ್ರಕರಣಗಳನ್ನು 1976ರ ಅಧಿನಿಯಮ 50ರ ಮೂಲಕ 22.06.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**71ಜಿ. ಕೆಲವು ಪ್ರಕರಣಗಳಲ್ಲಿ ಅಧಿಕಾರ ವ್ಯಾಪ್ತಿಯ ಪ್ರತಿಷೇಧ.-** ರಾಜ್ಯ ಸರ್ಕಾರಕ್ಕೆ ಸೇರಿದ ಯಾವುದೇ ಚೌಬೀನೆ, ದಂತ, [2][ಗುಳಮಾವು (ಮೆಕಿಲಸ್ ಮರಾಂತ) ತೊಗಟೆ, ದಾಲ್ಚಿನ್ನಿ ಚಕ್ಕೆ, ಹಾಲುಮಡ್ಡಿ (ಅಲಿಯಾಂತಸ್ ಮಲಬಾರಿಕಂ ಹಾಲು), ಬೆತ್ತಗಳು,][2] ಸೌದೆ ಅಥವಾ ಇದ್ದಿಲನ್ನು ಅಥವಾ ಯಾವುದೇ ಅಪರಾಧವನ್ನು ಮಾಡುವಲ್ಲಿ ಬಳಸಲಾದ ಯಾವುದೇ ಸಲಕರಣೆ, ಹಗ್ಗ, ಸರಪಳಿ, ದೋಣಿ, ವಾಹನ ಅಥವಾ ಜಾನುವಾರುಗಳೊಂದಿಗೆ ಯಾವುದೇ ಗಂಧದ ಮರವನ್ನು 62ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಿದಾಗ, 71ಎ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿ ಅಥವಾ 71ಸಿ ಪ್ರಕರಣದ ಅಡಿಯಲ್ಲಿ ವಿಶೇಷವಾಗಿ ಅಧಿಕಾರ ನೀಡಲಾದ ಅಧಿಕಾರಿ ಅಥವಾ 71ಡಿ ಪ್ರಕರಣದ ಅಡಿಯಲ್ಲಿ ಅಪೀಲನ್ನು ವಿಚಾರಣೆ ಮಾಡುವ ಸೆಷನ್ಸ್ ನ್ಯಾಯಾಧೀಶರು, ಅಂಥ ಸ್ವತ್ತಿನ ಅಭಿರಕ್ಷೆ, ಸ್ವಾಧೀನತೆ, ರವಾನೆ, ವಿಲೆ ಅಥವಾ ವಿತರಣೆಗೆ ಸಂಬಂಧಪಟ್ಟಂತೆ ಆದೇಶಗಳನ್ನು ಹೊರಡಿಸಲು ಅಧಿಕಾರ ವ್ಯಾಪ್ತಿ ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದಲ್ಲಿಅಥವಾ 1973ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (1974ರ ಕೇಂದ್ರ ಅಧಿನಿಯಮ 2) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಇತರ ಯಾವೊಬ್ಬ ಅಧಿಕಾರಿ, ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರಕ್ಕೆ ಸದರಿ ಅಧಿಕಾರ ವ್ಯಾಪ್ತಿಯಿರತಕ್ಕದ್ದಲ್ಲ.][1]

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**72. ದೋಷಪೂರಿತ ಜಪ್ತಿಗಾಗಿ ದಂಡನೆ.-** (1) ಈ ಅಧಿನಿಯಮದ ಅಡಿಯಲ್ಲಿ ಮುಟ್ಟುಗೋಲಿಗೆ ಗುರಿಯಾಗಿರುವುದೆಂಬ ಸೋಗಿನಲ್ಲಿ ಯಾರೇ ಅರಣ್ಯ ಅಧಿಕಾರಿಯು ಅಥವಾ ಪೊಲೀಸ್ ಅಧಿಕಾರಿಯು ಪೀಡಿಸುವುದಕ್ಕಾಗಿ ಅಥವಾ ಅನವಶ್ಯಕವಾಗಿ ಯಾವುದೇ ಸ್ವತ್ತನ್ನು ಜಪ್ತಿ ಮಾಡಿದರೆ ಅವನು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳಿಗೆ ವಿಸ್ತರಿಸಬಹುದಾದ ಕಾರಾವಾಸ ದಂಡನೆಯಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಹಾಗೆ ವಿಧಿಸಲಾದ ಯಾವುದೇ ಜುಲ್ಮಾನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಪರಾಧ ನಿರ್ಣಯಿಸಿದ ನ್ಯಾಯಾಲಯವು ಹಾಗೆ ನಿರ್ದೇಶಿಸಿದಲ್ಲಿ ಅಂಥ ಜಪ್ತಿಯಿಂದ ಬಾಧಿತನಾದ ವ್ಯಕ್ತಿಗೆ ಪರಿಹಾರವಾಗಿ ಕೊಡಬಹುದು.

**73. ಮರಗಳ ಅಥವಾ ಚೌಬೀನೆಯ ಮೇಲಿನ ಗುರುತುಗಳನ್ನು ಖೋಟಾಗೊಳಿಸುವ ಅಥವಾ ವಿರೂಪಗೊಳಿಸಿದಕ್ಕಾಗಿ ಮತ್ತು ಮೇರೆ ಗುರುತುಗಳನ್ನು ಬದಲಾಯಿಸಿದಕ್ಕಾಗಿ ದಂಡ.-** ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಹಾನಿ ಅಥವಾ ನಷ್ಟವನ್ನು ಉಂಟು ಮಾಡುವ ಉದ್ದೇಶದಿಂದ ಅಥವಾ ಭಾರತೀಯ ದಂಡ ಸಂಹಿತೆಯಲ್ಲಿ ಪರಿಭಾಷಿಸಲಾಗಿರುವಂತೆ ಅಕ್ರಮ ಲಾಭ ಪಡೆದುಕೊಳ್ಳುವ ಉದ್ದೇಶದಿಂದ,-

(ಎ) ಯಾವ ಚೌಬೀನೆ ಅಥವಾ ನಿಂತ ಮರವು ಸರ್ಕಾರದ ಸ್ವತ್ತೆಂದು ಅಥವಾ ಯಾರೊಬ್ಬರ ಸ್ವತ್ತೆಂದು ಅಥವಾ ಯಾರೇ ವ್ಯಕ್ತಿಯು ಕಾನೂನು ಸಮ್ಮತವಾಗಿ ಕಡಿದು ಹಾಕಬಹುದಾಗಿದೆ ಅಥವಾ ಸಾಗಿಸಬಹುದಾಗಿದೆ ಎಂದು ಸೂಚಿಸಲು ಅದರ ಮೇಲೆ ಅರಣ್ಯ ಅಧಿಕಾರಿಯು ಉಪಯೋಗಿಸುವಂತಹ ಗುರುತನ್ನು ಬುದ್ಧಿಪೂರ್ವಕವಾಗಿ ಖೋಟಾ ಆಗಿ ಹಾಕಿದರೆ; ಅಥವಾ

(ಬಿ)ಅರಣ್ಯ ಅಧಿಕಾರಿಗಳು ಉಪಯೋಗಿಸುವಂಥ ಗುರುತನ್ನು ಯಾವುದೇ ಬೇನೆಗೆ ಅಥವಾ ನಿಂತ ಮರಕ್ಕೆ ಕಾನೂನಿಗೆ ವಿರುದ್ಧವಾಗಿ ಹಾಕಿದರೆ; ಅಥವಾ

(ಸಿ)ಚೌಬೀನೆ ಅಥವಾ ನಿಂತ ಮರದ ಮೇಲೆ ಅರಣ್ಯ ಅಧಿಕಾರಿಗಳು ಹಾಕಿದ ಅಥವಾ ಅವರ ಪ್ರಾಧಿಕಾರದ ಅಡಿಯಲ್ಲಿ ಹಾಕಿದ ಯಾವುದೇ ಗುರುತನ್ನು ಬದಲಾಯಿಸಿದರೆ, ವಿರೂಪಗೊಳಿಸಿದರೆ ಅಥವಾ ಅಳಿಸಿದರೆ; ಅಥವಾ

(ಡಿ) ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವಂಥ ಯಾವುದೇ ಅರಣ್ಯ ಅಥವಾ ಬಂಜರು ಭೂಮಿಯ ಮೇಲೆ ಗುರುತನ್ನು ಬದಲಾಯಿಸಿದರೆ, ಸರಿಸಿದರೆ, ನಾಶಗೊಳಿಸಿದರೆ ಅಥವಾ ವಿರೂಪಗೊಳಿಸಿದರೆ,

- ಅವನು, ಅಪರಾಧ ನಿರ್ಣಯವಾದ ಮೇಲೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**74. ವಾರೆಂಟು ಇಲ್ಲದೆ ದಸ್ತಗಿರಿ ಮಾಡುವ ಅಧಿಕಾರ.-** (1) ಯಾರೇ ಅರಣ್ಯ ಅಧಿಕಾರಿಯು ಅಥವಾ ಪೊಲೀಸ್ ಅಧಿಕಾರಿಯು, ಮ್ಯಾಜಿಸ್ಟ್ರೇಟಿನಿಂದ ಆದೇಶವನ್ನು ಪಡೆಯದೆ ಮತ್ತು ವಾರೆಂಟು ಇಲ್ಲದೆ ಒಂದು ತಿಂಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಯವರೆಗಿನ ಕಾರಾವಾಸದಿಂದ ದಂಡಿತವಾಗಬಹುದಾದಂಥ ಯಾವುದೇ ಅರಣ್ಯ ಅಪರಾಧಕ್ಕೆ ಸಂಬಂಧಪಟ್ಟಿರುವುದಾಗಿ ಯುಕ್ತ - ಸಂದೇಹಕ್ಕೆ ಎಡೆಮಾಡಿಕೊಡುವ ಯಾರೇ ವ್ಯಕ್ತಿಯನ್ನು, ಅಂಥ ವ್ಯಕ್ತಿಯು, ತನ್ನ ಹೆಸರು ಅಥವಾ ವಿಳಾಸವನ್ನು ತಿಳಿಸಲು ನಿರಾಕರಿಸಿದರೆ ಅಥವಾ ಸುಳ್ಳಾಗಿದೆ ಎಂದು ನಂಬಲು ಕಾರಣವಿರುವಂಥ ಹೆಸರು ಅಥವಾ ವಿಳಾಸವನ್ನು ಕೊಟ್ಟರೆ ಅಥವಾ ಅವನು ಪರಾರಿಯಾಗುತ್ತಾನೆ ಎಂದು ನಂಬಲು ಕಾರಣವಿದ್ದಲ್ಲಿ, ದಸ್ತಗಿರಿ ಮಾಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ದಸ್ತಗಿರಿಯಾದ ಯಾರೇ ವ್ಯಕ್ತಿಗೆ ಯಾವ ಕಾರಣಗಳ ಮೇಲೆ ಅವನನ್ನು ದಸ್ತಗಿರಿ ಮಾಡಲಾಗಿದೆ ಎಂಬುದನ್ನು ಸಾಧ್ಯವಾದಷ್ಟು ಬೇಗನೆ ತಿಳಿಸತಕ್ಕದ್ದು ಮತ್ತು ಅವನು ಮಾಡಿರುವ ಅಪರಾಧದ ಸಂಬಂಧವಾಗಿ ಅಧಿಕಾರ ವ್ಯಾಪ್ತಿಯುಳ್ಳ ಅತ್ಯಂತ ಸಮೀಪದ ಮ್ಯಾಜಿಸ್ಟ್ರೇಟನ ಮುಂದೆ ಅವನನ್ನು ದಸ್ತಗಿರಿ ಮಾಡಿದ, ಆದರೆ ಇದರಲ್ಲಿ ಅವನನ್ನು ದಸ್ತಗಿರಿ ಮಾಡಿದ ಸ್ಥಳದಿಂದ ಮ್ಯಾಜಿಸ್ಟ್ರೇಟಿನ ನ್ಯಾಯಾಲಯಕ್ಕೆ ಅವನನ್ನು ಕೊಂಡೊಯ್ಯಲು ಅಗತ್ಯವಿರುವ ಅವಧಿಯನ್ನು ಬಿಟ್ಟು, ಇಪ್ಪತ್ನಾಲ್ಕು ಗಂಟೆಯೊಳಗಾಗಿ ಹಾಜರುಪಡಿಸತಕ್ಕದ್ದು ಮತ್ತು ಅಂಥ ಯಾವ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನಿಂದ ಪಡೆದ ಅಧಿಕಾರವಿಲ್ಲದೆ ಸದರಿ ಅವಧಿಗಿಂತ ಹೆಚ್ಚಾಗಿ ಬಂಧನಲ್ಲಿಡತಕ್ಕದ್ದಲ್ಲ.

**75. ದಸ್ತಗಿರಿಯಾದ ವ್ಯಕ್ತಿಯನ್ನು ಮುಚ್ಚಳಿಕೆ ಆಧಾರದ ಮೇಲೆ ಬಿಡುಗಡೆ ಮಾಡುವ ಅಧಿಕಾರ.-** 74ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಯಾವನೇ

ವ್ಯಕ್ತಿಯನ್ನು ದಸ್ತಗಿರಿ ಮಾಡಿರುವ ವಲಯ ಅರಣ್ಯಾಧಿಕಾರಿಯ ದರ್ಜೆಗೆ ಕಡಿಮೆಯಲ್ಲದ ಯಾರೇ ಅರಣ್ಯ ಅಧಿಕಾರಿಯು ಅಥವಾ ಅವನ ಅಧೀನ ಅಧಿಕಾರಿಯು ಅಂಥ ವ್ಯಕ್ತಿಯು, ಅಗತ್ಯಪಡಿಸಿದರೆ ಮತ್ತು ಅಗತ್ಯಪಡಿಸಿದಾಗಲೆಲ್ಲಾ ಆ ಪ್ರಕರಣದ ಬಗ್ಗೆ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಅತ್ಯಂತ ಸಮೀಪದ ಪೊಲೀಸು ಠಾಣೆಯ ಪ್ರಭಾರ ಹೊಂದಿರುವ ಅಧಿಕಾರಿಯ ಮುಂದೆ ತಾನು ಹಾಜರು ಆಗುವುದಾಗಿ ಸೂಕ್ತವಾದ ಜಾಮೀನಿನ ಸಮೇತ ಮುಚ್ಚಳಿಕೆ ಬರೆದುಕೊಟ್ಟರೆ, ಬಿಡುಗಡೆ ಮಾಡಬಹುದು.

**76. ಅಪರಾಧ ಎಸಗುವುದನ್ನು ತಡೆಯಲು ಅಧಿಕಾರ.-** ಪ್ರತಿಯೊಬ್ಬ ಅರಣ್ಯ ಅಧಿಕಾರಿಯು ಮತ್ತು ಪೊಲೀಸ್ ಅಧಿಕಾರಿಯು ಯಾವುದೇ ಅರಣ್ಯ ಅಪರಾಧ ಎಸಗುವುದನ್ನು ತಡೆಯತಕ್ಕದ್ದು ಮತ್ತು ತಡೆಯುವ ಉದ್ದೇಶಕ್ಕಾಗಿ ಮಧ್ಯ ಪ್ರವೇಶಿಸಬಹುದು.

[1][**76ಎ. ಅಪರಾಧಗಳು ಇತ್ಯಾದಿ., ಎಸಗುವುದನ್ನು ತಡೆಯುವುದು.-** ಯಾರೇ ಅರಣ್ಯ ಅಧಿಕಾರಿಯು ಅಗತ್ಯವಾದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಅಥವಾ ವನ್ಯಜೀವಿಗಳ (ರಕ್ಷಣಾ) ಅಧಿನಿಯಮ, 1972ರ ಅಧ್ಯಾಯ VIರ ಅಡಿಯಲ್ಲಿ ಯಾವುದೇ ಅಪರಾಧ ನಡೆಯುವುದನ್ನು ತಡೆಯಲು ಅಥವಾ ಸದರಿ ಅಧಿನಿಯಮಗಳ ಅಡಿಯಲ್ಲಿ ಯಾವುದೇ ಅಪರಾಧ ಎಸಗಿರುವ ಅಥವಾ ಎಸಗುವುದರಲ್ಲಿ ತೊಡಗಿರುವ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅಥವಾ ಸದರಿ ಅಧಿನಿಯಮಗಳ ಅಡಿಯಲ್ಲಿ ಯಾವುದೇ ಆಯುಧಗಳು, ವಾಹನಗಳು, ಗಾಡಿ, ದೋಣಿ, ಇತರ ಯಾವುದೇ ವಾಹನ, ಉಪಕರಣಗಳು ಅಥವಾ ಸದರಿ ಅಧಿನಿಯಮಗಳ ಅಡಿಯಲ್ಲಿ ಅಪರಾಧ ಮಾಡಲು ಅಥವಾ ಅಪರಾಧವನ್ನು ಯಾವುದರ ಸಂಬಂಧದಲ್ಲಿ ಮಾಡಲಾಗಿದೆಯೋ ಆ ಅರಣ್ಯ ಉತ್ಪನ್ನವನ್ನು ಕೊಂಡೊಯ್ಯಲು, ಸಾಗಿಸಲು, ಬಚ್ಚಿಡಲು ಅಥವಾ ಇಡಲು ಬಳಸಿದ ಇತರ ಯಾವುದೇ ವಸ್ತುವನ್ನು ವಶಪಡಿಸಿಕೊಳ್ಳಲು ಎಷ್ಟು ಅಗತ್ಯವೋ ಅಷ್ಟು ಬಲವನ್ನು ಉಪಯೋಗಿಸ ಬಹುದು ಮತ್ತು ವ್ಯಕ್ತಿಗಳಿಗೆ ಮತ್ತು ಸ್ವತ್ತಿಗೆ ಹಾನಿಯನ್ನು ಮಾಡಬಹುದು.][1]

1. 2000ರ ಅಧಿನಿಯಮ 20ರ ಮೂಲಕ 04.10.2000 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**77. ಅಪರಾಧಗಳನ್ನು ಕ್ಷಿಪ್ರ ರೀತಿಯಲ್ಲಿ ವಿಚಾರಿಸಲು ಅಧಿಕಾರ.-** ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಆ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ವಿಶೇಷವಾಗಿ ಅಧಿಕೃತಗೊಳಿಸಲಾದ ಯಾರೇ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನು [1][ದಂಡ ಪ್ರಕ್ರಿಯಾ

ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ II)][1] ಅಡಿಯಲ್ಲಿ ಆರು ತಿಂಗಳವರೆಗೆ ವಿಸ್ತರಿಸಬುದಾದಂಥ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿಸಲ್ಪಡಬಹುದಾದ ಅರಣ್ಯ ಅಪರಾಧವನ್ನು ಕ್ಷಿಪ್ರವಾಗಿ ವಿಚಾರಿಸಬಹುದು.

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**78. ಇತರ ಕಾನೂನುಗಳ ಪ್ರವರ್ತನೆಗೆ ಪ್ರತಿಬಂಧವಿಲ್ಲ.-** ಈ ಅಧಿನಿಯಮದಲ್ಲಿರುವುದು ಯಾವುದೂ, ಬೇರೆ ಯಾವುದೇ ಕಾನೂನಿನ ಅಡಿಯಲ್ಲಿ ಒಂದು ಅರಣ್ಯ ಅಪರಾಧವಾಗಿರುವ ಯಾವುದೇ ಕಾರ್ಯ ಅಥವಾ ಅದರ ಲೋಪಕ್ಕಾಗಿ ಯಾರೇ ವ್ಯಕ್ತಿಯು ಪ್ರಾಸಿಕ್ಯೂಷನ್ನಿಗೆ ಗುರಿಯಾಗುವುದನ್ನು ಪ್ರತಿಬಂಧಿಸುವುದೆಂದು ಅಥವಾ ಅಂತ ವ್ಯಕ್ತಿಯು ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಉಪಬಂಧಿಸಲಾದ ದಂಡನೆ ಅಥವಾ ದಂಡಕ್ಕಿಂತ ಹೆಚ್ಚಿನದುದಕ್ಕೆ ಅಂಥ ಬೇರೆ ಕಾನೂನಿನ ಮೇರೆಗೆ ಗುರಿಯಾಗುವುದನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ:

ಪರಂತು, ಯಾವ ವ್ಯಕ್ತಿಯನ್ನು ಒಂದೇ ಅಪರಾಧಕ್ಕಾಗಿ ಎರಡು ಸಲ ದಂಡಿಸತಕ್ಕದ್ದಲ್ಲ.

**79. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಅಧಿಕಾರ.-** (1) ರಾಜ್ಯ ಸರ್ಕಾರವು [1][ಅಧಿಸೂಚನೆಯ ಮೂಲ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು][1] ಅರಣ್ಯ ಅಧಿಕಾರಿಗೆ,-

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) 72ನೇ ಪ್ರಕರಣದ ಆಥವಾ 73ನೇ ಪ್ರಕರಣದ [1][ಅಥವಾ 86ನೇ ಪ್ರಕರಣದ ಅಥವಾ 87ನೇ ಪ್ರಕರಣದ][1] ಅಡಿಯಲ್ಲಿನ ಅಪರಾಧವಾಗಿರದ ಯಾವುದೇ ಆರಣ್ಯ ಅಪರಾಧವನ್ನು ಯಾರೇ ವ್ಯಕ್ತಿಯು ಎಸಗಿರುವುದಾಗಿ ಅವನ ಮೇಲೆ ಯುಕ್ತ ಸಂದೇಹವಿದ್ದಲ್ಲಿ, ಅವನು ಎಸಗಿರುವುದಾಗಿ ಸಂದೇಹಿಸಲಾದ ಅಪರಾಧದ ರಾಜಿಗಾಗಿ [2][ಐವತ್ತು ಸಾವಿರ ರೂಪಾಯಿಗಳಿಗೆ][2] ಮೀರದಂಥ ಮೊಬಲಗನ್ನು ಸ್ವೀಕರಿಸಲು;

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) [1][71ಜಿ ಪ್ರಕರಣಕ್ಕೆ ಒಳಪಟ್ಟು][1] ಮುಟ್ಟುಗೋಲಿಗೆ ಗುರಿಯಾಗುವುದೆಂದು ಯಾವುದೇ ಸ್ವತ್ತನ್ನು ವಶಕ್ಕೆ ತೆಗೆದುಕೊಂಡಾಗ ಅಂಥ ಸ್ವತ್ತನ್ನು ವಶಪಡಿಸಿಕೊಂಡು ಅಧಿಕಾರಿಯು [2][ನಿಯಮಿಸಬಹುದಾದ][2] ಸ್ವತ್ತಿನ ಬೆಲೆಯನ್ನು

ಸಂದಾಯ ಮಾಡಿದ ತರುವಾಯ ಅದನ್ನು ಬಿಡುಗಡೆ ಮಾಡಲು ಅಧಿಕಾರ ನೀಡಬಹುದು.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2)ಸಂಧರ್ಭಾನುಸಾರ ಅಂಥ ಮೊಬಗಲನ್ನು ಅಥವಾ ಅಂಥ ಬೆಲೆಯನ್ನು ಅಥವಾ ಅವರಡನ್ನು ಅಂಥ ಅಧಿಕಾರಿಗೆ ಸಂದಾಯ ಮಾಡಿದ ತರುವಾಯ ಗುಮಾನಿಗೆ ಒಳಗಾದ ವ್ಯಕ್ತಿಯು ಬಂಧನದಲ್ಲಿದ್ದಲ್ಲಿ ಅವನನ್ನು ಬಿಡುಗಡೆ ಮಾಡತಕ್ಕದ್ದು, ವಶಪಡಿಸಿಕೊಳ್ಳಲಾದ ಸ್ವತ್ತು ಯಾವುದಾದರೂ ಇದ್ದಲ್ಲಿ ಅದನ್ನು ಸಹ ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಯ ಅಥವಾ ಸ್ವತ್ತಿನ ಬಗ್ಗೆ ಯಾವ ಮುಂದಿನ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

(3) ಅರಣ್ಯ ವಲಯಾಧಿಕಾರಿಯ ದರ್ಜೆಗೆ ಕಡಿಮೆಯಲ್ಲದ ಯಾವೊಬ್ಬ ಅರಣ್ಯ ಅಧಿಕಾರಿಯನ್ನು ಈ ಪ್ರಕರಣದ ಅಡಿಯಲ್ಲಿ ಅಧಿಕೃತಗೊಳಿಸತಕ್ಕದ್ದಲ್ಲ.

**80. ಅರಣ್ಯ ಉತ್ಪನ್ನವು ಸರ್ಕಾರಕ್ಕೆ ಸೇರಿದ ಎಂಬ ಪೂರ್ವಭಾವನೆ.-** ಈ ಅಧಿನಿಯಮದ ಅಡಿಯಲ್ಲಿ ಹೂಡಲಾದ ಯಾವುದೇ ವ್ಯವಹರಣೆಗಳಲ್ಲಿ ಅಥವಾ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಅಡಿಯಲ್ಲಿ ಮಾಡಲಾದ ಯಾವುದೇ ಕೃತ್ಯದ ಪರಿಣಾಮದಿಂದ, ಯಾವುದೇ ಆರಣ್ಯದ ಉತ್ಪನ್ನವು ರಾಜ್ಯ ಸರ್ಕಾರದ ಸ್ವತ್ತಾಗಿದೆಯೇ ಇಲ್ಲವೇ ಎಂಬ ಪ್ರಶ್ನೆ ಉದ್ಭವಿಸಿದರೆ, ಅದಕ್ಕೆ ವಿರುದ್ಧವಾಗಿ ರುಜುವಾತಾಗುವವರೆಗೆ, ಅಂಥ ಉತ್ಪನ್ನವು ರಾಜ್ಯ ಸರ್ಕಾರದ ಸ್ವತ್ತಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಯಾವುದೇ ಪ್ರಾಸಿಕ್ಯೂಷನ್ನಿನ ಸಂದರ್ಭದಲ್ಲಿ ತದ್ವಿರುದ್ಧವಾಗಿ ರುಜುವಾತು ಮಾಡುವ ಹೊರೆ ಆಪಾದಿತನ ಮೇಲೆ ಇರತಕ್ಕದ್ದು.

**81. ಅಪರಾಧ ಎಸಗಿರುವುದರಿಂದ ಉಂಟಾದ ನಷ್ಟಕ್ಕಾಗಿ ಪರಿಹಾರ.-** (1) ಈ ಅಧಿನಿಯಮವನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮವನ್ನು ಉಲ್ಲಂಘಿಸಿ ಯಾರೇ ವ್ಯಕ್ತಿಯು, ಮರಗಳನ್ನು ಕೆಡವಿದ, ಸುತ್ತಪಟ್ಟಿ ಕೆತ್ತಿದ, ಗುರುತು ಮಾಡಿದ, ಕೊಂಬೆಗಳನ್ನು ಕತ್ತರಿಸಿದ ಅಥವಾ ಕಚ್ಚು ಹಾಕಿದ ಬಗ್ಗೆ ಅಥವಾ ಬೆಂಕಿಯಿಂದ ಅಥವಾ ಬೇರೆ ರೀತಿಯಿಂದ ಮರಗಳನ್ನು ಹಾನಿಗೊಳಿಸಿದ ಬಗ್ಗೆ ದೋಷಿ ಎಂದು ಸಿದ್ಧಪಟ್ಟಾಗ ಅಪರಾಧ ನಿರ್ಣಯಿಸಿದ ನ್ಯಾಯಾಲಯವು, ಅದು ವಿಧಿಸುವ ಬೇರಾವುದೇ ದಂಡನೆಯ ಜೊತೆಗೆ ತಾನು ನ್ಯಾಯೋಚಿತವೆಂದು ಭಾವಿಸಬಹುದಾದಂತೆ, ಯಾವ ಮರದ ವಿಷಯದಲ್ಲಿ ಅಪರಾಧ ಮಾಡಲ್ಪಟ್ಟಿದೆಯೋ ಆ ಪ್ರತಿಯೊಂದು ಮರದ ಬಗ್ಗೆ ಪರಿಹಾರವನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡುವಂತೆ ಆ ವ್ಯಕ್ತಿಗೆ ಆದೇಶ ನೀಡಬಹುದು.

(2) ಅಪರಾಧವೆಸಗಿದ ಬಗ್ಗೆ ಅಪರಾಧ ನಿರ್ಣೀತನಾದ ವ್ಯಕ್ತಿಯು, ಬೇರೆ ಯಾರೇ ವ್ಯಕ್ತಿಯ ಏಜೆಂಟನಾಗಿ ಅಥವಾ ಸೇವಕನಾಗಿ ಅಪರಾಧವನ್ನು ಎಸಗಿದಾಗ, ಅಪರಾಧ ನಿರ್ಣಯಿಸಿದ ನ್ಯಾಯಾಲಯವು ಅಂಥ ಬೇರ ವ್ಯಕ್ತಿಯ ವಿಚಾರಣೆಯನ್ನು ನಡೆಸಿದ ತರುವಾಯ ಅಪರಾಧ ಎಸಗಿರುವುದು ಆತನ ಪಾಲಿನ ಪ್ರೇರೇಪಣೆಯ ಅಥವಾ ನಿರ್ಲಕ್ಷ್ಯ ಅಥವಾ ಕಾರ್ಯಾಲೋಪದ ಪರಿಣಾಮವಾಗಿ ಅಲ್ಲವೆಂದು ತೃಪ್ತಿಗೊಂಡ ಹೊರತು, ಅಪರಾಧ ಎಸಗಿದ ವ್ಯಕ್ತಿಯ ಬದಲು ಆತನಿಗೆ (1)ನೇ ಉಪ-ಪ್ರಕರಣದಲ್ಲಿ ನಿರ್ದೇಶಿಸಲಾದ ಪರಿಹಾರವನ್ನು ಸಂದಾಯ ಮಾಡಬೇಕೆಂದು ಆದೇಶ ಮಾಡಬಹುದು.

(3)(1)ನೇ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶದ ಬಗ್ಗೆ ಮಾಡುವ ಅಪೀಲನ್ನು, ಅಪರಾಧ ನಿರ್ಣಯಿಸಿದ ನ್ಯಾಯಾಲಯದ ಆದೇಶಗಳ ಬಗ್ಗೆ ಸಾಮಾನ್ಯವಾಗಿ ಯಾವ ನ್ಯಾಯಾಲಯದಲ್ಲಿ ಅಪೀಲು ಮಾಡಬಹುದೋ ಆ ನ್ಯಾಯಾಲಯದಲ್ಲಿ ಮಾಡತಕ್ಕದ್ದು ಮತ್ತು ಅಂಥ ಅಪೀಲಿನಲ್ಲಿ ಮಾಡಿದ ಆದೇಶವು ಅಂತಿಮವಾಗಿರತಕ್ಕದ್ದು.

**82. ಗುತ್ತಿಗೆಗಳ ಮುಟ್ಟುಗೋಲು.-** ಈ ಅಧಿನಿಯಮದ ಉದ್ದೇಶಗಳಲ್ಲಿ ಯಾವುದಾದರೊಂದರ ಬಗ್ಗೆ ರಾಜ್ಯ ಸರ್ಕಾರದಿಂದ ಅಥವಾ ಅದರ ಪರವಾಗಿ ಕೊಡಲಾದ ಅಥವಾ ಮುಂದುವರಿಸಲಾದ ಯಾವುದಾದರೂ ಗುತ್ತಿಗೆ, ಲೈಸೆನ್ಸು ಅಥವಾ ಕರಾರು ಇವುಗಳನ್ನು ಹೊಂದಿರುವವನು ಯಾವುದೇ ಅಪರಾಧವನ್ನು ಮಾಡಿದ್ದಲ್ಲಿ ಅಥವಾ ಅಂಥ ಯಾವುದೇ ಗುತ್ತಿಗೆ, ಲೈಸೆನ್ಸು ಅಥವಾ ಕರಾರು ಇವುಗಳನ್ನು ಹೊಂದಿರುವವನ ಏಜೆಂಟನು ಸೇವಕನು ಅಂಥ ಅಪರಾಧವನ್ನು ಎಸಗಿದ್ದಲ್ಲಿ ಅದು ಅಂಥ ಹಿಡುವಳಿದಾರನ ಪ್ರೇರೇಪಣೆಯ ಅಥವಾ ಅವನ ಪಾಲಿನ ಉದ್ದೇಶಪೂರ್ವಕವಾದ ಯಾವುದೇ ನಿರ್ಲಕ್ಷ್ಯ ಅಥವಾ ಕಾರ್ಯಲೋಪದ ಪರಿಣಾಮದಿಂದಾಗಿ ಉಂಟಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದಲ್ಲಿ, ಈ ಬಗ್ಗೆ ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದಿಂದ ಯುಕ್ತವಾಗಿ ಅಧಿಕೃತಗೊಳಿಸಲಾದ ಅರಣ್ಯ ಅಧಿಕಾರಿಯು, ಲಿಖಿತ ಆದೇಶದ ಮೂಲಕ, ಆದೇಶದಲ್ಲಿ ಸ್ಪಷ್ಟಪಡಿಸಲಾದ ದಿನಾಂಕದಂದು ಮತ್ತು ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಗುತ್ತಿಗೆ, ಲೈಸನ್ಸ್ ಅಥವಾ ಕರಾರು ಪೂರ್ಣವಾಗಿ ಅಥವಾ ಭಾಗಶಃ ಮುಟ್ಟುಗೋಲು ಆಗತಕ್ಕದ್ದೆಂದು ಘೋಷಿಸಬಹುದು.

[1][82ಎ. **ನೌಕರರು ಮಾಡಿದ ಕೃತ್ಯಗಳಿಗೆ ಲೈಸೆನ್ಸುದಾರನ ಕ್ರಿಮಿನಲ್ ಬಾಧ್ಯತೆಗಳು.-** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿನ ಯಾವುದೇ ಅಪರಾಧವನ್ನು, ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಲೈಸೆನ್ಸ್ ಅಥವಾ ರಹದಾರಿ ಹೊಂದಿರುವವನ ನಿಯೋಜನೆಯಲ್ಲಿನ ವ್ಯಕ್ತಿ ಅಥವಾ ಅವನ ಪರವಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ಎಸಗಿರುವಲ್ಲಿ ಅಂಥ ಲೈಸನ್ಸು ಅಥವಾ ರಹದಾರಿಯನ್ನು ಹೊಂದಿರುವವನು ಸಹ ಅಂಥ ಅಪರಾಧ ಎಸಗುವುದನ್ನು ತಡೆಯಲು ಎಲ್ಲಾ ಯುಕ್ತ ಮತ್ತು ಸಮಂಜಸ ಜಾಗ್ರತೆಯನ್ನು ವಹಿಸಿದ್ದನೆಂದು ರುಜುವಾತು ಪಡಿಸಿದ ಹೊರತು, ಅಂಥ ಅಪರಾಧವನ್ನು ಅವನೇ ಎಸಗಿದ್ದರೆ ಹೇಗೋ ಹಾಗೆ ಹದಿನೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ ಹೊರತು, ವಾಸ್ತವವಾಗಿ ಅಪರಾಧ ಮಾಡಿದ ವ್ಯಕ್ತಿಯಲ್ಲದೆ ಇತರ ಯಾವೊಬ್ಬ ವ್ಯಕ್ತಿಯು ಕಾರಾವಾಸ ಶಿಕ್ಷೆಯಿಂದ ದಂಡನೀಯನಾಗತಕ್ಕದ್ದಲ್ಲ.

**82ಬಿ. ಕಂಪನಿಗಳಿಂದ ಅಪರಾಧಗಳು, ಇತ್ಯಾದಿ.-** (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಎಸಗಿರುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವನ್ನು ಎಸಗಿದ ಸಮಯದಲ್ಲಿ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಕಂಪನಿಯು ಆ ಪ್ರಕಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆದಿತ್ತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದನೆಂದು, ಅಂಥ ವ್ಯಕ್ತಿಯು ರುಜುವಾತು ಪಡಿಸಿದರೆ ಈ ಉಪ-ಪ್ರಕರಣದಲ್ಲಿರುವುದಾವುದೂ, ಅವನನ್ನು ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಪ್ರಕರಣದಡಿಯ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅಪರಾಧವು ಅವರ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ರುಜುವಾತಾದರೆ, ಅಂಥ ನಿರ್ದೇಶಕ.

ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ಬಗ್ಗೆ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ಆ ಪ್ರಕಾರವಾಗಿ ಅದನ್ನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ :** ಈ ಪ್ರಕರಣದ ಉದ್ದೇಶಗಳಿಗಾಗಿ, -

(ಎ)'ಕಂಪನಿ' ಎಂದರೆ, ಯಾವುದೇ ಗಮಿತ ನಿಕಾಯ ಮತ್ತು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.][1]

1. 82ಎ ಮತ್ತು 82ಬಿ ಪ್ರಕರಣಗಳನ್ನು 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ X
## ಗಂಧದ ಮರಕ್ಕೆ ಸಂಬಂಧಿಸಿದ ಉಪಬಂಧಗಳು

[1][**83. ಗಂಧದ ಮರಗಳಿಗೆ ಹಕ್ಕುಳ್ಳ ಕೆಲವು ವ್ಯಕ್ತಿಗಳ ಹಕ್ಕುಗಳು.-** (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ಸನ್ನದುಗಳ, ಮಂಜೂರಾತಿಗಳ, ನಿಬಂಧನೆಗಳ ಅಡಿಯಲ್ಲಿ ಅಥವಾ ನ್ಯಾಯಿಕ ತೀರ್ಮಾನದ ಅಡಿಯಲ್ಲಿ ಅಥವಾ ಅನ್ಯಥಾ ತಮ್ಮ ಭೂಮಿಗಳಲ್ಲಿನ ಗಂಧದ ಮರಗಳ ಬಗ್ಗೆ ನ್ಯಾಯಸಮ್ಮತವಾದ ಹಕ್ಕುಳ್ಳ ಎಲ್ಲಾ ವ್ಯಕ್ತಿಗಳು ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಮೇರೆಗಲ್ಲದೆ ಅಂಥ ಗಂಧದ ಮರವನ್ನು ಕಡವತಕ್ಕದ್ದಲ್ಲ ಅಥವಾ ಮಾರತಕ್ಕದ್ದಲ್ಲ ಅಂಥ ಮರದಿಂದ ದೊರತ ಶ್ರೀಗಂಧವನ್ನು ಪರಿವರ್ತಿಸತಕ್ಕದ್ದಲ್ಲ ಅಥವಾ ನಯಗೊಳಿಸತಕ್ಕದ್ದಲ್ಲ ಅಥವಾ ಹಾಗೆ ದೊರೆತ ಶ್ರೀಗಂಧವನ್ನು ಹೊಂದಿರತಕ್ಕದ್ದಲ್ಲ, ದಾಸ್ತಾನು ಮಾಡತಕ್ಕದ್ದಲ್ಲ, ಸಾಗಣಿಕೆ ಮಾಡತಕ್ಕದ್ದಲ್ಲ ಅಥವಾ ಮಾರಾಟ ಮಾಡತಕ್ಕದ್ದಲ್ಲ.

(2) ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ 2001ರ ಪ್ರಾರಂಭದಂದು ಅಥವಾ ತದನಂತರ ಭೂಮಿಯ ಅಧಿಭೋಗದಾರನಾದ ಅಥವಾ ಹಿಡುವಳಿದಾರನಾದ ಪ್ರತಿಯೊಬ್ಬನು, ಯಾವುದೇ ಮಂಜೂರಾತಿ, ಗುತ್ತಿಗೆ, ಕರಾರು ಅಥವಾ ಇತರ ಲಿಖಿತದಲ್ಲಿ ಯಾವುದೇ ಗಂಧದ ಮರವನ್ನು ರಾಜ್ಯ ಸರ್ಕಾರದ ಸ್ವತ್ತು ಎಂದು ಘೋಷಿಸಿದ ಹೊರತು ತನ್ನ ಭೂಮಿಯಲ್ಲಿಯ ಅಂಥ ಗಂಧದ ಮರದ ಸಂಬಂಧದಲ್ಲಿ ಕಾನೂನುಬದ್ಧವಾಗಿ ಹಕ್ಕುಳ್ಳವನಾಗಿರತಕ್ಕದ್ದು. ಆದರೆ, ಅಂಥ ಅಧಿಭೋಗದಾರ ಅಥವಾ ಹಿಡುವಳಿದಾರನು ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಮೇರೆಗಲ್ಲದೆ ಅಂಥ

ಗಂಧದ ಮರವನ್ನು ಕಡಿಯತಕ್ಕದ್ದಲ್ಲ ಅಥವಾ ಮಾರತಕ್ಕದ್ದಲ್ಲ ಅಂಥ ಮರದಿಂದ ದೊರೆತ ಶ್ರೀಗಂಧವನ್ನು ಪರಿವರ್ತಿಸತಕ್ಕದ್ದಲ್ಲ ಅಥವಾ ನಯಗೊಳಿಸತಕ್ಕದ್ದಲ್ಲ ಅಥವಾ ಹಾಗೆ ದೊರೆತ ಶ್ರೀಗಂಧವನ್ನು ಹೊಂದಿರತಕ್ಕದ್ದಲ್ಲ, ದಾಸ್ತಾನು ಮಾಡತಕ್ಕದ್ದಲ್ಲ, ಸಾಗಣಿಕೆ ಮಾಡತಕ್ಕದ್ದಲ್ಲ ಅಥವಾ ಮಾರಾಟ ಮಾಡತಕ್ಕದ್ದಲ್ಲ.][1]

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][[1][**84. ಗಂಧದ ಮರದ ಕುರಿತು ಪೂರ್ವಭಾವನೆ**.- ಈ ಅಧಿನಿಯಮದ ಅಡಿಯಲ್ಲಿ ಅಥವಾ ಈ ಅಧಿನಿಯಮದ ಅಥವಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಮಾಡಿದ ಯಾವುದೇ ಕೃತ್ಯದ ಪರಿಣಾಮವಾಗಿ ಕೈಗೊಂಡ ಯಾವುದೇ ವ್ಯವಹರಣೆಗಳಲ್ಲಿ, ಯಾವುದೇ ಗಂಧದ ಮರವು ರಾಜ್ಯ ಸರ್ಕಾರದ ಸ್ವತ್ತೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದಲ್ಲಿ, ಇದಕ್ಕೆ ವಿರುದ್ಧವಾದುದು ರುಜುವಾತಾಗುವವರೆಗೆ, ಅದು ರಾಜ್ಯ ಸರ್ಕಾರದ ಸ್ವತ್ತು ಎಂದು ಪೂರ್ವಭಾವನೆ ಮಾಡತಕ್ಕದ್ದು ಮತ್ತು ಯಾವುದೇ ಪ್ರಾಸಿಕ್ಯೂಷನ್ನಿನ ಸಂಬಂಧದಲ್ಲಿ ಅದಕ್ಕೆ ವಿರುದ್ಧವಾದುದನ್ನು ರುಜುವಾತು ಪಡಿಸುವ ಹೊಣೆಯು ಆಪಾದಿತನ ಮೇಲೆ ಇರತಕ್ಕದ್ದು.][1]][2]

1. 1981ರ ಅಧಿನಿಯಮ 1ರ ಮೂಲಕ 23.02.1981ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ, ಬಿಟ್ಟುಬಿಡಲಾಗಿದೆ ಮತ್ತು ಸೇರಿಸಲಾಗಿದೆ.
2. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1]**[85 ಗಂಧದ ಮರಗಳು ಇತ್ಯಾದಿಗಳನ್ನು ಕಾಪಾಡುವುದು ಭೂಮಿಯ ಅಧಿಭೋಗದಾರರ ಮತ್ತು ಹಿಡುವಳಿದಾರರ ಜವಾಬ್ದಾರಿಯಾಗಿರತಕ್ಕದ್ದು.-** 83ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಭೂಮಿಯ ಪ್ರತಿಯೊಬ್ಬ ಅಧಿಭೋಗದಾರನು ಅಥವಾ ಹಿಡುವಳಿದಾರನು ಅಥವಾ ಇತರ ಯಾರೇ ವ್ಯಕ್ತಿಯು ತನ್ನ ಭೂಮಿಯಲ್ಲಿ ಬೆಳೆಯುತ್ತಿರುವ ಎಲ್ಲಾ ಗಂಧದ ಮರಗಳನ್ನು ಕಾಪಾಡತಕ್ಕದ್ದು ಮತ್ತು ಅದು ಕಳುವಾದಲ್ಲಿ ಕೂಡಲೇ ಅತಿ ಸಮೀಪದ ಅರಣ್ಯಾಧಿಕಾರಿಗೆ ಅಥವಾ ಪೊಲೀಸು ಅಧಿಕಾರಿಗೆ ವರದಿ ಮಾಡತಕ್ಕದ್ದು.][1]

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**86. ಗಂಧದ ಮರಕ್ಕೆ ಸಂಬಂಧಿಸಿದ ಅಪರಾಧಕ್ಕೆ ದಂಡನೆ.-** ಸರ್ಕಾರಕ್ಕೆ ಸೇರಿದ ಅಥವಾ [1][83ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಒಬ್ಬ ಅಧಿಭೋಗದಾರ ಅಥವಾ ಭೂಹಿಡುವಳಿದಾರ ಅಥವಾ ಅವರ ವ್ಯಕ್ತಿಗೆ][1] ಸೇರಿದ ಗಂಧದ ಮರ ಅಥವಾ ಗಂಧದ ಮರದ ಯಾವುದೇ ಭಾಗವನ್ನು ಕಡಿಯುವುದಕ್ಕೆ ಬೇರು ಸಮೇತ ಕಿತ್ತು ಹಾಕುವುದಕ್ಕೆ. ತೆಗೆದು ಹಾಕುವುದಕ್ಕೆ ಅಥವಾ ಹಾನಿಯುಂಟು ಮಾಡುವುದಕ್ಕೆ ಸಂಬಂಧಿಸಿ ಯಾವುದೇ ಅರಣ್ಯ

ಅಪರಾಧದ ಸಂಬಂಧದಲ್ಲಿ ಅಪರಾಧಿಯು, ಅಪರಾಧ ನಿರ್ಣಯವಾದ ಮೇಲೆ [2][[4][ಹತ್ತು ವರ್ಷಗಳ][4]][2] ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು [2][ಒಂದು ಲಕ್ಷ ರೂಪಾಯಿಗಳವರೆಗಿನ][2] [3][ಜುಲ್ಮಾನೆಯಿಂದ][3] ದಂಡಿತನಾಗತಕ್ಕದ್ದು.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1974ರ ಅಧಿನಿಯಮ 23ರ ಮೂಲಕ 16.09.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು.-

(i) ಮೊದಲ ಅಪರಾಧದ ಸಂಬಂಧದಲ್ಲಿ ಕಾರಾಸದ ಅವಧಿಯು [3][ಐದು ವರ್ಷಗಳಿಗಿಂತ][3] ಕಡಿಮೆ ಇರತಕ್ಕದ್ದಲ್ಲ ಮತ್ತು ಜುಲ್ಮಾನೆಯ ಮೊಬಲಗು [3][[2][ಐವತ್ತು ಸಾವಿರ ರೂಪಾಯಿಗಿಂತ][2]][3] ಕಡಿಮೆ ಇರತಕ್ಕದ್ದಲ್ಲ; ಮತ್ತು

(ii) ಎರಡನೆಯ ಅಥವಾ ತರುವಾಯದ ಅಪರಾಧದ ಸಂಬಂಧದಲ್ಲಿ ಕಾರಾವಾಸದ ಅವಧಿಯು [3][ಏಳು ವರ್ಷಗಳಿಗಿಂತ][3] ಕಡಿಮೆ ಇರತಕ್ಕದ್ದಲ್ಲ ಮತ್ತು ಜುಲ್ಮಾನೆಯ ಮೊಬಲಗು [3][ಎಪ್ಪತ್ತೈದು ಸಾವಿರ ರೂಪಾಯಿಗಿಂತ][3] ಕಡಿಮೆ ಇರತಕ್ಕದ್ದಲ್ಲ.][1]

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**87. ಗಂಧದ ಮರದ ಅಥವಾ ಗಂಧದೆಣ್ಣೆಯ ಮಾರಾಟ ಮತ್ತು ತಯಾರಿಕೆಯ ನಿಯಂತ್ರಣ.-** (1) ಯಾರೇ ವ್ಯಕ್ತಿಯು, ನಿಯಮಿಸಲಾದ ಶುಲ್ಕನ್ನು ಸಂದಾಯ ಮಾಡಿ ಲೈಸೆನ್ಸ್ನ ಅಡಿಯಲ್ಲಿ ಹೊರತು ಮತ್ತು ನಿಯಮಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟಂತ ಹೊರತು ಗಂಧದ ಮರವನ್ನು ಸ್ವಾಧೀನ ಹೊಂದಿರತಕ್ಕದ್ದಲ್ಲ, ದಾಸ್ತಾನಿಡತಕ್ಕದ್ದಲ್ಲ ಅಥವಾ ಮಾರಾಟ ಮಾಡತಕದಲ್ಲ ಅಥವಾ ದಾಸ್ತಾನಿಡಲು ಅಥವಾ ಮಾರಾಟ ಮಾಡಲು ಪ್ರಯತ್ನಿಸತಕ್ಕದ್ದಲ್ಲ ಅಥವಾ ಗಂಧದ ಮರವನ್ನು ಗಿರಣಿಗಳಲ್ಲಿ ಅಥವಾ ಬೇರೆ ಸಾಧನದಿಂದ ಪುಡಿ ಮಾಡತಕ್ಕದ್ದಲ್ಲ ಅಥವಾ ಪುಡಿ ಮಾಡಲು ಪ್ರಯತ್ನಿಸತಕ್ಕದ್ದಲ್ಲ, ಗಂಧದ ಮರದಿಂದ ಎಣ್ಣೆಯನ್ನು ತಯಾರಿಸತಕ್ಕದ್ದಲ್ಲ ಅಥವಾ ಬಟ್ಟಿ ಇಳಿಸಲು ಪ್ರಯತ್ನಿಸತಕ್ಕದ್ದಲ್ಲ ಅಥವಾ ಗಂಧದ ಮರದಿಂದ ಪಡೆದ ಎಣ್ಣೆಯನ್ನು ಪುನಃ ಬಟ್ಟಿ ಇಳಿಸತಕ್ಕದ್ದಲ್ಲ, [1][ಶುದ್ಧಗೊಳಿಸತಕ್ಕದ್ದಲ್ಲ, ಸ್ವಾಧೀನ ಹೊಂದಿರತಕ್ಕದ್ದಲ್ಲ ಅಥವಾ ಮಾರಾಟ ಮಾಡತಕ್ಕದ್ದಲ್ಲ ಅಥವಾ ಶುದ್ಧೀಕರಿಸಲು ದಾಸ್ತಾನು ಮಾಡಲು ಅಥವಾ ವ್ಯಾಪಾರ ಮಾಡಲು][1] ಪ್ರಯತ್ನಿಸತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಲೈಸನ್ನು ಕೊಡುವುದನ್ನು ರಾಜ್ಯದ ಯಾವುದಾದರೂ ಪ್ರದೇಶದಲ್ಲಿ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಬಟ್ಟಿ

ಇಳಿಸುವ ಉದ್ಯಮವನ್ನು ವಾಸ್ತವವಾಗಿ ನಡೆಸುತ್ತಿರುವ ವ್ಯಕ್ತಿಗಳಿಂದ ಗಂಧದ ಮರದಿಂದ ಎಣ್ಣೆ ಬಟ್ಟಿ ಇಳಿಸಲ್ಪಡುವುದು ಮತ್ತು ಬಟ್ಟಿ ಇಳಿಸುವ ಉದ್ದೇಶಗಳಿಗಾಗಿ ಗಂಧದ ಮರವನ್ನು ವಶದಲ್ಲಿಟ್ಟುಕೊಳ್ಳುವುದು ಮತ್ತು ದಾಸ್ತಾನು ಮಾಡುವುದು, ಹಾಗೆ ಬಟ್ಟಿ ಇಳಿಸಲಾದ ಗಂಧದೆಣ್ಣೆಯ ಮಾರಾಟ ಇವುಗಳ ಬಗ್ಗೆ ನಿರಾಕರಿಸತಕ್ಕದ್ದಲ್ಲ:

ಮತ್ತು ಪರಂತು, ವಾಸ್ತವವಾಗಿ ಗೃಹಬಳಕೆಗಾಗಿ [1][ಮೂರು ಕಿಲೋಗ್ರಾಂವರೆಗೆ ಮತ್ತು ಒಂದು ನೂರು ಗ್ರಾಂಗಳಷ್ಟು ಗಂಧದೆಣ್ಣೆಯನ್ನು][1] ವಶದಲ್ಲಿಟ್ಟುಕೊಳ್ಳಲು ಅಂಥ ಯಾವುದೇ ಲೈಸನ್ನು ಅವಶ್ಯಕವಾಗಿರತಕ್ಕದ್ದಲ್ಲ:

[2][ಅಲ್ಲದೇ ಪರಂತು, ಶ್ರೀಗಂಧವನ್ನು ಹೊಂದಲು, ದಾಸ್ತಾನು ಮಾಡಲು ಅಥವಾ ಮಾರಾಟ ಮಾಡಲು ಅಥವಾ ದಾಸ್ತಾನು ಮಾಡಲು ಅಥವಾ ಮಾರಾಟ ಮಾಡಲು ಪ್ರಯತ್ನಿಸಲು ಲೈಸನ್ನು ಪಡೆದುಕೊಳ್ಳುವುದಕ್ಕೆ ಸಂಬಂಧ ಪಡುವಷ್ಟರ ಮಟ್ಟಿಗೆ ಈ ಉಪ-ಪ್ರಕರಣದಲ್ಲಿರುವುದಾವುದೂ, 83ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿ ಅಥವಾ ಅಧಿಭೋಗದಾರ ಅಥವಾ ಭೂ ಹಿಡುವಳಿದಾರನಿಗೆ ಅಂಥ ವ್ಯಕ್ತಿ ಅಥವಾ ಅಧಿಭೋಗದಾರನು ಅಥವಾ ಭೂಮಿಯ ಹಿಡುವಳಿದಾರನು ತನ್ನ ಭೂಮಿಯಲ್ಲಿ ಬೆಳೆದ ಗಂಧದ ಮರದಿಂದ ಪಡೆದುಕೊಂಡ ಶ್ರೀಗಂಧಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ.][2]

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವವರು, ಅಪರಾಧ ನಿರ್ಣೀತರಾದ ಮೇಲೆ, [3][[2][ಹತ್ತು ವರ್ಷಗಳಿಗೆ]][2]][3] ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ [3][[2][ಒಂದು ಲಕ್ಷ ರೂಪಾಯಿಗಳವರೆಗೆ]][2]][3] ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿರಾಗತಕ್ಕದ್ದು:

ಪರಂತು,

(i) ಮೊದಲ ಅಪರಾಧದ ಸಂಬಂಧದಲ್ಲಿ ಕಾರಾವಾಸದ ಅವಧಿಯು [3][ಐದು ವರ್ಷಗಳಿಗಿಂತ][3] ಕಡಿಮೆ ಇರತಕ್ಕದ್ದಲ್ಲ ಮತ್ತು ಜುಲ್ಮಾನೆಯ ಮೊಬಲಗು [3][ಐವತ್ತು ಸಾವಿರ ರೂಪಾಯಿಗಿಂತ][3] ಕಡಿಮೆ ಇರತಕ್ಕದ್ದಲ್ಲ; ಮತ್ತು

(ii) ಎರಡನೆಯ ಅಥವಾ ತರುವಾಯದ ಅಪರಾಧದ ಸಂಬಂಧದಲ್ಲಿ ಕಾರಾವಾಸದ ಅವಧಿಯು [3][[2][ಏಳು ವರ್ಷಗಳಿಗಿಂತ]][2]][3] ಕಡಿಮೆ ಇರತಕ್ಕದ್ದಲ್ಲ ಮತ್ತು ಜುಲ್ಮಾನೆಯ ಮೊಬಲಗು [3][[2][ಎಪ್ಪತ್ತೈದು ಸಾವಿರ ರೂಪಾಯಿಗಿಂತ]][2]][3] ಕಡಿಮೆ ಇರತಕ್ಕದ್ದಲ್ಲ.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ 12ರ ಮೂಲಕ 11.05.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ XI
## ಕಾಚುವಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು

**88. ಪರಿಭಾಷೆಗಳು**.- ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಭೂಮಿ" ಎಂದರೆ, ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿ ಅಥವಾ ಖಾಸಗಿ ಭೂಮಿ;

(ಬಿ) "ನಿಯಮಿಸಲಾದ" ಎಂದರೆ ಈ ಅಧ್ಯಾಯದ ಅಡಿಯಲ್ಲಿ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು.

**89. ಅನುಮತಿ ಇಲ್ಲದ ಕಾಚು ಮರಗಳನ್ನು ಕೆಡವುವುದು, ಇತ್ಯಾದಿಗಳ ನಿಷೇಧ.-** ಯಾರೇ ವ್ಯಕ್ತಿಯು, ಈ ಸಂಬಂಧದಲ್ಲಿ, ಈ ಅಧ್ಯಾಯದ ಅಡಿಯಲ್ಲಿ ಅಂಥ ವ್ಯಕ್ತಿಯು ಯುಕ್ತ ರೀತಿಯಿಂದ ಪ್ರಾಧಿಕೃತವಾಗಿದ್ದ ಹೊರತು ಯಾವುದೇ ಭೂಮಿಯಲ್ಲಿ ಬೆಳೆಯುತ್ತಿರುವ, ಇರುವ ಅಥವ ಕಂಡು ಬಂದ ಯಾವುದೇ ಕಾಚು ಮರವನ್ನು ಕೆಡವತಕ್ಕದ್ದಲ್ಲ, ಸಾಗಿಸತಕ್ಕದ್ದಲ್ಲ, ಸುತ್ತುಪಟ್ಟಿ ಕೆತ್ತತಕ್ಕದ್ದಲ್ಲ, ಗುರ್ತು ಹಾಕತಕ್ಕದ್ದಲ್ಲ, ಅದರ ಕೊಂಬೆಗಳನ್ನು ಕತ್ತರಿಸತಕ್ಕದ್ದಲ್ಲ, ಕಚ್ಚು ಹಾಕತಕ್ಕದ್ದಲ್ಲ, ಬೇರು ಸಹಿತ ಉರುಳಿಸತಕ್ಕದ್ದಲ್ಲ ಅಥವಾ ಸುಡತಕ್ಕದ್ದಲ್ಲ ಅಥವಾ ಅದರ ತೊಗಟೆ ಅಥವಾ ಎಲೆಗಳನ್ನು ಕಿತ್ತು ಹಾಕತಕ್ಕದ್ದಲ್ಲ ಅಥವಾ ಬೇರೆ ರೀತಿಯಿಂದ ಹಾನಿ ಉಂಟು ಮಾಡತಕ್ಕದ್ದಲ್ಲ ಅಥವಾ ಕಾಚನ್ನು ತಯಾರಿಸತಕ್ಕದ್ದಲ್ಲ.

**90. ಅರಣ್ಯ ಅಥವಾ ಕಂದಾಯ ಇಲಾಖೆಯಿಂದ ಅಥವಾ ಯಾರೇ ವ್ಯಕ್ತಿಯಿಂದ ಕಾಡು ಮರಗಳ ಕೆಡವುವಿಕೆ, ಪರಿವರ್ತಿಸುವಿಕೆ ಅಥವಾ ಸಾಗಿಸುವಿಕೆ.-** ಈ ಮುಂದಿನವರ ಹೊರತು, ಎಂದರೆ :-

(1) ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ರಾಜ್ಯ ಸರ್ಕಾರದಿಂದ ಪ್ರಾಧಿಕೃತರಾದ ರಾಜ್ಯ ಸರ್ಕಾರದ ಅರಣ್ಯ ಅಥವಾ ಕಂದಾಯ ಇಲಾಖೆಗಳ ಅಧಿಕಾರಿಗಳ; ಅಥವಾ

(2) [1][ಉಪ ಅರಣ್ಯ ಸಂರಕ್ಷಣಾಧಿಕಾರಿಯಿಂದ][1] ಮಂಜೂರಾದ ರಹದಾರಿ ಪಡೆದ ಯಾರೇ ವ್ಯಕ್ತಿಗಳ ಹೊರತು, [2][xxx][2]

- ಯಾವ ವ್ಯಕ್ತಿಯೂ ಕಾಚು ಮರಗಳು ಮತ್ತು ಚೌಬೀನೆಗಳನ್ನು ಕೆಡವತಕ್ಕದ್ದಲ್ಲ. ಪರಿವರ್ತಿಸತಕ್ಕದ್ದಲ್ಲ ಅಥವಾ ಸಾಗಿಸತಕ್ಕದ್ದಲ್ಲ ಅಥವಾ ಕಾಚು ತಯಾರಿಸತಕ್ಕದ್ದಲ್ಲ.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1981ರ ಅಧಿನಿಯಮ 1ರ ಮೂಲಕ 23.02.1989 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**91. ಕಾಚು ಮರಗಳನ್ನು ಕೆಡವಲು ರಹದಾರಿಗಾಗಿ ಅರ್ಜಿ ಸಲ್ಲಿಸುವುದು.-** (1) ಹಿಡುವಳಿಗಾರನಾಗಿ, ಅಧಿಭೋಗರಾಗಿ, ಗೇಣಿದಾರನಾಗಿ, ಉಪ-ಗೇಣಿದಾರನಾಗಿ ಅಥವಾ ಗುತ್ತಿಗೆದಾರನಾಗಿ ಅಥವಾ ಯಾವುದೇ ಬೇರೆ ಸಾಮರ್ಥ್ಯದಿಂದ ಯಾವುದೇ ಭೂಮಿಯಲ್ಲಿ ಬೆಳೆಯುತ್ತಿರುವ ಅಥವಾ ನಿಂತಿರುವ ಅಥವಾ ಕಂಡು ಬರುವ ಕಾಚು ಮರಗಳ ಮೇಲೆ ಹಕ್ಕನ್ನು ಪಡೆದಿರುವ ಮತ್ತು ಅಂಥ ಮರಗಳನ್ನು ಕಾಚು ತಯಾರಿಕೆ, ಮಾರಾಟ ಅಥವಾ ಬೇರೆ ಉದ್ದೇಶಗಳಿಗಾಗಿ ಕೆಡವಲು ಅಪೇಕ್ಷಿಸುವ ಪ್ರತಿಯೊಬ್ಬ ವ್ಯಕ್ತಿಯೂ ನಿಯಮಿಸಲಾದ ನಮನೆಯಲ್ಲಿ [2][[1][ಅರಣ್ಯ ಉಪ-ಸಂರಕ್ಷಣಾಧಿಕಾರಿಗೆ][1]][2] ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ರಹದಾರಿಯನ್ನು ಪಡೆಯತಕ್ಕದ್ದು:

ಪರಂತು, ಅರಣ್ಯ ಇಲಾಖೆಯು ಮಾರಿದ ಕಾಚುಮರಗಳನ್ನು ಕೆಡವಲು ಮತ್ತು ಅಂಥ ಮರಗಳಿಂದ ಕಾಚನ್ನು ತಯಾರಿಸಲು ಅಂಥ ಯಾವ ರಹದಾರಿಯು ಅವಶ್ಯಕವಾಗಿರತಕ್ಕದ್ದಲ್ಲ.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪ-ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ರಹದಾರಿಯು ನಿಯಮಿಸಲಾದ ನಮೂನೆಯಲ್ಲಿರತಕ್ಕದ್ದು.

**92. ರಹದಾರಿಯನ್ನು ಪಡೆಯದೆ ಕಾಚು ಮರಗಳನ್ನು ಅಥವಾ ಚೌಬೀನೆಯನ್ನು ಸಾಗಿಸುವುದು ಇತ್ಯಾದಿಗಳ ನಿಷೇಧ.-** ಯಾರೇ ವ್ಯಕ್ತಿಯು, ಕಾಚುಮರಗಳನ್ನು, ಚೌಬೀನೆಯನ್ನು ರಹದಾರಿ ಇಲ್ಲದೆ ಸಾಗಿಸತಕ್ಕದ್ದಲ್ಲ ಅಥವಾ ಒಯ್ಯತಕ್ಕದ್ದಲ್ಲ.

**93. ರಹದಾರಿ ಇಲ್ಲದೆ ಕಾಚಿನ ಕೊಳ್ಳುವಿಕೆ ಅಥವಾ ಸಾಗಾಣಿಕೆ ನಿಷೇಧ.-** ಯಾರೇ ವ್ಯಕ್ತಿಯು, [1][ಅರಣ ಉಪ ಸಂರಕ್ಷಣಾಧಿಕಾರಿಯು][1] ಕೊಟ್ಟ ರಹದಾರಿ ಅಡಿಯಲ್ಲದೆ ಕಾಚಿನ ಯಾವುದೇ ದಾಸ್ತಾನನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಇತರ ರೀತಿಯಲ್ಲಿ ವಿಲೆ ಮಾಡತಕ್ಕದ್ದಲ್ಲ ಅಥವಾ ಅದನ್ನು ಬೇರೆ ಯಾವುದೇ ಸ್ಥಳಕ್ಕೆ ಸಾಗಿಸತಕ್ಕದ್ದಲ್ಲ ಅಥವಾ

ದಾಸ್ತಾನನ್ನು ವಿಲೆ ಮಾಡಲು [1][ಅರಣ್ಯ ಉಪಸಂರಕ್ಷಣಾಧಿಕಾರಿಯಿಂದ][1] ರಹದಾರಿ ಪಡೆದ ವ್ಯಕ್ತಿಯಲ್ಲದೆ ಇತರೆ ಯಾರೇ ವ್ಯಕ್ತಿಯು ಕಾಚಿನ ಯಾವುದೇ ದಾಸ್ತಾನನ್ನು ಕೊಳ್ಳತಕ್ಕದ್ದಲ್ಲ:

ಪರಂತು, ಸದ್ಭಾವಿಕ ಗೃಹಬಳಕೆಗಾಗಿ ಏಳು ಪೌಂಡುಗಳಷ್ಟು ಕಾಚನ್ನು ಕೊಳ್ಳುವುದಕ್ಕಾಗಿ ಮತ್ತು ಸಾಗಿಸುವುದಕ್ಕಾಗಿ ಅಂಥ ರಹದಾರಿ ಅವಶ್ಯಕವಿರುವುದಿಲ್ಲ.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**94. ನಿರ್ದಿಷ್ಟ ಸ್ಥಳಗಳಲ್ಲಿ ಕಾಚಿನ ತಯಾರಿಕೆಯನ್ನು ಮಾಡುವುದು.-** ಕಾಚಿನ ದಿಮ್ಮಿಗಳನ್ನು ಕುದಿಸುವುದನ್ನು, ಕಾಚಿನ ತಯಾರಿಕೆಯನ್ನು ಮತ್ತು ಕಾಚಿನ ತಯಾರಿಕೆಯ ಸಲುವಾಗಿರುವ ಬೇರೆ ವಿಧಾನಗಳನ್ನು [1][ಅರಣ್ಯ ಉಪ ಸಂರಕ್ಷಣಾಧಿಕಾರಿಯು][1] ನಿರ್ದಿಷ್ಟಪಡಿಸಬಹುದಾದ ಅಂಥ ಸ್ಥಳದಲ್ಲಿ ಮತ್ತು ಅಂಥ ಸಮಯದೊಳಗೆ ಮಾತ್ರ ನಡೆಸತಕ್ಕದ್ದು.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**95. ಲೆಕ್ಕಪತ್ರಗಳ ನಿರ್ವಹಣೆ.-** ಕಾಚನ್ನು ತಯಾರಿಸಲು ರಹದಾರಿ ಪಡೆದ ಅಥವಾ ಏಳು ಪೌಂಡುಗಳಿಗೆ ಮೀರಿದ ಕಾಚಿನ ಯಾವುದೇ ಸಂಗ್ರಹದ ಸ್ವಾಧೀನದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಲಾದ ನಮೂನೆಯಲ್ಲಿ ಕ್ರಮವಾದ, ನಿಜವಾದ ಮತ್ತು ಸರಿಯಾದ ಲೆಕ್ಕಗಳನ್ನು ಇಡತಕ್ಕದ್ದು ಮತ್ತು ಪ್ರತಿ ತಿಂಗಳ ಮೊದಲನೇ ದಿನಾಂಕದಂದು [1][ಅರಣ್ಯ ಉಪ ಸಂರಕ್ಷಣಾಧಿಕಾರಿಗೆ][1] ನಿಯಮಿಸಲಾದ ನಮೂನೆಯಲ್ಲಿ ಒಂದು ವಿವರಣಾ ಪಟ್ಟಿಕೆಯನ್ನು ಕಳುಹಿಸತಕ್ಕದ್ದು ಮತ್ತು ತನ್ನಲ್ಲಿರುವ ಎಲ್ಲಾ ಸಂಗ್ರಹವು ಮುಗಿಯುವವರೆಗೆ ಅಂಥ ಪಟ್ಟಿಕೆ ಕಳುಹಿಸುವುದನ್ನು ಮುಂದುವರಿಸತಕ್ಕದ್ದು.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**96. ಮುಟ್ಟುಗೋಲು ಆಗಬಹುದಾದ ಸ್ವತ್ತನ್ನು ಶೋಧಿಸುವ ಮತ್ತು ವಶಪಡಿಸಿಕೊಳ್ಳುವ ಬಗ್ಗೆ ಕಂದಾಯ, ಅರಣ್ಯ ಮತ್ತು ಪೊಲೀಸ್ ಅಧಿಕಾರಿಗಳ ಅಧಿಕಾರ.-** ರೆವೆನ್ಯೂ ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಕಂದಾಯ ಅಧಿಕಾರಿಯು ಅಥವಾ ಅರಣ್ಯ ರಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಅರಣ್ಯ ಅಧಿಕಾರಿಯು ಅಥವಾ ಹೆಡ್ ಕಾನ್ಸ್‌ಟೇಬಲ್ಲನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ, ಯಾವುದೇ ಭೂಮಿಯನ್ನು ಪ್ರವೇಶಿಸಬಹುದು ಮತ್ತು ಯುಕ್ತ ಸಮಯದಲ್ಲಿ ಕಾಚಿನ ಸಂಗ್ರಹವನ್ನು ಕೆಡವಿದ ಕಾಚಿನ ಮರಗಳನ್ನು, ಕಾಚು ಕುದಿಸುವುದನ್ನು ಇಡಲಾದ ಲೆಕ್ಕಗಳನ್ನು

ಪರಿಶೀಲಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಯಾವುದರ ಸಂಬಂಧದಲ್ಲಿ ಈ ಅಧ್ಯಾಯದ ಯಾವುದೇ ಉಪಬಂಧಗಳು ಉಲ್ಲಂಘಿಸಲ್ಪಟ್ಟಿದೆಯೆಂದು ನಂಬಲು ತನಗೆ ಕಾರಣವಿರುವುದೋ ಅಂಥ ಯಾವುದೇ ಆವರಣವನ್ನು ಪ್ರವೇಶಿಸಬಹುದು ಅಥವಾ ಅಂಥ ಯಾವುದೇ ಪ್ರಾಣಿಯನ್ನು, ವಾಹನವನ್ನು, ದೋಣಿಯನ್ನು ಅಥವಾ ಇತರ ಸಂಚಾರ ಸಾಧನವನ್ನು ನಿಲ್ಲಿಸಬಹುದು ಮತ್ತು ಅದನ್ನು ಶೋಧನೆ ಮಾಡಬಹುದು ಮತ್ತು ಅಂಥ ಕಾಚಿನ ಮರಗಳ ಸಂಗ್ರಹವನ್ನು ಮತ್ತು ಕಾಚನ್ನು ಅದರ ಮೂಟೆಗಳ, ಹೊದಿಕೆಗಳ ಮತ್ತು ಪೆಟ್ಟಿಗೆಗಳ ಸಹಿತವಾಗಿ ವಶಪಡಿಸಿಕೊಳ್ಳಬಹುದು ಮತ್ತು ಅಂಥ ಪ್ರಾಣಿ, ವಾಹನ, ನಾವೆ ಅಥವಾ ಇತರ ಸಂಚಾರ ಸಾಧನಕ್ಕೆ ಸಂಬಂಧಿಸಿ, ತತ್ಕಾಲದಲ್ಲಿ ಜಾರಿಯಲ್ಲಿರುವಂತೆ ಪ್ರಭಾರವನ್ನು ಹೊಂದಿರಬಹುದಾದ ಚಾಲಕನು ಮತ್ತು ಇತರ ವ್ಯಕ್ತಿ ಅಥವಾ ವ್ಯಕ್ತಿಗಳು ಅಂಥ ಪ್ರಾಣಿಯನ್ನು, ವಾಹನವನ್ನು ಅಥವಾ ಇತರ ಸಂಚಾರ ಸಾಧನವನ್ನು ಸದರಿ ಅಧಿಕಾರಿಯು ಕೇಳಿದಾಗ ನಿಲ್ಲಿಸತಕ್ಕದ್ದು ಅಥವಾ ನಿಲ್ಲಿಸುವಂತೆ ಮಾಡತಕ್ಕದ್ದು ಮತ್ತು ಅಂಥ ಶೋಧನೆಯ ಅಥವಾ ಹಾಗೆ ವಶಪಡಿಸಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಎಲ್ಲಾ ನೆರವನ್ನು ಒದಗಿಸತಕ್ಕದ್ದು:

ಪರಂತು, ಪ್ರವೇಶದ ಮತ್ತು ಶೋಧನೆಯ ಅಧಿಕಾರವನ್ನು ಚಲಾಯಿಸುವಾಗ ಅಂಥ ಅಧಿಕಾರಿಯು ಸದರಿ ಆವರಣದ ಅಥವಾ ವಾಹನದ, ನಾವೆಯ ಅಥವಾ ಇತರ ಸಂಚಾರ ಸಾಧನದ ಅಧಿಭೋಗದಾರರ ಸಾಮಾಜಿಕ ಮತ್ತು ಮತೀಯ ಸಂಪ್ರದಾಯಗಳ ಕಡೆಗೆ ಯುಕ್ತ ಗಮನವನ್ನು ಹರಿಸತಕ್ಕದ್ದು.

ಮತ್ತು ಪರಂತು, ಅಂಥ ಯಾವುದೇ ಆವರಣವು ಬೀಗ ಹಾಕಲ್ಪಟ್ಟಿದ್ದರೆ, ಮತ್ತು ಮಾಲೀಕನಿಂದ ಅಥವಾ ಅಧಿಭೋಗದಾರದಿಂದ ಅಥವಾ ಅವನ ಪರವಾಗಿ ಇತರರಿಂದ ವಾಸಿಸಲ್ಪಡದಿದ್ದರೆ ಅಥವಾ ನೋಡಿಕೊಳ್ಳಲ್ಪಡದಿದ್ದರೆ, ಇಬ್ಬರು ಗಣ್ಯ ಸಾಕ್ಷಿದಾರರ ಸಮಕ್ಷಮದಲ್ಲಿ ಮೇಲೆ ಹೇಳಿದ ಯಾವುದೇ ಅಥವಾ ಎಲ್ಲಾ ಉದ್ದೇಶಗಳಿಗಾಗಿ ಅದನ್ನು ಬೀಗ ಒಡೆದು ಪ್ರವೇಶಿಸಬಹುದು.

**97. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಈ ಪ್ರಕರಣದ ಅಡಿಯಲ್ಲಿ ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಬಹುದು, ಎಂದರೆ,

(ಎ) ಅರ್ಜಿಯ ಮತ್ತು ರಹದಾರಿಯ ನಮೂನೆಗಳು ಮತ್ತು ಅವುಗಳ ಸರಬರಾಜು,

(ಬಿ) ಕಾಚಿನ ವಿವರಗಳನ್ನು ಅಥವಾ ಚೌಬೀನೆಯನ್ನು ಸಾಗಿಸಲು ಬೇಕಾದ ಅನುಮತಿ ಪತ್ರದ ನಮೂನೆ;

(ಸಿ) ಅರ್ಜಿಯ ಮತ್ತು ರಹದಾರಿಯ ನಮೂನೆಗಳು ಮುದ್ರಣವಾಗಬೇಕಾದ ಭಾಷೆಗಳು;

(ಡಿ) ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕ ನಮೂನೆ.

**98. ದಂಡನೆ**.- 89, 90, 91, 92, 93, 94 ಅಥವಾ 95ನೇ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

## *1[ಅಧ್ಯಾಯ XIಎ
## ಅರಣ್ಯ ಅಭಿವೃದ್ಧಿ 2[ಶುಲ್ಕ]2

2. 2016ರ ಅಧಿನಿಯಮ 23ರ ಮೂಲಕ 16.08.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**98ಎ. ಅರಣ್ಯ ಅಭಿವೃದ್ಧಿ 8[ಶುಲ್ಕವನ್ನು]8 ವಿಧಿಸುವುದು.-** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರ ಅಥವಾ ಅದರ ಒಡೆತನ ಅಥವಾ 8[ರಾಜ್ಯ ಸರ್ಕಾರದ ನಿಯಂತ್ರಣದಲ್ಲಿನ]8 2[ಒಂದು ನಿಗಮವು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಒಂದು ನಿಕಾಯವು]2 ಮಾರಾಟದ ಮೂಲಕ ಅಥವಾ ಅನ್ಯಥಾ ವಿಲೆ ಮಾಡಿದ ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ, ಆ ಬಗ್ಗೆ ಸಂದಾಯ ಮಾಡಿದ ಪ್ರತಿಫಲ ಧನದ ಮೊಬಲಗಿನ ಮೇಲೆ ಶೇಕಡಾ 6[3[ಹನ್ನೆರಡರ]3]6 ದರದಂತೆ 8[ಶುಲ್ಕವು]8 ವಿಧಿಸಲ್ಪಡತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯವಾಗತಕ್ಕದ್ದು.

7[4[ಪರಂತು xxx]4]7

9[5[ಪರಂತು xxx]5]9

10[ಮತ್ತೂ ಪರಂತು, ಅರಣ್ಯ ಉತ್ಪನ್ನವಾಗಿರುವ ಖನಿಜಗಳಿಗೆ ಸಂಬಂಧಪಟ್ಟಂತೆ ಅರಣ್ಯ ಅಭಿವೃದ್ಧಿ ಶುಲ್ಕದ ದರವು ಶೇಕಡ ಹನ್ನೆರಡು ಆಗಿರತಕ್ಕದ್ದು.]10

*1. ಅಧ್ಯಾಯ XIಎ ಅನ್ನು 1976ರ ಅಧಿನಿಯಮ 15ರ ಮೂಲಕ 24.12.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1989ರ ಅಧಿನಿಯಮ 10ರ ಮೂಲಕ 14.02.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 1980ರ ಅಧಿನಿಯಮ 14ರ ಮೂಲಕ 17.04.1980 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 1983ರ ಅಧಿನಿಯಮ 7ರ ಮೂಲಕ 01.04.1983 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

5. 1989ರ ಅಧಿನಿಯಮ 10ರ ಮೂಲಕ 01.10.1983 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

6. 2015ರ ಅಧಿನಿಯಮ 41ರ ಮೂಲಕ 23.12.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
7. 2015ರ ಅಧಿನಿಯಮ 41ರ ಮೂಲಕ 23.12.2015 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
8. 2016ರ ಅಧಿನಿಯಮ 23ರ ಮೂಲಕ 16.08.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
9. 2016ರ ಅಧಿನಿಯಮ 23ರ ಮೂಲಕ 23.12.2015 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
10. 2016ರ ಅಧಿನಿಯಮ 23ರ ಮೂಲಕ 16.08.2016 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**ವಿವರಣೆ**: (1) ಸಂದೇಹಗಳ ನಿವಾರಣೆಗಾಗಿ, ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ರಾಜ್ಯ ಸರ್ಕಾರವು ಅಧಿಸೂಚಿಸಿದ ಒಂದು ನಿಕಾಯವು" ಎಂಬ ಪದಗಳಿಗೆ, ಹಿಂದು ಅವಿಭಕ್ತ ಕುಟುಂಬ, ಕಂಪನಿ ಅಥವಾ ವಿದೇಶಿ ಕಂಪನಿ, ಪಾಲುದಾರಿಕೆ ಸಂಸ್ಥೆಗಳು, ಸಂಘಗಳು, ಸಹಕಾರಿ ಸಂಘಗಳು, ಇತರ ನಿಗಮಿತ ನಿಕಾಯಗಳು, ನ್ಯಾಸಗಳು ಅರಣ್ಯ ಪ್ರದೇಶದಲ್ಲಿ ಇರುವ ಗಣಿಗಳು ಮತ್ತು ಕ್ವಾರಿಗಳ ಗುತ್ತಿಗೆದಾರರು ಅಥವಾ ಯಾವುದೇ ಇತರ ಸಂಘ ಅಥವಾ ಸಮಿತಿ ಅಥವಾ ವ್ಯಕ್ತಿಯನ್ನು ಒಳಗೊಂಡು, ಅಂಥ ವ್ಯಕ್ತಿಗಳು ಅಥವಾ ಉದ್ಯಮಗಳು ಸ್ವತಃ ನ್ಯಾಯಿಕ ಉದ್ಯಮವಾಗಿ (juristic entity) ರಚನೆಗೊಂಡಿರಲಿ ಅಥವಾ ರಚನೆಗೊಳ್ಳದಿರಲಿ, ಮತ್ತು ಅಂಥ ವ್ಯಕ್ತಿಗಳು ಅಥವಾ ಉದ್ಯಮಗಳು ಒಟ್ಟಿಗೆ ಸೇರಿಕೊಂಡು ಒಂದು ಗುಂಪಾಗಿ ಅಥವಾ ನಿಕಾಯವಾಗಿ ಕಾರ್ಯನಿರ್ವಹಿಸಲಿ ಅಥವಾ ನಿರ್ವಹಿಸದಿರಲಿ, ವ್ಯಕ್ತಿಗಳಾಗಿ ಅಥವಾ ಇತರ ಸಂಸ್ಥೆಗಳಾಗಿ, ಅರಣ್ಯದಲ್ಲಿ ಕಂಡುಬಂದ ಅಥವಾ ಅರಣ್ಯದಿಂದ ತಂದ ಅರಣ್ಯ ಉತ್ಪನ್ನದ ವಿಲೇವಾರಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಡಗಿರುವ ಎಲ್ಲಾ ಉದ್ಯಮಗಳು ಎಂದು ಅರ್ಥ ಮತ್ತು ಅವುಗಳನ್ನು ಒಳಗೊಳ್ಳತಕ್ಕದ್ದು ಎಂದು ಈ ಮೂಲಕ ಘೋಷಿಸಲಾಗಿದೆ.

**ವಿವರಣೆ:** (2) ಸಂದೇಹಗಳ ನಿವಾರಣೆಗಾಗಿ, ಈ ಉಪಪ್ರಕರಣದ ಉದ್ದೇಶಕ್ಕಾಗಿ, "ಅಥವಾ ಅನ್ಯಥಾ" ಎಂಬ ಪದಗಳು ಸ್ವಯಂ ಬಳಕೆ (captive consumption) ಮುಖಾಂತರ ವಿಲೇ ಮಾಡುವುದನ್ನು ಒಳಗೊಳ್ಳುತ್ತದೆ ಎಂದು ಈ ಮೂಲಕ ಘೋಷಿಸಲಾಗಿದೆ.

**ವಿವರಣೆ:** (3) ಸಂದೇಹಗಳ ನಿವಾರಣೆಗಾಗಿ, ಅರಣ್ಯ ಉತ್ಪನ್ನದ ವಿಲೇವಾರಿಯ ಮೇಲೆ, ಅರಣ್ಯ ಉತ್ಪನ್ನವನ್ನು ಕರ್ನಾಟಕ ರಾಜ್ಯದ ಒಳಗೆ ಅಥವಾ ಹೊರಗೆ ಮಾರಾಟ ಮಾಡುವುದಕ್ಕೆ ಅಥವಾ ರಫ್ತಿನ ಉದ್ದೇಶಕ್ಕೆ ಅಥವಾ ಸ್ವಯಂ ಬಳಕೆಗೆ ಉದ್ದೇಶಿಸಿರುವುದನ್ನು ಗಣನೆಗೆ ತೆಗೆದುಕೊಳ್ಳದೆ ಅಂಥ ಅರಣ್ಯ ಉತ್ಪನ್ನದ ವಿಲೇವಾರಿ ಮೇಲೆ ಅರಣ್ಯ ಅಭಿವೃದ್ಧಿ ಶುಲ್ಕವನ್ನು ವಿಧಿಸತಕ್ಕದ್ದು ಎಂದು ಈ ಮೂಲಕ ಘೋಷಿಸಲಾಗಿದೆ.][1]

1. 2016ರ ಅಧಿನಿಯಮ 23ರ ಮೂಲಕ 16.08.2016 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(1ಎ) (1) ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, 1978ರ ಫೆಬ್ರವರಿಯ ಹದಿನಾಲ್ಕನೇ ದಿನಾಂಕದಿಂದ ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 1988ರ ಪ್ರಾರಂಭದ ಅವಧಿಯವರೆಗೆ, ಅದು ವಿಧಿಸದಿರುವ ಮತ್ತು ಸಂಗ್ರಹಿಸದಿರುವ [2][ಶುಲ್ಕ][2]ದಷ್ಟರ

ಮಟ್ಟಿಗೆ ರಾಜ್ಯ ಸರ್ಕಾರವು ಒಡೆತನ ಹೊಂದಿದ ಅಥವಾ ನಿಯಂತ್ರಣ ಹೊಂದಿದ ನಿಗಮಗಳು ರಾಜ್ಯ ಸರ್ಕಾರಕ್ಕೆ ಯಾವುದೇ [2][ಶುಲ್ಕ][2]ವನ್ನು ಸಂದಾಯ ಮಾಡತಕ್ಕದ್ದಲ್ಲ.][1]

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2016ರ ಅಧಿನಿಯಮ 23ರ ಮೂಲಕ 16.08.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(1-ಬಿ) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅರಣ್ಯ ಉತ್ಪನ್ನವನ್ನು ರಾಜ್ಯ ಸರ್ಕಾರವು ವಿಲೇವಾರಿ ಮಾಡಿದಾಗ ಹೊರತು, ಅರಣ್ಯದಲ್ಲಿ ಕಂಡುಬರದ ಅಥವಾ ಅರಣ್ಯದಿಂದ ತಂದಿರದ ಅರಣ್ಯ ಉತ್ಪನ್ನದ ಮೇಲೆ ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ;

(1-ಸಿ) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, 16ನೇ ಆಗಸ್ಟ್, 2008ರಿಂದ ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 2015ರ (2015ರ ಕರ್ನಾಟಕ ಅಧಿನಿಯಮ 41) ಪ್ರಾರಂಭದವರೆಗಿನ ಕಾಲಾವಧಿಯಲ್ಲಿ ಡಿಮಾಂಡ್ ಮಾಡದಿರುವ ಅರಣ್ಯ ಉತ್ಪನ್ನದ ಮೇಲೆ ಯಾವುದೇ ಅರಣ್ಯ ಅಭಿವೃದ್ಧಿ ಶುಲ್ಕವನ್ನು, ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದಲ್ಲ; ಮತ್ತು

(1-ಡಿ) ರಾಜ್ಯ ಸರ್ಕಾರವು ಪೂರ್ವಾನ್ವಯ ದಿನಾಂಕದಿಂದ ಅರಣ್ಯ ಅಭಿವೃದ್ಧಿ ಶುಲ್ಕ ವಿಧಿಸುವ, ಲೆಕ್ಕಹಾಕುವ ಮತ್ತು ಸಂಗ್ರಹಣೆಯ ವಿಧಾನಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬಹುದು.][1]

1. 2016ರ ಅಧಿನಿಯಮ 23ರ ಮೂಲಕ 16.08.2016 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಸದರಿ [2][ಶುಲ್ಕವನ್ನು][2] ಅಂಥ ಪ್ರತಿಫಲ ಧನದೊಂದಿಗೆ ಸಂಗ್ರಹಿಸತಕ್ಕದ್ದು.

(3) ಸದರಿ [2][ಶುಲ್ಕವು][2] ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಅಂಥ ಉತ್ಪನ್ನದ ಸಂಬಂಧದಲ್ಲಿ ಯಾವುದೇ ತೆರಿಗೆ ಸಂದಾಯಕ್ಕೆ ಹೆಚ್ಚುವರಿಯಾಗುತಕ್ಕದ್ದೇ ಹೊರತು ಬದಲಿಯಾಗಲ್ಲ.

[1][ (4) ಎಲ್ಲ [2][ಶುಲ್ಕ][2] ಬಾಕಿಗಳು ಸಂದಾಯವಾಗುವ ಅಥವಾ ವಸೂಲಾಗುವ ದಿನಾಂಕದವರೆಗೆ ವರ್ಷಕ್ಕೆ ಶೇಕಡಾ ಹದಿನೆಂಟರ ದರದಲ್ಲಿ ಬಡ್ಡಿಯನ್ನು ವಿಧಿಸಿ ಸಂಗ್ರಹಿಸತಕ್ಕದ್ದು. ][1]

1. 2009ರ ಅಧಿನಿಯಮ 24ರ ಮೂಲಕ 17.09.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2016ರ ಅಧಿನಿಯಮ 23ರ ಮೂಲಕ 16.08.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**98ಬಿ. ಅರಣ್ಯ ಅಭಿವೃದ್ಧಿ ನಿಧಿ.-** (1) ಕರ್ನಾಟಕ ರಾಜ್ಯಕ್ಕಾಗಿ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ರಚಿಸತಕ್ಕದ್ದು.

[1][(2) ಈ ಮುಂದಿನವು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯ ಭಾಗವಾಗಿರತಕ್ಕದ್ದು.

ಎಂದರೆ:-

(ಎ) 98ಎ ಪ್ರಕರಣದ ಅಡಿಯಲ್ಲಿ ವಿಧಿಸಿದ ಮತ್ತು ಸಂಗ್ರಹಿಸಿದ [2][ಶುಲ್ಕ][2] [3][ಮತ್ತು ಬಡ್ಡಿ][2];

(ಬಿ) ಅರಣ್ಯೇತರ ಉದ್ದೇಶಗಳಿಗಾಗಿ ವಹಿಸಿಕೊಟ್ಟ ಆರಣ್ಯದ ಬದಲು ಪರಿಹಾರ ರೂಪವಾಗಿ ನೆಡುತೋಪುಗಳನ್ನು ಬೆಳೆಸುವುದಕ್ಕಾಗಿ ವಸೂಲಿ ಮಾಡಿದ ಹಣ;

(ಸಿ)ಗಂಧದ ಮರದ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಸಂಗ್ರಹಿಸಿದ ಗಂಧದ ಸರ್ಚಾರ್ಜ್‌ಗಳು

(2ಎ) (2) ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಮೊಬಲಗನ್ನು ಮೊದಲು ರಾಜ್ಯದ ಸಂಚಿತನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಈ ಸಂಭಂಧದಲ್ಲಿ ಕಾನೂನಿನ ಮೂಲಕ ಯುಕ್ತವಾಗಿ ಮಾಡಿದ ವಿನಿಯೋಜನೆಯನ್ನು ಅದರಲ್ಲಿ ನಮೂದಿಸುವುದು ಮತ್ತು ಅದನ್ನು ಕರ್ನಾಟಕ ಅರಣ್ಯ ಅಭಿವೃಧ್ಧಿ ನಿಧಿಗೆ ವರ್ಗಾಯಿಸತಕ್ಕದ್ದು.][1]

1. 2 ಮತ್ತು 2ಎ ಉಪಪ್ರಕರಣಗಳನ್ನು1989ರ ಅಧಿನಿಯಮ 10ರ ಮೂಲಕ 16.03.1989ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ 24ರ ಮೂಲಕ 17.09.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2016ರ ಅಧಿನಿಯಮ 23ರ ಮೂಲಕ 16.08.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) (2) ನೇ ಉಪ-ಪ್ರಕರಣದ ಅಡಿಯಲ್ಲಿನ ಸದರಿ ವರ್ಗಾಯಿಸಿದ ಯಾವುದೇ ಮೊಬಲಗನ್ನು ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕತಕ್ಕದ್ದು.

[2][(4) ಸದರಿ ನಿಧಿಯ ಜಮೆಯಲ್ಲಿನ ಮೊಬಲಗನ್ನು ಈ ಕೆಳಕಂಡ ಒಂದು ಅಥವಾ ಹೆಚ್ಚಿನ ಉದ್ದೇಶಗಳಿಗಾಗಿ ಮಾತ್ರ ವೆಚ್ಚ ಮಾಡತಕ್ಕದ್ದು, ಎಂದರೆ:-

(ಎ) ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ನೆಡುತೋಪುಗಳನ್ನು ಬೆಳೆಸುವುದು ಮತ್ತು ಅದಕ್ಕೆ ಪೂರಕವಾದ ಅಂಥ ಇತರ ಉದ್ದೇಶಗಳಿಗೆ ಎಂದರೆ ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಕಾರ್ಯಗಳಿಗೆ;

(ಬಿ) ಅಧಿಸೂಚಿತ ಅರಣ್ಯ ಪ್ರದೇಶಗಳ ಗಡಿಗಳನ್ನು ಒಟ್ಟುಗೂಡಿಸುವುದು;

(ಸಿ) ಅರಣ್ಯಗಳನ್ನು ಒಟ್ಟುಗೂಡಿಸುವುದಕ್ಕಾಗಿ ಖಾಸಗಿ ಭೂಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು;

(ಡಿ) ಮುಂಚೂಣಿ ಸಿಬ್ಬಂದಿಗಳಿಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅರಣ್ಯ ನಿವಾಸಗಳ ರಚನೆ ಮತ್ತು ನಿರ್ವಹಣೆ;

(ಇ) ತರಬೇತಿ, ಸಾಮರ್ಥ್ಯ ವೃದ್ಧಿ, ಸಂಶೋಧನೆ ಮತ್ತು ತಂತ್ರಜ್ಞಾನ;

(ಎಫ್) ಜಂಟಿ ಅರಣ್ಯ ಯೋಜನೆಯನ್ನು ಮತ್ತು ನಿರ್ವಹಣೆಯ ಚಟುವಟಿಕೆಗಳನ್ನು ಹಾಗೂ ಗ್ರಾಮ ಅರಣ್ಯ ಸಮಿತಿಗಳು/ಪರಿಸರ ಅಭಿವೃದ್ಧಿ ಸಮಿತಿಗಳನ್ನು ಸಮರ್ಥಗೊಳಿಸುವುದು;

(ಜಿ) ಆಂತರಿಕ ಅರಣ್ಯ ಪ್ರದೇಶಗಳಿಂದ ಜನರನ್ನು ಪುನರ್ವಸತಿಗೊಳಿಸುವುದು ಮತ್ತು ಪುನರ್‌ಸ್ಥಾಪಿಸುವುದು;

(ಎಚ್) ಅರಣ್ಯ ಅಭಿವೃದ್ಧಿ ಅಥವಾ ನಿರ್ವಹಣೆ ಅಥವಾ ವನ್ಯಜೀವಿ ರಕ್ಷಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಇತರ ಚಟುವಟಿಕೆಗಳು.][2]][1*]

*1. ಅಧ್ಯಾಯ XIಎ ಅನ್ನು 1976ರ ಅಧಿನಿಯಮ 15ರ ಮೂಲಕ 24.12.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2015ರ ಅಧಿನಿಯಮ 41ರ ಮೂಲಕ 23.12.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**98ಸಿ. ಅರಣ್ಯ ಅಭಿವೃದ್ಧಿ ಶುಲ್ಕವನ್ನು ವಿನಾಯಿತಿಗೊಳಿಸಲು ಅಥವಾ ಇಳಿಸಲು ರಾಜ್ಯ ಸರ್ಕಾರಕ್ಕಿರುವ ಅಧಿಕಾರ.-** (1) ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯಕವೆಂದು ತಾನು ಅಭಿಪ್ರಾಯಪಟ್ಟರೆ, ಅಧಿಸೂಚನೆಯ ಮೂಲಕ ಹಾಗೂ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಅವಧಿಗಾಗಿ, ಯಾವುದೇ ನಿರ್ದಿಷ್ಟ ವ್ಯಕ್ತಿಗಳ ಗುಂಪು ಅಥವಾ ಯಾವುದೇ ನಿರ್ದಿಷ್ಟ ಅರಣ್ಯ ಉತ್ಪನ್ನದ ಸಂಬಂಧದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಅರಣ್ಯ ಅಭಿವೃದ್ಧಿ ಶುಲ್ಕವನ್ನು ಉತ್ತರಾನ್ವಯವಾಗಿಯಾಗಲೀ ಅಥವಾ ಪೂರ್ವಾನ್ವಯವಾಗಿಯಾಗಲೀ ವಿನಾಯಿತಿಗೊಳಿಸಬಹುದು ಅಥವಾ ಕಡಿಮೆ ಮಾಡಬಹುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿರ್ಬಂಧ ಅಥವಾ ಷರತ್ತನ್ನು ಒಬ್ಬ ವ್ಯಕ್ತಿಯು ಉಲ್ಲಂಘಿಸಿದಲ್ಲಿ ಅಥವಾ ಆತನು ಪಾಲಿಸದಿದ್ದಲ್ಲಿ ಅಥವಾ ಸದರಿ ಉಪಪ್ರಕರಣದ ಅಡಿಯಲ್ಲಿ ಒದಗಿಸಿದ ಘೋಷಣೆಯು ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಆಗ ಅಂಥ ವ್ಯಕ್ತಿಯು ಅಧಿನಿಯಮದ ಮೂಲಕ ಅಥವಾ ಅದರಡಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡಬೇಕಾದ ಶುಲ್ಕ, ಮತ್ತು ಯಾವ ಅರಣ್ಯ ಉತ್ಪನ್ನದ ಸಂಬಂಧದಲ್ಲಿ ಅಂಥ ಉಲ್ಲಂಘನೆ ಉಂಟಾಗಿದೆಯೋ ಅಥವಾ ಅನುಪಾಲನೆ ಆಗಿಲ್ಲವೋ ಅಥವಾ ತಪ್ಪಾದ ಘೋಷಣೆಯನ್ನು ಒದಗಿಸಲಾಗಿದೆಯೋ ಆ ಅರಣ್ಯ ಉತ್ಪನ್ನವನ್ನು ಪರಿಗಣಿಸಿದ ನಂತರ ಅಧಿಸೂಚನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡಿದ ಶುಲ್ಕದ ನಡುವಿನ ವ್ಯತ್ಯಾಸದ ಎರಡರಷ್ಟಕ್ಕೆ ಸಮನಾದ ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುವ ಮೊದಲು ಆ ವ್ಯಕ್ತಿಗೆ ಅಹವಾಲವನ್ನು ಹೇಳಿಕೊಳ್ಳುವ ಒಂದು ಯುಕ್ತ ಅವಕಾಶವನ್ನು ನೀಡತಕ್ಕದ್ದು.

**(4)** ಸಂದೇಹಗಳ ನಿವಾರಣೆಗಾಗಿ, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಅಥವಾ ಯಾವುವೇ ನಿಯಮಗಳು, ಅಧಿಸೂಚನೆ, ಆದೇಶ, ಪತ್ರ ಅಥವಾ ಮಾರ್ಗಸೂಚಿಗಳ ಅಡಿಯಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆಯ ವಿಧಿಸುವಿಕೆ, ತೆರಿಗೆ ನಿರ್ಧರಣೆ ಮತ್ತು ಸಂಗ್ರಹಣೆಯನ್ನು ಅರಣ್ಯ ಅಭಿವೃದ್ಧಿ ಶುಲ್ಕವೆಂದು ಯಾವಾಗಲೂ ವಿಧಿಸಲಾಗಿದೆ ಮತ್ತು ವಸೂಲು ಮಾಡಲಾಗಿದೆ ಎಂದು ಭಾವಿಸತಕ್ಕದ್ದು, ಎಂದು ಈ ಮೂಲಕ ಘೋಷಿಸಲಾಗಿದೆ.

**(5)** ಈ ಅಧಿನಿಯಮದ ಮೂಲಕ ಮಾಡಿದ ಪೂರ್ವಾನ್ವಯ ತಿದ್ದುಪಡಿಗಳ ಪರಿಣಾಮವಾಗಿ ಉಂಟಾಗಬಹುದಾದಂಥ ಮೂಲ ಅಧಿನಿಯಮದ ಅಧ್ಯಾಯದ XIA ರ ಉಪಬಂಧಗಳ ಯಾವುದೇ ಉಲ್ಲಂಘನೆಗಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಂಡ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ.

**(6) ಅರಣ್ಯ ಅಭಿವೃದ್ಧಿ ತೆರಿಗೆ ಅಥವಾ ಶುಲ್ಕವಾಗಿ ಯಾವುದೇ ಮೊತ್ತದ ವಿಧಿಸುವಿಕೆಯನ್ನು ಮತ್ತು ಸಂಗ್ರಹಣೆಯನ್ನು ಸಿಂಧುಗೊಳಿಸುವುದು.-** ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಅರಣ್ಯ ಅಭಿವೃದ್ಧಿ ತೆರಿಗೆ ಅಥವಾ ಶುಲ್ಕವಾಗಿ ಅರಣ್ಯ ಉತ್ಪನ್ನದ ಮೇಲೆ ತೆರಿಗೆಯಾಗಿ ಅಥವಾ ಶುಲ್ಕವಾಗಿ ಯಾವುದೇ ಮೊತ್ತದ ವಿಧಿಸುವಿಕೆ, ತೆರಿಗೆ ನಿರ್ಧರಣೆ ಅಥವಾ ಸಂಗ್ರಹಣೆಗಾಗಿ ಕ್ರಮ ಕೈಗೊಂಡಿದೆ ಅಥವಾ ಕ್ರಮ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಕ್ರಮದ ಹಾಗೂ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮೂಲ ಅಧಿನಿಯಮ ಅಥವಾ ಯಾವುವೇ ನಿಯಮಗಳು, ಅಧಿಸೂಚನೆ, ಆದೇಶ, ಮಾರ್ಗಸೂಚಿಗಳು ಅಥವಾ ಪತ್ರಗಳ ಉಪಬಂಧಗಳ ಅಡಿಯಲ್ಲಿ ಅಂಥ ವಿಧಿಸುವಿಕೆ, ತೆರಿಗೆ ನಿರ್ಧರಣೆ ಅಥವಾ ಸಂಗ್ರಹಣೆಗೆ ಸಂಬಂಧಿಸಿದಂತೆ ತೆರಿಗೆ ಅಥವಾ ಶುಲ್ಕವಾಗಿ ಸಂಗ್ರಹಿಸಲಾಗಿದೆಯೆಂದು ತಾತ್ಪರ್ಯವಾಗುವ ತೆರಿಗೆ, ಶುಲ್ಕ ಅಥವಾ ಮೊತ್ತದ ಯಾವುದೇ ವಿಧಿಸುವಿಕೆ ಅಥವಾ ಸಂಗ್ರಹಣೆ ಹಾಗೂ ಕೈಗೊಂಡ ಅಥವಾ ಮಾಡಿದ (ನೀಡಲಾದ ಯಾವುವೇ ನೋಟೀಸುಗಳು ಅಥವಾ ಆದೇಶಗಳು ಅಥವಾ ಮಾಡಿದ ಕರ ನಿರ್ಧರಣೆಯನ್ನು ಒಳಗೊಂಡು) ಅಂಥ ವಿಧಿಸುವಿಕೆ, ತೆರಿಗೆ ನಿರ್ಧರಣೆ ಅಥವಾ ಸಂಗ್ರಹಣೆ ಅಥವಾ ಕ್ರಮ ಅಥವಾ ವಿಷಯವನ್ನು ಈ ಅಧಿನಿಯಮದ ಮೂಲಕ

ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಕ್ರಮ ಕೈಗೊಂಡಿದ್ದರೆ, ಕ್ರಮ ಕೈಗೊಳ್ಳಲಾಗಿದ್ದರೆ ಅಥವಾ ಮಾಡಿದ್ದರೆ ಹೇಗೋ ಹಾಗೆ ಎಲ್ಲಾ ಉದ್ದೇಶಗಳಿಗಾಗಿ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಹಾಗೂ ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ:-

(ಎ) ಎಲ್ಲಾ ಉದ್ದೇಶಗಳಿಗಾಗಿ ಅರಣ್ಯ ಅಭಿವೃದ್ಧಿ ತೆರಿಗೆ ಅಥವಾ ಅರಣ್ಯ ಅಭಿವೃದ್ಧಿ ಶುಲ್ಕವಾಗಿ ಯಾವುದೇ ಮೊತ್ತದ ವಿಧಿಸುವಿಕೆ, ತೆರಿಗೆ ನಿರ್ಧರಣೆ ಅಥವಾ ಸಂಗ್ರಹಣೆಯ ಸಂಬಂಧದಲ್ಲಿ ಸರ್ಕಾರ ಅಥವಾ ಸಂದರ್ಭಾನುಸಾರ ಅರಣ್ಯ ಇಲಾಖಾ ಅಧಿಕಾರಿಗಳು ಮಾಡಿದ ಎಲ್ಲಾ ಕಾರ್ಯಗಳು, ವ್ಯವಹರಣೆಗಳು ಅಥವಾ ವಿಷಯಗಳನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು ಕಾನೂನಿನ ಪ್ರಕಾರವಾಗಿ ಮಾಡಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಹಾಗೂ ಯಾವಾಗಲೂ ಮಾಡಿಕೊಂಡು ಬರಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಅಂಥ ತೆರಿಗೆ ಅಥವಾ ಶುಲ್ಕದ ಮರುಪಾವತಿಗಾಗಿ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ದಾವೆ ಅಥವಾ ಇತರ ವ್ಯವಹರಣೆಗಳನ್ನು ನಿರ್ವಹಿಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು ಯಾವುದೇ ಅಂಥ ತೆರಿಗೆ ಅಥವಾ ಶುಲ್ಕದ ಮರುಪಾವತಿಯನ್ನು ನಿರ್ದೇಶಿಸಿ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.][1]

1. ಪ್ರಕರಣ 98ಸಿ ಅನ್ನು 2016ರ ಅಧಿನಿಯಮ 23ರ ಮೂಲಕ 16.08.2016 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ XII
## ಸಂಕೀರ್ಣ

**99. ರಾಜ್ಯ ಸರ್ಕಾರವು ಅರಣ್ಯ ಅಧಿಕಾರಿಗಳಲ್ಲಿ ಕೆಲವು ಅಧಿಕಾರಗಳನ್ನು ನಿಹಿತಗೊಳಿಸಬಹುದು.-** (1) ರಾಜ್ಯ ಸರ್ಕಾರವು, ಅಧಿಸೂಚನೆಯನ್ನು ಮೂಲಕ, ಯಾರೇ ಅರಣ್ಯ ಲ್ಲಿ ಈ ಮುಂದಿನ ಎಲ್ಲಾ ಅಥವಾ ಯಾವುದೇ ಅಧಿಕಾರಿಗಳನ್ನು ನಿಹಿತಗೊಳಿಸಬಹುದು. ಎಂದರೆ ,-

(ಎ) ಯಾವುದೇ ಭೂಮಿಯನ್ನು ಪ್ರವೇಶಿಸುವ ಮತ್ತು ಅದನ್ನು ಸರ್ವೇ (ಮೋಜಣಿ) ಮಾಡುವ , ಅದಕ್ಕೆ ಗುರುತು ಗಾಕುವ ಮತ್ತು ಅದರ ನಕ್ಷೆಯನ್ನು ತಯಾರಸುವ ಅಧಿಕಾರ ;

(ಬಿ) ಸಾಕ್ಷಿದಾರರ ಹಾಜರಾತಿಯನ್ನು ಮತ್ತು ದಸ್ತಾವೇಜುಗಳನ್ನು ಮತ್ತು ಮುಖ್ಯ ವಸ್ತುಗಳನ್ನು ಹಾಜರು ಪಡಿಸಲು ಒತ್ತಾಯಿಸಲು ಸಿವಿಲ್ ನ್ಯಾಯಾಲಯಕ್ಕೆ ಇರುವ ಅಧಿಕಾರಗಳು;

(ಸಿ) [1][ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ II)][1] ಅಡಿಯಲ್ಲಿ ಶೋಧನೆಯ ವಾರಂಟನ್ನು ಹೊರಡಿಸಲು ಅಧಿಕಾರ;

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಅರಣ್ಯ ಅಪರಾಧಗಳನ್ನು ಕುರಿತು ತನಿಖೆ ನಡೆಸುವ ಮತ್ತು ಅಂಥ ತನಿಖಾ ಕ್ರಮದಲ್ಲಿ ಸಾಕ್ಷ್ಯವನ್ನು ತೆಗೆದುಕೊಳ್ಳುವ ಮತ್ತು ಅಭಿಲೇಖಿಸುವ ಅಧಿಕಾರ;

(ಇ) ಮೀಸಲು ಅರಣ್ಯದಲ್ಲಿ ಬೆಂಕಿಯನ್ನು ಹೊತ್ತಿಸಬಹುದಾದ, ಇಡಬಹುದಾದ ಅಥವಾ ಒಯ್ಯಬಹುದಾದ ಕಾಲಗಳನ್ನು (ಋತುಮಾನ) ಮತ್ತು ಕ್ರಮಗಳನ್ನು ಅಧಿಸೂಚಿಸುವ ಅಧಿಕಾರ;

(ಎಫ್) 25ನೇ ಮತ್ತು 50ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಯಾವುದೇ ಅನುಮತಿಯನ್ನು ನೀಡುವ ಅಧಿಕಾರ;

(ಜಿ) ತೇಲಿ ಬಂದ ಚೌಬೀನೆಗಳನ್ನು ತೆಗೆದುಕೊಳ್ಳಲು ಠಾಣೆಗಳನ್ನು ಅಧಿಸೂಚಿಸುವ ಅಧಿಕಾರ;

(ಹೆಚ್) 53ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ಚೌಬೀನೆಯ ಬಗ್ಗೆ ಸಾರ್ವಜನಿಕ ನೋಟೀಸನ್ನು ನೀಡುವ ಅಧಿಕಾರ;

(ಐ) ಈ ಅಧಿನಿಯಮದ ಅಡಿಯಲ್ಲಿ ಸ್ವತ್ತಿನ ಸ್ವಾಧೀನತೆಯನ್ನು ತೆಗೆದುಕೊಳ್ಳುವ ಅಧಿಕಾರ;

(ಜೆ) ಸ್ವತ್ತನ್ನು ಬಿಡುಗಡೆ ಮಾಡಲು ಮತ್ತು ಆರೋಪಗಳನ್ನು ಹಿಂತೆಗೆದುಕೊಳ್ಳಲು ನಿರ್ದೇಶಿಸುವ ಅಧಿಕಾರ;

(ಕೆ) ಅರಣ್ಯದ ಉತ್ಪನ್ನವನ್ನು ಒಯ್ಯುತ್ತಿದೆ ಎಂದು ಸಂದೇಹ ಬಂದ ಯಾವುದೇ ವಾಹನವನ್ನು ತಡೆ ಹಿಡಿಯುವ ಮತ್ತು ಪರೀಕ್ಷಿಸುವ ಅಧಿಕಾರ;

[1][(ಎಲ್) ರಾಜ್ಯ ಸರ್ಕಾರಕ್ಕೆ ಸೇರಿದ ಅರಣ್ಯ ಸಂಪತ್ತಿನ ಮತ್ತು ವಿಶೇಷವಾಗಿ ಗಂಧದ ಮರದ ಹೆಚ್ಚಿನ ಸಂರಕ್ಷಣೆ ಮತ್ತು ಸುರಕ್ಷತೆಗಾಗಿ ಅನುಕೂಲಕರವಾಗಿದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವ ಯಾವುದೇ ಕಾರ್ಯವನ್ನು ಮಾಡಲು ಅಧಿಕಾರ:][1]

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (I)ನೇ ಉಪ-ಪ್ರಕರಣದ (ಡಿ) ಖಂಡದ ಅಡಿಯಲ್ಲಿ ಅಭಿಲೇಖಿಸಲಾದ ಯಾವುದೇ ಸಾಕ್ಷ್ಯವು, ಯಾರೇ ಮ್ಯಾಜಿಸ್ಟ್ರೇಟನ ಮುಂದೆ , ಯಾವುದೇ ಆ ತರುವಾಯದ ವಿಚಾರಣೆಯಲ್ಲಿ ಗ್ರಾಹ್ಯವಾಗಿರತಕ್ಕದ್ದು:

ಪರಂತು, ಅದು ಆರೋಪಿತ ವ್ಯಕ್ತಿಯ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು ಮತ್ತು [1][ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ II) 274ನೇ ಪ್ರಕರಣ ಅಥವಾ 275ನೇ ಪ್ರಕರಣದಿಂದ][1] ಉಪಬಂಧಿಸಲಾದ ರೀತಿಯಲ್ಲಿ ದಾಖಲಾಗುವುದು.

1. 1989ರ ಅಧಿನಿಯಮ 10ರ ಮೂಲಕ 16.03.1989 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**100. ಇನಾಮು ಭೂಮಿಗಳಿಂದ ಅರಣ್ಯೋತ್ಪನ್ನವನ್ನು ಸಾಗಿಸುವುದು.-** ಯಾವುದೇ ಮರಗಳು, ಸೌದೆ ಅಥವಾ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು ನಿಯಮಿಸಬಹುದಾದ ನಿಯಮಗಳ ಅಡಿಯಲ್ಲಿ ಪಡೆಯಬೇಕಾದ ಒಂದು ರಹದಾರಿ ಪಡೆಯದೇ ಇನಾಂ ಅರಣ್ಯ ಭೂಮಿಗಳಿಂದ ಸಾಗಿಸತಕ್ಕದ್ದಲ್ಲ, ಅಲ್ಲದೆ ಅಂಥ ರಹದಾರಿಗಳಿಗೆ ಯಾವುದೇ ಶುಲ್ಕವನ್ನು ಸಂದಾಯ ಮಾಡತಕ್ಕದ್ದಲ್ಲ.

**101. ಮೀಸಲು ಮರಗಳ ಮೇಲೆ ನಿಯಂತ್ರಣ.-** ರಾಜ್ಯ ಸರ್ಕಾರವು, ನಿಯಮಗಳ ಮೂಲಕ ಗಂಧದ ಮರಗಳ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವರ್ಗಗಳ ಮೀಸಲು ಮರಗಳ ಸಂರಕ್ಷಣೆ, ಪುನರುತ್ಪತ್ತಿ ಮತ್ತು ವಿಲೆ ಮಾಡುವುದನ್ನು ನಿಯಂತ್ರಿಸಬಹುದು.

[1]**[101ಎ. ಸರ್ಕಾರಿ ಪಾಲು ತೆರುವಳಿ (Seigniorage) ದರದ ಮೇಲೆ ಅರಣ್ಯ ಉತ್ಪನ್ನದ ಮಂಜೂರು.-** [1][(1)][1] ರಾಜ್ಯ ಸರ್ಕಾರವು , ಯಾರೇ ವ್ಯಕ್ತಿಗೆ, ರಾಜ್ಯ ಸರ್ಕಾರದ [2][xxx][2] ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು [3][ನಿಗದಿಪಡಿಸಿದ][3] ನಿಯಮಿಸಬಹುದಾದಂಥ ಸರ್ಕಾರಿ ಪಾಲು ತೆರುವಳಿ ಮೌಲ್ಯವನ್ನು ಅಂಥ ವ್ಯಕ್ತಿ ಸಂದಾಯ ಮಾಡಿದ ಮೇಲೆ ಯಾವುದೇ ಜಿಲ್ಲೆಯಲ್ಲಿ, ಅಥವಾ ಮೀಸಲು ಅರಣ್ಯದಲ್ಲಿನ ಯಾವುದೇ ಮರ, ಕಟ್ಟಿಗೆ ಅಥವಾ ಚೌಬೀನೆ ಅಥವಾ ಇತರೆ ಅರಣ್ಯ ಉತ್ಪನ್ನವನ್ನು ಮಂಜೂರು ಮಾಡಬಹುದು.][1]

1.1981ರ ಅಧಿನಿಯಮ 1ರ ಮೂಲಕ 101ಎ ಪ್ರಕರಣವನ್ನು 01.06.1969 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು (1)ನೇ ಉಪಪ್ರಕರಣವನ್ನು 23.02.1981 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.
2. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು, ಯಾವುದೇ ಸರ್ಕಾರಿ ಪಾಲು ತೆರುವಳಿ ಮೌಲ್ಯವನ್ನು 1981ನೇ ಫೆಬ್ರುವರಿ ಹತ್ತೊಂಬತ್ತನೇ ದಿನಾಂಕದಿಂದ 1983ರ ಆಗಸ್ಟ್ ಮೂವತ್ತೊಂದನೇ ದಿನಾಂಕದವರೆಗಿನ ಅವಧಿಗಾಗಿನ ಹಿಂಬರಹಕ್ಕೆ ಸಂಬಂಧಪಟ್ಟಂತೆ ಸಂದಾಯ ಮಾಡತಕ್ಕದ್ದಲ್ಲ.

ಮತ್ತು ಪರಂತು, ರಾಜ್ಯ ಸರ್ಕಾರವು, 1983ರ ಅಕ್ಟೋಬರ್ ಮೊದಲನೇ ದಿನಾಂಕದಿಂದ ಹತ್ತು ವರ್ಷಗಳ ಅವಧಿಗಾಗಿ ಮತ್ತು ಅಂಥ ಸರ್ಕಾರಿ ಪಾಲು ತೆರುವಳಿ ಮೌಲ್ಯದ ಶೇಕಡಾ ಐವತ್ತರಷ್ಟನ್ನು ಸಂದಾಯ ಮಾಡಿದ್ದರ ಮೇಲೆ, ವೃತ್ತಪತ್ರಿಕೆ ಕಾಗದ ಉತ್ಪಾದನೆಗಾಗಿ ನೀಲಗಿರಿ ಮರ ಅಥವಾ ಬಿದಿರನ್ನು ಯಾರೇ ವ್ಯಕ್ತಿಗೆ ಮಂಜೂರು ಮಾಡಬಹುದು.][1]

1. 1989ರ ಅಧಿನಿಯಮ 10ರ ಮೂಲಕ 23.2.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 1980ರ ಪ್ರಕರಣಕ್ಕೆ ಪೂರ್ವದಲ್ಲಿ ಮಂಜೂರು ಮಾಡಿದ ಅಥವಾ ನಮೂದಿಸಿದ ಕರಾರು ಅಥವಾ ಇತರೆ ದಸ್ತಾವೇಜನ್ನು ಹೊಂದಿರುವ ವ್ಯಕ್ತಿಯು ಒಂದು ಗುತ್ತಿಗೆ ಅಥವಾ ಮತ್ತು ರಾಜ್ಯ ಸರ್ಕಾರದಿಂದ ಯಾವುದೇ ಮರ, ಕಟ್ಟಗೆ, ಚೌಬೀನೆ ಅಥವಾ ಇತರೆ ಅರಣ್ಯ ಉತ್ಪನ್ನದ ಸರಬರಾಜಿಗಾಗಿ ಉಪಬಂಧ ಕಲ್ಪಿಸಿರುವ ಆ ಗುತ್ತಿಗೆ ಅಥವಾ ಕರಾರು ಅಥವಾ ಇತರೆ ದಸ್ತಾವೇಜಿನ ಲಿಖಿತದಲ್ಲಿ ಅಥವಾ ಅಂಥ ಪ್ರಾರಂಭದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಅಂಥ ಪ್ರಾರಂಭದಂದು ತಾನು ಸ್ವೀಕರಿಸಿದ ಮರ, ಕಟ್ಟಿಗೆ, ಚೌಬೀನೆ ಅಥವಾ ಇತರೆ ಅರಣ್ಯ ಉತ್ಪನ್ನಗಳಿಗೆ ಸಂಬಂಧಪಟ್ಟಂತೆ, (1) ನೇ ಉಪ-ಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮ ಅಥವಾ ಹೊರಡಿಸಿದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಸಮಯಕ್ಕಾಗಿ, ಆ ದರದಲ್ಲಿ, ಮೌಲ್ಯವನ್ನು (ಯಾವುದೇ ಹೆಸರಿನಲ್ಲಿ ಕರೆದಿರಲಿ) ತರುವಾಯ ಅವನಿಂದ ಸ್ವೀಕರಿಸಿದ ಅಂಥ ಗಿಡ, ಮರ, ಕಟ್ಟಿಗೆ, ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕದ್ದು.

(3) ಕರ್ನಾಟಕ ಅರಣ್ಯ, (ತಿದ್ದುಪಡಿ) ಅಧಿನಿಯಮ, 1980ರ ಪ್ರಾರಂಭದ ತರುವಾಯ, ಯಾವುದೇ ಮಂಜೂರು ಮಾಡಿದ ಅಥವಾ ನಮೂದಿಸಿದಂಥ ಗುತ್ತಿಗೆ ಕರಾರು ಅಥವಾ ದಸ್ತಾವೇಜು ಹೊಂದಿರುವ ವ್ಯಕ್ತಿಯು, ಅಂಥ ಗುತ್ತಿಗೆ, ಕರಾರು ಅಥವಾ ದಸ್ತಾವೇಜಿನಲ್ಲಿ ಏನೇ ಇದ್ದರೂ, ತಾನು ಸ್ವೀಕರಿಸಿದ ಯಾವುದೇ ಮರ, ಕಟ್ಟಿಗೆ, ಚೌಬೀನೆ ಅಥವಾ ಇತರೆ ಅರಣ್ಯ ಉತ್ಪನ್ನಗಳ ಸಂಬಂಧದಲ್ಲಿ (1)ನೇ ಉಪ ಪ್ರಕರಣದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ಹೊರಡಿಸಿದ ಆದೇಶದಲ್ಲಿ ತತ್ಕಾಲದಲ್ಲಿ ನಿರ್ದಿಷ್ಟಪಡಿಸಿದ ದರದಂತೆ ಮೌಲ್ಯವನ್ನು (ಯಾವುದೇ ಹೆಸರಿನಲ್ಲಿ ಕರೆದಿರಲಿ) ಅಂಥ ಮರ, ಕಟ್ಟಿಗೆ, ಚೌಬೀನೆ ಅಥವಾ ಇತರೆ ಅರಣ್ಯ ಉತ್ಪನ್ನಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕದ್ದು.

(4) (1) ಉಪ ಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮಗಳು ಅಥವಾ ಹೊರಡಿಸಿದ ಆದೇಶಗಳಲ್ಲಿ ನಿರ್ದಿಷ್ಟಪಡಿಸಿದ ದರಗಳನ್ನು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು, ಕಾಲಕಾಲಕ್ಕೆ ಮಾರ್ಪಾಟುಗೊಳಿಸಬಹುದು:

ಪರಂತು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು, ಯಾವುದೇ ಮರ, ಕಟ್ಟಿಗೆ, ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನಗಳ ಸಂಬಂಧದದಲ್ಲಿ ಅವುಗಳ ದರ ಅಥವಾ ಮೌಲ್ಯವನ್ನು ಎರಡು ವರ್ಷಗಳ ಯಾವುದೇ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಸಲ ಹೆಚ್ಚಿಸತಕ್ಕದ್ದಲ್ಲ.][1]

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][101ಬಿ. ರಾಜ್ಯ ಸರ್ಕಾರದ ಕರಾರಿನಂತೆ ಅರಣ್ಯ ಉತ್ಪನ್ನದ ಸರಬರಾಜು.- (1) ರಾಜ್ಯ ಸರ್ಕಾರವು ಮಾಡಿಕೊಂಡ ಮತ್ತು ರಾಜ್ಯ ಸರ್ಕಾರದಿಂದ, ಉರುವಲು, ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನಗಳ ಸರಬರಾಜಿಗಾಗಿ ಅವಕಾಶ ಕಲ್ಪಿಸುವ ಯಾವುದೇ ಗುತ್ತಿಗೆ, ಕರಾರು ಅಥವಾ ಯಾವುದೇ ಇತರ ದಸ್ತಾವೇಜನ್ನು ಒಂದು ಸಲಕ್ಕೆ ಐದು ವರ್ಷಗಳನ್ನು ಮೀರಿದ ಅವಧಿಗಾಗಿ ಇರತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಂದು ಗುತ್ತಿಗೆ ಕರಾರು ಅಥವಾ ಇತರ ದಸ್ತಾವೇಜಿನ ಅಡಿಯಲ್ಲಿನ ಸರಬರಾಜು, ಅಂಥ ಮರ, ಕಟ್ಟಿಗೆ, ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನದ ದೊರೆಯುವಿಕೆಯ ಷರತ್ತಿಗೆ ಒಳಪಟ್ಟಿರತಕ್ಕದ್ದು.

(2) ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 1984ರ ಪ್ರಾರಂಭಕ್ಕೆ ಪೂರ್ವದಲ್ಲಿ ಮಂಜೂರು ಮಾಡಿದ ಅಥವಾ ರಾಜ್ಯ ಸರ್ಕಾರದಿಂದ, ಮರ, ಕಟ್ಟಿಗೆ, ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನಗಳ ಸರಬರಾಜಿಗಾಗಿ ಉಪಬಂಧ ಕಲ್ಪಿಸಿದ ಯಾವುದೇ ಗುತ್ತಿಗೆ ಅಥವಾ ಕರಾರು ಅಥವಾ ಯಾವುದೇ ಇತರ ದಸ್ತಾವೇಜು,-

(ಎ) ಅದು ಐದು ವರ್ಷಗಳನ್ನು ಮೀರಿದ ಅವಧಿಗಾಗಿ ಇದ್ದು ಅಂಥ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿದ್ದಾಗ ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಅಥವಾ ಅಂಥ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳ ಅವಧಿಯ ಮುಕ್ತಾಯವಾದ ಮೇಲೆ ಇವುಗಳಲ್ಲಿ ಯಾವುದು ಮೊದಲೋ ಅದು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು,

(ಬಿ) ಅಂಥ ಮರ, ಕಟ್ಟಿಗೆ, ಚೌಬೀನೆ ಅಥವಾ ಇತರೆ ಅರಣ್ಯ ಉತ್ಪನ್ನದ ದೊರೆಯುವಿಕೆಯ ಷರತ್ತಿಗೊಳಪಟ್ಟಿರತಕ್ಕದ್ದು ಮತ್ತು ಇರುವುದೆಂದು ಭಾವಿಸತಕ್ಕದ್ದು.][1]

1. 1984ರ ಅಧಿನಿಯಮ 11ರ ಮೂಲಕ 13.01.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**102. ನಿಯಮಗಳನ್ನು ರಚಿಸಲು ಸಾಮಾನ್ಯ ಅಧಿಕಾರಗಳು.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ನೆರವೇರಿಸುವ ಬಗ್ಗೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಿಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನವುಗಳ ಬಗ್ಗೆ ನಿಯಮಗಳನ್ನು ಮಾಡಬಹುದು,-

(ಎ) ಈ ಅಧಿನಿಯಮದ ಅಡಿಯಲ್ಲಿ ಯಾರೇ ಅರಣ್ಯ ಅಧಿಕಾರಿಯ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿಯಮಿಸುವ ಮತ್ತು ಪರಿಮಿತಿಗೊಳಿಸುವ ಬಗ್ಗೆ;

(ಬಿ) ಅರಣ್ಯ ವ್ಯವಸ್ಥಾಪನಾ ಅಧಿಕಾರಿಗಳ ಪ್ರಕ್ರಿಯೆಯನ್ನು ನಿಯಂತ್ರಿಸುವ ಬಗ್ಗೆ;

(ಸಿ) ಸರ್ಕಾರಕ್ಕೆ ಸೇರಿದ ಆದರೆ ಖಾಸಗಿ ವ್ಯಕ್ತಿಗಳ ಸುಪರ್ದಿಯಲ್ಲಿರುವ ಅಥವಾ ಅಧಿಭೋಗದಲ್ಲಿರುವ ಭೂಮಿಗಳ ಮೇಲೆ ಬೆಳೆದ ಮರಗಳ, ಚೌಬೀನೆಯ ಮತ್ತು ಇತರೆ ಅರಣ್ಯ ಉತ್ಪನ್ನಗಳ ಸಂರಕ್ಷಣೆ, ಪುನರುತ್ಪತ್ತಿ ಮತ್ತು ವಿಲೆ - ಇವುಗಳ ಬಗ್ಗೆ;

(ಡಿ) ಈ ಅಧಿನಿಯಮದ ಅಡಿಯಲ್ಲಿ ಅಥವಾ ಇತರೆ ರೀತಿಯಲ್ಲಿ ಇರುವ ಜುಲ್ಮಾನೆಗಳಿಂದ ಮತ್ತು ಮಟ್ಟುಗೋಲುಗಳಿಂದ ದೊರೆಯುವ ಉತ್ಪತ್ತಿಯಿಂದ ಅಧಿಕಾರಿಗಳಿಗೆ ಮತ್ತು ಮಾಹಿತಿ ಕೊಡುವವರಿಗೆ ಸಂದಾಯ ಮಾಡಬೇಕಾದ ಬಹುಮಾನಗಳನ್ನು ನಿಯಂತ್ರಿಸುವ ಬಗ್ಗೆ;

[1][(ಇ) ಕರೀಮರ ಅಥವಾ ಬೀಟೆ ಮರವನ್ನು (ಡಾಲ್ಬರ್ಜಿಯ ಲ್ಯಾಟಿಫೋಲಿಯ) ಕಡಿಯುವುದನ್ನು, ಬೀಳಿಸುವುದನ್ನು ಮಾರುವುದನ್ನು ಅಥವಾ ವಿಲೆ ಮಾಡುವುದನ್ನು ನಿಯಂತ್ರಿಸುವ ಬಗ್ಗೆ;

(ಎಫ್) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿ ನೀಡಿದ ಲೈಸೆನ್ಸ್‌ಗಳ, ರಹದಾರಿಗಳ, ಪಾಸುಗಳ ಅಥವಾ ಅನುಮತಿಗಳ ಸಂಬಂಧದಲ್ಲಿ ವಿಧಿಸಬೇಕಾದ ಫೀಜುಗಳನ್ನು ಗೊತ್ತುಪಡಿಸುವ ಬಗ್ಗೆ;

(ಜಿ) ಈ ಅಧಿನಿಯಮದ ಮೂಲಕ ನಿಯಮಿಸಬೇಕೆಂದು ಅಗತ್ಯಪಡಿಸಿದ ಅಥವಾ ಅನುಮತಿಸಿದ ಇತರ ಯಾವುದೇ ವಿಷಯದ ಬಗ್ಗೆ.][1]

1. (ಇ) ಯಿಂದ (ಜಿ) ಖಂಡಗಳನ್ನು 1974ರ ಅಧಿನಿಯಮ 23ರ ಮೂಲಕ 16.09.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**103. ನಿಯಮಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು.-** ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ

ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

**104. ಅಧಿನಿಯಮದ ಅಥವಾ ನಿಯಮಗಳ ಉಲ್ಲಂಘನೆಗಾಗಿ ದಂಡನೆಗಳು.-** ಯಾವುದೇ ಉಲ್ಲಂಘನೆಯ ಕುರಿತು ಯಾವುದೇ ವಿಶೇಷ ದಂಡನೆಯನ್ನು ಉಪಬಂಧಿಸದೇ ಇರುವಂಥ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾಗಿದ ಯಾವುದೇ ನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣೀತನಾದ ಮೇಲೆ [1][ಆರು ತಿಂಗಳವರೆಗೆ][1] ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ [1][ಒಂದು ಸಾವಿರ ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

[2][ಪರಂತು, ಗಂಧದ ಮರದ ಕುರಿತಾದಂಥ ಯಾವುದೇ ಉಪಬಂಧವನ್ನು ಉಲ್ಲಂಘಿಸಿರುವ ಯಾರೇ ವ್ಯಕ್ತಿಯು, ಅಪಾರಧ ನಿರ್ಣೀತನಾದ ಮೇಲೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.][2]

1. 1974ರ ಅಧಿನಿಯಮ 23ರ ಮೂಲಕ 16.09.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[*1][**104ಎ. ಕರೀಮರ ಅಥವಾ ಬೀಟೆ ಮರಗಳ ಮತ್ತು ಅದರ ಬೇನೆಯ ವ್ಯಾಪಾರ ಮತ್ತು ಸಾಗಣೆ ಮೇಲಣ ನಿರ್ಬಂಧ**.- (1) ಈ ಮುಂದಿನವರನ್ನು,-

(ಎ) ರಾಜ್ಯ ಸರ್ಕಾರ; ಅಥವಾ

(ಬಿ) ಈ ಸಂಬಂಧದಲ್ಲಿ ಲಿಖಿತದಲ್ಲಿ ಅಧಿಕಾರ ಹೊಂದಿದ [2][ಉಪ ಅರಣ್ಯ ಸಂರಕ್ಷಣಾಧಿಕಾರಿ][2] ದರ್ಜೆಗೆ ಕಡಿಮೆಯಲ್ಲದ ರಾಜ್ಯ ಸರ್ಕಾರದ ಅಧಿಕಾರಿಗಳ,

- ಹೊರತುಪಡಿಸಿ ಯಾವ ವ್ಯಕ್ತಿಯೇ ಆಗಲಿ, ಯಾವುದೇ ಕರೀಮರದ ಅಥವಾ ಬೀಟೆ ಮರದ (ಡಾಲ್ಬರ್ಜಿಯ ಲ್ಯಾಟಿಫೋಲಿಯಾ) ಅಥವಾ ಅದರ ಚೌಬೀನೆಯನ್ನು ಕೊಳ್ಳತಕ್ಕದ್ದಲ್ಲ ಅಥವಾ ಸಾಗಿಸತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರದ ಅಥವಾ ಮೇಲೆ ಹೇಳಿದ ಅಧಿಕಾರಿಗಳಿಂದ ಮಾಡಿದ ಅಂಥ ಯಾವುದೇ ಮರ ಅಥವಾ ಚೌಬೀನೆಯ ಖರೀದಿಯನ್ನು ಈ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ಖರೀದಿಯೆಂದು ಭಾವಿಸತಕದ್ದಲ್ಲ.

ಮತ್ತು ಪರಂತು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಳತೆಗಳಿಗಿಂತ ಕಡಿಮೆಯಾಗಿರುವ ಅಂಥ ಯಾವುದೇ ಮರ ಅಥವಾ ಚೌಬೀನೆಯನ್ನು ಆದೇಶದ ಮೂಲಕ (1)ನೇ ಉಪ- ಪ್ರಕರಣದ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

*1. 104ಎ ಮತ್ತು 104ಬಿ ಪ್ರಕರಣಗಳನ್ನು 1974ರ ಅಧಿನಿಯಮ 23ರ ಮೂಲಕ 16.09.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಯಾವ ವ್ಯಕ್ತಿಯೇ ಆಗಲಿ ರಾಜ್ಯ ಸರ್ಕಾರದ ಅಥವಾ ಮೇಲೆ ಹೇಳಿದ ಅಧಿಕಾರಿಗಳ ಹೊರತು ಇತರ ವ್ಯಕ್ತಿಗೆ, ಅಂತಹ ಯಾವುದೇ ಮರವನ್ನು ಅಥವಾ ಚೌಬೀನೆಯನ್ನು ಮಾರತಕ್ಕದ್ದಲ್ಲ ಅಥವಾ ಇತರ ರೀತಿಯಲ್ಲಿ ವಿಲೆ ಮಾಡತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯಿಂದ ಸದ್ಭಾವಿಕ ಉಪಯೋಗಕ್ಕಾಗಿ ರಾಜ್ಯ ಸರ್ಕಾರ ಅಥವಾ ಮೇಲೆ ಹೇಳಿದ ಅಧಿಕಾರಿಗಳು ಖರೀದಿಸಿದ ಅಂಥ ಯಾವುದೇ ಮರ ಅಥವಾ ಚೌಬೀನೆಯನ್ನು ಅಂಥ ವ್ಯಕ್ತಿಯು ಅಂಥ ಪ್ರಾಧಿಕಾರವು ಕೊಟ್ಟ ರಹದಾರಿಯ ನಿಬಂಧನೆಗಳು ಮತ್ತು ಷರತ್ತುಗಳಿಗನುಸಾರವಾಗಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಸಾಗಿಸಬಹುದು.

(4) ಅಂಥ ಯಾವುದೇ ಮರ ಅಥವಾ ಚೌಬೀನೆಯ ಬೆಲೆಯು ರಾಜ್ಯ ಸರ್ಕಾರವು,-

(ಎ) ಪ್ರಚಲಿತ ಮಾರುಕಟ್ಟೆ ಬೆಲೆ;
(ಬಿ) ಆ ಸ್ಥಳದಲ್ಲಿರುವ ಚೌಬೀನೆಯ ಗುಣ;
(ಸಿ) ಆ ಸ್ಥಳದಲ್ಲಿ ದೊರೆಯಬಹುದಾದ ಸಾಗಣೆ ಸೌಲಭ್ಯಗಳು;
(ಡಿ) ಸಾಗಣೆ ವೆಚ್ಚ;
(ಇ) ಆ ಸ್ಥಳದಲ್ಲಿ ಪ್ರಚಲಿತವಿರುವ ಕಾರ್ಮಿಕರಿಗೆ ಕೊಡಲಾಗುವ ಮಜೂರಿಗಳ ಸಾಮಾನ್ಯ ಮಟ್ಟ ; ಮತ್ತು
(ಎಫ್) ನಿಯಮಿಸಬಹುದಾದಂಥ ಇತರ ವಿಷಯಗಳನ್ನು,

-ಗಮನಿಸಿ ಕಾಲಕಾಲಕ್ಕೆ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತಾಗಿರತಕ್ಕದ್ದು.

(5) ಅಂತಹ ಯಾವುದೇ ಮರ ಅಥವಾ ಚೌಬೀನೆಯನ್ನು ರಾಜ್ಯ ಸರ್ಕಾರಕ್ಕೆ ಅಥವಾ ಮೇಲೆ ತಿಳಿಸಿದ ಅಧಿಕಾರಿಗಳಿಗೆ ಮಾರಾಟ ಮಾಡುವ ಬಗ್ಗೆ ಅವಶ್ಯಕವಾಗಬಹದಾದಂಥ ಸಂಖ್ಯೆಯ ಕೋಠಿಗಳನ್ನು ರಾಜ್ಯ ಸರ್ಕಾರವು ಅಥವಾ ಮೇಲೆ ತಿಳಿಸಿದ ಅಧಿಕಾರಿಗಳು ಸ್ಥಾಪಿಸಬಹುದು.

(6) ರಾಜ್ಯ ಸರ್ಕಾರ ಅಥವಾ ಮೇಲೆ ತಿಳಿಸಿದ ಅಧಿಕಾರಿಗಳು, ರಾಜ್ಯ ಸರ್ಕಾರದ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಮಾರಾಟಕ್ಕೆ ಇಟ್ಟಿರುವ ಅಂತ

ಯಾವುದೇ ಮರ ಅಥವಾ ಚೌಬೀನೆಯನ್ನು (4)ನೇ ಉಪ ಪ್ರಕರಣದ ಅಡಿಯಲ್ಲಿ ಗೊತ್ತು ಪಡಿಸಿದ ಬೆಲೆಗೆ ವ್ಯವಹಾರ ಸಮಯದಲ್ಲಿ ಕೊಳ್ಳಬೇಕಾಗುವುದು.

(7) (1)ನೇ ಉಪ-ಪ್ರಕರಣದ ಅಡಿಯಲ್ಲಿ ಖರೀದಿಸಿದ ಯಾವುದೇ ಮರ ಅಥವಾ ಚೌಬೀನೆಯನ್ನು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಮಾರಾಟ ಮಾಡತಕ್ಕದ್ದು ಅಥವಾ ಇತರ ರೀತಿಯಲ್ಲಿ ವಿಲೆ ಮಾಡತಕ್ಕದ್ದು,

(8) ಈ ಪ್ರಕರಣದ ಉಪಬಂಧಗಳನ್ನು ಅಥವಾ ಅವರ ಅಡಿಯಲ್ಲಿ ಮಾಡಿದ ಯಾವುದೇ ನಿಯಮವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣೀತನಾದ ಮೇಲೆ [1][ಐದು ವರ್ಷಗಳ][1] ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು [1][ಹತ್ತು ಸಾವಿರ ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**104ಬಿ. ಕೆಲವು ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.-** Xನೇ ಅಧ್ಯಾಯದ ಅಡಿಯಲ್ಲಿ ಮತ್ತು 104ಎ ಪ್ರಕರಣದ ಅಡಿಯಲ್ಲಿ ಮತ್ತು ಅದರಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿನ ಎಲ್ಲಾ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.][1*]

*1. 104ಎ ಮತ್ತು 104ಬಿ ಪ್ರಕರಣಗಳನ್ನು 1974ರ ಅಧಿನಿಯಮ 23ರ ಮೂಲಕ 16.09.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1]**[104ಸಿ. ದುಷ್ಪ್ರೇರಣೆ.**- 114ನೇ ಪ್ರಕರಣಕ್ಕೆ ಒಳಪಟ್ಟು ಯಾರೇ ಅರಣ್ಯ ಅಧಿಕಾರಿಯೂ ಸೇರಿದಂತೆ ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡುವುದಕ್ಕೆ ಅಥವಾ ದುಷ್ಪ್ರೇರಕನು ಹೊಂದಿರುವ ಉದ್ದೇಶ ಅಥವಾ ತಿಳಿವಳಿಕೆಯಿಂದಲೇ ಒಂದು ಅಪರಾಧವನ್ನು ಮಾಡಲು ಕಾನೂನಿನನ್ವಯ ಸಮರ್ಥನಾದ ವ್ಯಕ್ತಿಯು ಮಾಡಿದರೆ ಅಪರಾಧವಾಗುವಂತಹ ಒಂದು ಕೃತ್ಯವನ್ನು ಮಾಡುವುದಕ್ಕೆ ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು ಅಂಥ ಅಪರಾಧವನ್ನು ಮಾಡಿದ್ದಾನೆಂದು ಭಾವಿಸತಕ್ಕದ್ದು ಮತ್ತು ಅಂಥ ಅಪರಾಧಕ್ಕೆ ಉಪಬಂಧಿಸಲಾದ ದಂಡನೆಯಿಂದ ದಂಡಿತನಾಗತಕ್ಕದ್ದು.

**104ಡಿ. ಜಾಮೀನು ಕುರಿತ ವಿಶೇಷ ಉಪಬಂಧ.-** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2)ರಲ್ಲಿ ಏನೇ ಒಳಗೊಂಡಿದ್ದರೂ 86 ಅಥವಾ 87 ಅಥವಾ

104ಎ ಪ್ರಕರಣದಡಿ ದಂಡಿತನಾದ ಅಥವಾ, ದಂತದ ಕುರಿತಾದ ಅರಣ್ಯ ಅಪರಾಧದಿಂದ ದಂಡಿತನಾದ ಯಾವ ವ್ಯಕ್ತಿಯನ್ನೂ ಆತ ಅಭಿರಕ್ಷೆಯಲ್ಲಿ ಇದ್ದರೆ,-

(ಎ) ಪ್ರಾಸಿಕ್ಯೂಷನ್ನಿಗೆ ಅಂಥ ಬಿಡುಗಡೆಗಾಗಿ ಅರ್ಜಿಯನ್ನು ವಿರೋಧಿಸಲು ಒಂದು ಅವಕಾಶ ನೀಡಿದ್ದ ಹೊರತು, ಮತ್ತು

(ಬಿ) ಪ್ರಾಸಿಕ್ಯೂಷನ್ ವಿರೋಧ ಮಾಡಿದಾಗ ಆತ ಆ ಅಪರಾಧಕ್ಕೆ ತಪ್ಪಿತಸ್ಥನಲ್ಲ ಎಂದು ನಂಬಲು ಸಮಂಜಸ ಕಾರಣವಿದೆ ಎಂದು ನ್ಯಾಯಾಲಯವು ಮನಗಂಡ ಹೊರತು

- ಆತನನ್ನು ಜಾಮೀನಿನ ಮೇಲೆ ಅಥವಾ ಮುಚ್ಚಳಿಕೆ ಮೇಲೆ ಬಿಡುಗಡೆ ಮಾಡತಕ್ಕದ್ದಲ್ಲ.

[2]**[104ಇ. xxx]**[2]

**104ಎಫ್. ಪರಿವೀಕ್ಷಣೆಯ ಮೇಲೆ ವ್ಯಕ್ತಿಗಳನ್ನು ಬಿಡುಗಡೆ ಮಾಡಕೂಡದು.-** ದಂಡ ಪ್ರಕ್ರಿಯಾ ಸಂಹಿತೆ 1973 (1974ರ ಕೇಂದ್ರ ಅಧಿನಿಯಮ 2) ಮತ್ತು ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ 1958 (1958 (1958ರ ಕೇಂದ್ರಾಧಿನಿಯಮ 20) ಗಳಲ್ಲಿ ಏನೇ ಇದ್ದರೂ, 86, 87 ಅಥವಾ 104ಎ ಪ್ರಕರಣಗಳಡಿಯಲ್ಲಿ ದಂಡಿತನಾಗತಕ್ಕ ಅಪರಾಧಕ್ಕಾಗಿ ಅಪರಾಧ ನಿರ್ಣೀತನಾದ ಯಾವ ವ್ಯಕ್ತಿಯನ್ನೂ ಪರಿವೀಕ್ಷಣೆ (ಪ್ರೊಬೆಷನ್) ಮೇಲೆ ಅಥವಾ ಛೀಮಾರಿ ಹಾಕಿ ಬಿಡುಗಡೆ ಮಾಡತಕ್ಕದ್ದಲ್ಲ.

**104ಜಿ. ಕೆಲವೊಂದು ಅಪರಾಧಗಳಿಗೆ ಅಪರಾಧ ನಿರ್ಣಿತ ವ್ಯಕ್ತಿಗಳನ್ನು ಬೇರೆಡೆಗೆ ಕಳುಹಿಸುವುದು.-** (1) 86, 87 ಅಥವಾ 104ಎ ಪ್ರಕರಣಗಳಡಿ ದಂಡನೀಯವಾದ ಅಪರಾಧಕ್ಕಾಗಿ ಈ ಹಿಂದೆ ಎರಡು ಅಥವಾ ಹೆಚ್ಚು ಬಾರಿ ಅಪರಾಧ ನಿರ್ಣಿತನಾಗಿದ್ದ ಯಾರೇ ವ್ಯಕ್ತಿಯು ಸದರಿ ಪ್ರಕರಣಗಳಲ್ಲಿಯ ದಂಡಿತವಾದ ಯಾವುದೇ ಅಪರಾಧಕ್ಕಾಗಿ ಮತ್ತೆ ಅಪರಾಧ ನಿರ್ಣಿತನಾದರೆ ನ್ಯಾಯಾಲಯ ಹಾಗೆ ಮಾಡುವುದು ಸೂಕ್ತ ಎಂದು ಯೋಚಿಸಿದರೆ ಆ ವ್ಯಕ್ತಿ ಬಗ್ಗೆ ಶಿಕ್ಷೆ ಕುರಿತು ಆದೇಶ ನೀಡುವಾಗ, ಆದೇಶದ ಮೂಲಕ ಸದರಿ ಶಿಕ್ಷೆ ಮುಕ್ತಾಯವಾದ ಮೇಲೆ, ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಜಿಲ್ಲೆ ಅಥವಾ ಇನ್ಯಾವುದೇ ಪ್ರದೇಶದಿಂದ ಹೊರಕ್ಕೆ ಹೋಗುವಂತೆ ಆ ವ್ಯಕ್ತಿಗೆ ನಿರ್ದೇಶಿಸಬಹುದು.

(2) 1ನೇ ಉಪ ಪ್ರಕರಣದ ಅಡಿಯಲ್ಲಿನ ಆದೇಶವು ಅಂಥ ಆದೇಶವು ಜಾರಿಯಲ್ಲಿರತಕ್ಕ ಮತ್ತು ಎರಡು ವರ್ಷಗಳಿಗೆ ಮೀರಿದ ಅವಧಿಯನ್ನು ನಿರ್ದಿಷ್ಟವಾಗಿ

ಹೇಳತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳನ್ನು ಹಾಗೂ ನಿರ್ಬಂಧಗಳನ್ನು ನಿರ್ದಿಷ್ಟವಾಗಿ ಹೇಳತಕ್ಕದ್ದು.

(3) ಅಪೀಲು ಮಾಡಿಕೊಂಡಾಗ ಅಥವಾ ಅನ್ಯಥಾ ಆ ಅಪರಾಧ ನಿರ್ಣಯವನ್ನು ತಳ್ಳಿ ಹಾಕಿದಾಗ, ಅಂಥ ಆದೇಶವು ಶೂನ್ಯವಾಗತಕ್ಕದ್ದು.

(4) ಒಂದು ಅಪೀಲು ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಮರು ಪರಿಶೀಲನೆಯ ತನ್ನ ಅಧಿಕಾರವನ್ನು ಚಲಾಯಿಸುತ್ತಿರುವಾಗ ಸಹ ಈ ಪ್ರಕರಣದ ಆಡಿಯಲ್ಲಿ ಆದೇಶವನ್ನು ಮಾಡಬಹುದು.

(5) ಯಾವುದೇ ಪ್ರದೇಶದಿಂದ ಹೊರಗೆ ಹೋಗಬೇಕೆಂದು ಈ ವ್ಯಕ್ತಿಗಳಾದ ಈ ಪ್ರಕರಣದ ಅಡಿಯಲ್ಲಿ ನಿರ್ದೇಶನವನ್ನು ನೀಡಲಾದಂತಹ ಒಬ್ಬ ವ್ಯಕ್ತಿಯು,-

(i) ಹಾಗೇ ನಿರ್ದೇಶಿಸಿದಂತೆ, ಅಲ್ಲಿಂದ ಹೋಗಲು ತಪ್ಪಿದಲ್ಲಿ; ಅಥವಾ

(ii)ಆ ರೀತಿ ಆ ಸ್ಥಳದಿಂದ ಹೊರಟುಹೋಗಿದ್ದು 1ನೇ ಉಪ ಪ್ರಕರಣದ ಅಡಿಯಲ್ಲಿ ಹೇಳಲಾದ ಲಿಖಿತ ಅನುಮೋದನೆ ನೀಡಿದ ಹೊರತು ಆದೇಶದಲ್ಲಿ ನಿರ್ದಿಷ್ಟವಾಗಿ ಹೊರಗಿರಬೇಕೆಂದು ಅವಧಿಯೊಳಗೆ ಆ ಪ್ರದೇಶದ ಒಳಕ್ಕೆ ಪ್ರವೇಶಿಸಿದರೆ ನ್ಯಾಯಾಲಯವು ಆತನನ್ನು ದಸ್ತಗಿರಿ ಮಾಡಿಸಬಹುದು ಮತ್ತು ಪ್ರತಿ ಪ್ರಕರಣದಲ್ಲಿಯೂ ನ್ಯಾಯಾಲಯವು ನಿರ್ದಿಷ್ಟವಾಗಿ ಹೇಳಬಹುದಾದಂತಹ ಆ ಪ್ರದೇಶದಿಂದ ಹೊರಗಿನ ಯಾವುದೇ ಸ್ಥಳಕ್ಕೆ ಪೊಲೀಸು ಅಭಿರಕ್ಷೆಯಲ್ಲಿ ಸಾಗಿಸುವಂತೆ ಮಾಡಬಹುದು.

(6) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಯಾವುದೇ ಆದೇಶವನ್ನು ಅಥವಾ ಅಂತಹ ಆದೇಶದಲ್ಲಿ ನಿರ್ದಿಷ್ಟವಾಗಿ ಹೇಳಲಾದ ಷರತ್ತುಗಳು ಅಥವಾ ನಿರ್ಬಂಧಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ ಬಗ್ಗೆ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.][1]

1. 104ಸಿ ಯಿಂದ 104ಜಿ ಪ್ರಕರಣಗಳನ್ನು 1981ರ ಅಧಿನಿಯಮ 1ರ ಮೂಲಕ 23.02.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 104ಇ ಪ್ರಕರಣವನ್ನು1984ರ ಅಧಿನಿಯಮ 11ರ ಮೂಲಕ 13.01.1984 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**105. ಅರಣ್ಯ ಅಧಿಕಾರಿಗಳಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ನೆರವಾಗಲು ವ್ಯಕ್ತಿಗಳ ಬದ್ಧತೆ.-**(1) ಯಾವುದೇ ಮೀಸಲು ಅರಣ್ಯದಲ್ಲಿ ಅಥವಾ ಸಂರಕ್ಷಿತ ಅರಣ್ಯದಲ್ಲಿ ಅಥವಾ ಜಿಲ್ಲಾ ಅರಣ್ಯದಲ್ಲಿ ಯಾವುದೇ ಹಕ್ಕನ್ನು ಚಲಾಯಿಸುವ ಅಥವಾ ಯಾವುದೇ ಅರಣ್ಯದಿಂದ ಅರಣ್ಯ ಉತ್ಪನ್ನಗಳನ್ನು ತೆಗೆದುಕೊಳ್ಳಲು ಅಥವಾ ಕಡಿಯಲು ಮತ್ತು

ಸಾಗಿಸಲು ಅಥವಾ ಜಾನುವಾರುಗಳನ್ನು ಮೇಯಿಸಲು ಅನುಮತಿ ಪಡೆದಿರುವ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಅಂಥ ಅರಣ್ಯದಲ್ಲಿ ಅಂಥ ಯಾರೇ ವ್ಯಕ್ತಿಯಿಂದ ನಿಯೋಜಿತ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಸಮುದಾಯಕ್ಕೆ ಸಲ್ಲಿಸಬೇಕಾದ ಸೇವೆಗಳ ಸಲುವಾಗಿ ಸರ್ಕಾರದಿಂದ ನಿಯೋಜಿತರಾದ ಅಥವಾ ಸರ್ಕಾರದಿಂದ ಉಪಲಬ್ಧಿಯನ್ನು ಪಡೆಯುವ ಅಂಥ ಅರಣ್ಯದಲ್ಲಿ ಹೊಂದಿಕೊಂಡಿರುವ ಯಾವುದೇ ಗ್ರಾಮದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಅರಣ್ಯಕ್ಕೆ ಅಥವಾ ಅದರ ಹತ್ತಿರ ಸಂಭವಿಸಿದ ಬೆಂಕಿಯ ಬಗ್ಗೆ ಅಥವಾ ಯಾವುದೇ ಅರಣ್ಯ  ಅಪರಾಧವನ್ನು ಮಾಡಿದ ಬಗ್ಗೆ ಅಥವಾ ಮಾಡುವ ಉದ್ದೇಶದ ಬಗ್ಗೆ ಹತ್ತಿರದ ಅರಣ್ಯ ಅಧಿಕಾರಿಗೆ ಅಥವಾ ಪೊಲೀಸ್ ಅಧಿಕಾರಿಗೆ ತನ್ನಲ್ಲಿರಬಹುದಾದ ಯಾವುದೇ ಮಾಹಿತಿಯನ್ನು ಅನಾವಶ್ಯಕ ವಿಳಂಬವಿಲ್ಲದೇ ಒದಗಿಸಲು ಬದ್ಧನಿರತಕ್ಕದ್ದು ಮತ್ತು ಯಾರೇ ಅರಣ್ಯ ಅಧಿಕಾರಿಯು ಅಥವಾ ಪೊಲೀಸ್ ಅಧಿಕಾರಿಯು ಹೀಗೆ ಅಗತ್ಯ ಪಡಿಸಿರಲಿ ಅಥವಾ ಇಲ್ಲದಿರಲಿ,-

(ಎ) ಅಂಥ ಅರಣ್ಯದಲ್ಲಿ ಯಾವ ಕಾಡ್ಗಿಚ್ಚಿನ ಬಗ್ಗೆ ತನಗೆ ಗೊತ್ತಿರುವುದೋ ಅಥವಾ ಮಾಹಿತಿ ಇರುವುದೋ ಅಂಥ ಯಾವುದೇ ಕಾಡ್ಗಿಚ್ಚನ್ನು ಆರಿಸುವ ಬಗ್ಗೆ;

(ಬಿ) ಅಂಥ ಅರಣ್ಯದ ಹತ್ತಿರದಲ್ಲಿರುವ ಯಾವ ಬೆಂಕಿಯ ಬಗ್ಗೆ ತನಗೆ ತಿಳಿದಿರುವುದೋ ಅಥವಾ ಮಾಹಿತಿ ಇರುವುದೋ ಅಂಥ ಯಾವುದೇ ಬೆಂಕಿಯು ಅಂಥ ಅರಣ್ಯಕ್ಕೆ ಹಬ್ಬುವುದನ್ನು ತನ್ನ ಅಧಿಕಾರದಲ್ಲಿದ್ದ ಯಾವುದೇ ಕಾನೂನು ಸಮ್ಮತ ಕ್ರಮಗಳಿಂದ ತಡೆಗಟ್ಟುವ ಬಗ್ಗೆ;

(ಸಿ) ಅಂಥ ಅರಣ್ಯದಲ್ಲಿ, ಅಂಥ ಯಾವುದೇ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲು ಕಾರಣವಿದ್ದಾಗ, ಅಪರಾಧಿಯನ್ನು ಪತ್ತೆ ಹಚ್ಚುವ ಮತ್ತು ದಸ್ತಗಿರಿ ಮಾಡುವ ಬಗ್ಗೆ; ಮತ್ತು

(ಡಿ) ಅಂಥ ಅರಣ್ಯದಲ್ಲಿ, ಅಂಥ ಯಾವುದೇ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲು ಕಾರಣವಿದ್ದಾಗ, ಅಪರಾಧಿಯನ್ನು ಪತ್ತೆ ಹಚ್ಚುವ ಮತ್ತು ದಸ್ತಗಿರಿ ಮಾಡುವ ಬಗ್ಗೆ:

- ಸಹಾಯ ಮಾಡತಕ್ಕದ್ದು.

(2) ಹೀಗೆ ಮಾಡಲು ಬದ್ಧನಿರುವ ಯಾರೇ ವ್ಯಕ್ತಿಯ ಕಾನೂನು ಸಮ್ಮತ ಕಾರಣವಿಲ್ಲದೆ (ಇದನ್ನು ರುಜುವಾತು ಮಾಡುವ ಹೊಣೆಯು ಅಂಥ ವ್ಯಕ್ತಿಯ ಮೇಲಿರತಕ್ಕದ್ದು.

(ಎ) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯವಾದ ಮಾಹಿತಿಯನ್ನು ಹತ್ತಿರದ ಅರಣ್ಯ ಅಧಿಕಾರಿಗೆ ಅಥವಾ ಪೊಲೀಸು ಅಧಿಕಾರಿಗೆ ಅನಾವಶ್ಯಕ ವಿಳಂಬವಿಲ್ಲದೆ ಒದಗಿಸಲು;

(ಬಿ) ಯಾವುದೇ ಮೀಸಲು ಅರಣ್ಯದಲ್ಲಿ ಅಥವಾ ಸಂರಕ್ಷಿತ ಅರಣ್ಯದಲ್ಲಿ ಅಥವಾ ಜಿಲ್ಲಾ ಅರಣ್ಯದಲ್ಲಿ ಯಾವುದೇ ಕಾಡ್ಕಿಚ್ಚನ್ನು ಆರಿಸಲು (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು;

(ಸಿ) ಅಂಥ ಅರಣ್ಯದ ಹತ್ತಿರದಲ್ಲಿರುವ ಯಾವುದೇ ಬೆಂಕಿಯು ಅಂಥ ಅರಣ್ಯಕ್ಕೆ ಹಬ್ಬುವುದನ್ನು (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯವಾದಂತೆ ತಡೆಗಟ್ಟಲು; ಅಥವಾ

(ಡಿ) ಅಂಥ ಅರಣ್ಯದಲ್ಲಿ ಯಾವುದೇ ಅರಣ್ಯ ಅಪರಾಧ ಮಾಡುವುದನ್ನು ತಡೆಗಟ್ಟುವ ಸಂಬಂಧದಲ್ಲಿ ಅಥವಾ ಅಂಥ ಅರಣ್ಯದಲ್ಲಿ ಅಂಥ ಯಾವುದೇ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲು ಕಾರಣವಿದ್ದಾಗ ಅಪರಾಧಿಯನ್ನು ಪತ್ತೆ ಹಚ್ಚುವ ಮತ್ತು ದಸ್ತಗಿರಿ ಮಾಡುವ ಸಂಬಂಧದಲ್ಲಿ ತನ್ನ ನೆರವನ್ನು ಬೇಡುವ ಯಾರೇ ಅರಣ್ಯ ಅಧಿಕಾರಿಗೆ ಅಥವಾ ಪೊಲೀಸು ಅಧಿಕಾರಿಗೆ ನೆರವು ನೀಡಲು,

- ತಪ್ಪಿದಲ್ಲಿ, ಅಪರಾಧ ನಿರ್ಣಯದ ಮೇಲೆ ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**106. ರಾಜ್ಯ ಸರ್ಕಾರದ ಮತ್ತು ಇತರ ವ್ಯಕ್ತಿಗಳ ಸಂಯುಕ್ತ ಸ್ವತ್ತಾಗಿರುವ ಅರಣ್ಯಗಳ ಆಡಳಿತ ನಿರ್ವಹಣೆ.-** (1) ರಾಜ್ಯ ಸರ್ಕಾರವು ಅಥವಾ ಯಾರೇ ವ್ಯಕ್ತಿಯು, ಯಾವುದೇ ಅರಣ್ಯದಲ್ಲಿ ಅಥವಾ ಬಂಜರು ಭೂಮಿಯಲ್ಲಿ ಅಥವಾ ಅದರ ಸಂಪೂರ್ಣ ಅಥವಾ ಭಾಗಶಃ ಉತ್ಪಾದನೆಯಲ್ಲಿ ಸಂಯುಕ್ತ ಹಿತಾಸಕ್ತಿಯನ್ನು ಹೊಂದಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರವು,-

(ಎ) ಅದರಲ್ಲಿ ಅಂಥ ವ್ಯಕ್ತಿಯು ಹೊಂದಿರುವ ಹಿತಾಸಕ್ತಿಯ ಬಗ್ಗೆ ಅವನಿಗೆ ಲೆಕ್ಕವನ್ನು ಕೊಡುತ್ತಾ ಅಂಥ ಅರಣ್ಯದ, ಬಂಜರು ಭೂಮಿಯ ಅಥವಾ ಉತ್ಪನ್ನದ ಆಡಳಿತ ನಿರ್ವಹಣೆಯನ್ನು ವಹಿಸಿಕೊಳ್ಳಬಹುದು, ಅಥವಾ

(ಬಿ) ಹಾಗೆ ಸಂಯುಕ್ತ ಹಿತಾಸಕ್ತಿಯುಳ್ಳ ವ್ಯಕ್ತಿಯು, ಅರಣ್ಯ, ಬಂಜರು ಭೂಮಿ ಅಥವಾ ಉತ್ಪನ್ನಗಳ ವ್ಯವಸ್ಥಾಪನೆ ನಡೆಸುವುದಕ್ಕಾಗಿ, ಅವುಗಳ ನಿರ್ವಹಣೆ ಮತ್ತು ಅದರಲ್ಲಿನ ಎಲ್ಲಾ ಪಕ್ಷಕಾರರ ಹಿತರಕ್ಷಣೆಗಾಗಿ ತಾನು ಅವಶ್ಯಕವೆಂದು ಭಾವಿಸುವಂಥ ವಿನಿಯಮಗಳನ್ನು ಹೊರಡಿಸಬಹುದು.

(2) (1)ನೇ ಉಪ-ಪ್ರಕರಣದ (ಎ) ಖಂಡದ ಅಡಿಯಲ್ಲಿ ಯಾವುದೇ ಅರಣ್ಯದ ಬಂಜರು ಭೂಮಿಯ ಅಥವಾ ಉತ್ಪನ್ನದ ಆಡಳಿತವನ್ನು ತಾನು ವಹಿಸಿಕೊಂಡಾಗ ರಾಜ್ಯ ಸರ್ಕಾರವು II ಮತ್ತು IVನೇ ಅಧ್ಯಾಯಗಳಲ್ಲಿರುವ ಯಾವುದೇ ಉಪಬಂಧಗಳು ಅಂಥ ಅರಣ್ಯಕ್ಕೆ, ಬಂಜರು ಭೂಮಿಗೆ ಅಥವಾ ಉತ್ಪನ್ನಕ್ಕೆ ಅನ್ವಯಿಸತಕ್ಕದ್ದೆಂದು ಅಂಥ ಅಧಿಸೂಚನೆಯ ಮೂಲಕ ಘೋಷಿಸಬಹುದು ಮತ್ತು ತರುವಾಯ ಅಂಥ ಉಪಬಂಧಗಳು ಹಾಗೆಯೇ ಅನ್ವಯವಾಗತಕ್ಕದ್ದು.

**107. ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಕೆಲವು ಭೂಮಿಗಳಿಗೆ ಈ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಲು ರಾಜ್ಯ ಸರ್ಕಾರದ ಅಧಿಕಾರ.-** ಕಾಲುವೆಯ ದಡದಲ್ಲಿರುವ ಅಥವಾ ರಸ್ತೆಯ ಪಕ್ಕದಲ್ಲಿರುವ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಸ್ವತ್ತಾಗಿರುವ ಎಲ್ಲಾ ಅಥವಾ ಯಾವುದಾದರೂ ಭೂಮಿಗಳಿಗೆ ಈ ಅಧಿನಿಯಮದ ಉಪಬಂಧಗಳ ಪೈಕಿ ಯಾವುದಾದರೂ ಅನ್ವಯಿಸತಕ್ಕದ್ದೆಂದು ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ಘೋಷಿಸಬಹುದು ಮತ್ತು ಆ ತರುವಾಯ ಅಂಥ ಉಪಬಂಧಗಳು ಅಂಥ ಭೂಮಿಗಳಿಗೆ ಹಾಗೆ ಅನ್ವಯವಾಗತಕ್ಕದ್ದು.

**108. ಯಾವ ಸೇವೆ ಸಲ್ಲಿಸುವುದಕ್ಕಾಗಿ ಸರ್ಕಾರದ ಅರಣ್ಯ ಉತ್ಪನ್ನದಲ್ಲಿನ ಸಾಲನ್ನು ಅನುಭೋಗಿಸಲಾಗುತ್ತಿದೆಯೋ ಅದನ್ನು ನಿರ್ವಹಿಸಲು ತಪ್ಪುವಿಕೆ.-** (1) ರಾಜ್ಯ ಸರ್ಕಾರದ ಸ್ವತಾಗಿರುವ ಅಥವಾ ರಾಜ್ಯ ಸರ್ಕಾರವು ಒಡೆತನದ ಹಕ್ಕನ್ನು ಹೊಂದಿರುವ ಯಾವುದೇ ಅರಣ್ಯ ಉತ್ಪನ್ನದಲ್ಲಿಯ ಪಾಲಿಗೆ ಅಥವಾ ಯಾವುದೇ ಅರಣ್ಯಕ್ಕೆ ಸಂಬಂಧಪಟ್ಟ ಯಾವುದೇ ಸೇವೆಯನ್ನು ಸರಿಯಾದ ರೀತಿಯಲ್ಲಿ ನೆರವೇರಿಸುವ ಷರತ್ತಿನ ಮೇಲೆ ಅಥವಾ ರಾಜ್ಯ ಸರ್ಕಾರದ ಹಕ್ಕುಳ್ಳ ಅರಣ್ಯ ಉತ್ಪನ್ನದ ಯಾವುದೇ ಭಾಗಕ್ಕೆ ಯಾರೇ ವ್ಯಕ್ತಿಯು ಹಕ್ಕುಳ್ಳವನಾಗಿದ್ದರೆ, ಅಂಥ ಸೇವೆಯನ್ನು ಹಾಗೆ ನೆರವೇರಿಸಲ್ಪಡುತ್ತಿಲ್ಲವೆಂಬ ಸಂಗತಿಯು ಸರ್ಕಾರಕ್ಕೆ ಮನದಟ್ಟಾಗುವಂತೆ ಸಿದ್ಧಪಡಿಸಿದ ಸಂಧರ್ಭದಲ್ಲಿ, ಅಂಥ ಪಾಲು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು:

ಪರಂತು, ಅದಕ್ಕೆ ಹಕ್ಕುಳ್ಳ ವ್ಯಕ್ತಿಯು ಅಹವಾಲನ್ನು ಮತ್ತು ತಾನು ಅಂಥ ಸೇವೆಯನ್ನು ಸರಿಯಾದ ರೀತಿಯಲ್ಲಿ ನೆರವೇರಿಸುವುದನ್ನು ರುಜುವಾತುಪಡಿಸುವುದಕ್ಕಾಗಿ ಅವನು ಹಾಜರುಪಡಿಸಬಹುದಾದ ಸಾಕ್ಷ್ಯವೇನಾದರೂ ಇದ್ದರೆ ಅದನ್ನು, ಆ ಬಗ್ಗೆ ಸರ್ಕಾರದಿಂದ ಸೂಕ್ತ ರೀತಿಯಲ್ಲಿ ನಿಯುಕ್ತನಾದ ಅಧಿಕಾರಿಯು ಕೇಳುವವರೆಗೆ, ಅಂಥ ಪಾಲನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದಲ್ಲ.

(2) (1) ನೇ ಉಪ-ಪ್ರಕರಣದ ಅಡಿಯಲ್ಲಿ ತನ್ನ ಪಾಲು ಮುಟ್ಟುಗೋಲಾದುದರಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರದ ಆದೇಶವು ತಲುಪಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಳ್ಳಬಹುದು.

**109. ಸರ್ಕಾರಕ್ಕೆ ಬರಬೇಕಾದ ಹಣದ ವಸೂಲಿ.-** [1][(1)][1] ಈ ಅಧಿನಿಯಮದ ಅಡಿಯಲ್ಲಿ ಅಥವಾ ಈ ಅಧಿನಿಯಮದಡಿ ರಚಿಸಲಾದ ಯಾವುದೇ ನಿಯಮದ ಅಡಿಯಲ್ಲಿ ಅಥವಾ ಅರಣ್ಯ ಉತ್ಪನ್ನದ ಬೆಲೆಯ ಬಗ್ಗೆ ಅಥವಾ ಅಂಥ ಉತ್ಪನ್ನದ ಸಂಬಂಧದಲ್ಲಿ ಈ ಅಧಿನಿಯಮವನ್ನು ಜಾರಿಗೆ ತರುವಲ್ಲಿ ತಗುಲಿದ ವೆಚ್ಚಗಳಿಗಾಗಿ, ರಾಜ್ಯ ಸರ್ಕಾರಕ್ಕೆ ಸಂದಾಯವಾಗಬೇಕಾದ ಸಂಧರ್ಭದಲ್ಲಿ ಪಾವತಿಯಾಗದಿದ್ದರೆ ಅದನ್ನು ಭೂ-ಕಂದಾಯದ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.

1. 2000ದ ಅಧಿನಿಯಮ 20ರ ಮೂಲಕ 04.10.2000 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

[1][(2) (1)ನೇ ಉಪ ಪ್ರಕರಣದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ ಈ ಅಧಿನಿಯಮದಡಿ ಅಥವಾ ಅದರಡಿ ರಚಿಸಲಾದ ಅಥವಾ ಹೊರಡಿಸಲಾದ ಯಾವುದೇ ನಿಯಮ, ಆದೇಶ ಅಥವಾ ಅಧಿಸೂಚನೆ ಅಡಿಯಲ್ಲಿ ಯಾರೇ ವ್ಯಕ್ತಿಯಿಂದ ಬರಬೇಕಾದ ಗುತ್ತಿಗೆ, ಬಾಡಿಗೆ, ಅರಣ್ಯಾಭಿವೃದ್ಧಿ ತೆರಿಗೆ, ರಾಯಧನ, ಅರಣ್ಯ ಉತ್ಪನ್ನದ ಬೆಲೆ ಅಥವಾ ಯಾವುದೇ ವಿಚಾರಣೆಯನ್ನು ಮಾಡಿದ ತರುವಾಯ ಮತ್ತು ಅಂಥ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶ ನೀಡಿದ ತರುವಾಯ ಸಂದಾಯವಾಗತಕ್ಕ ಮೊಬಲಗು ಎಷ್ಟು ಎಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಸದರಿ ಮೊಬಲಗನ್ನು ವಸೂಲು ಮಾಡಲು ಒಂದು ಪ್ರಮಾಣಪತ್ರವನ್ನು ನೀಡತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ಒಂದು ಆದೇಶವು ಯಾವ ವ್ಯಕ್ತಿಯ ವಿರುದ್ಧ ಅದನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಬಂಧಕವಾಗತಕ್ಕದ್ದು, ಅರಣ್ಯ ಸಂರಕ್ಷಣಾಧಿಕಾರಿಯು ಸಹಿ ಮಾಡಿದ ಒಂದು ಪ್ರಮಾಣ ಪತ್ರದ ಮೇಲೆ ನಿರ್ವಹಿಸದೇ

ಹೋದಲ್ಲಿ ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿ ಎಂದು ಭಾವಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯದ ಒಂದು ಡಿಕ್ರಿ ಎಂಬ ರೀತಿಯಲ್ಲಿಯೇ ಅದನ್ನು ಕಾರ್ಯಗತಗೊಳಿಸತಕ್ಕದ್ದು.][1]

1. 2000ದ ಅಧಿನಿಯಮ 20ರ ಮೂಲಕ 04.10.2000 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**110. ಅಂಥ ಹಣಕ್ಕಾಗಿ ಆರಣ್ಯ ಉತ್ಪನ್ನದ ಮೇಲೆ ಹಕ್ಕು.-** (1) 109ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಹಣವು, ಯಾವುದೇ ಅರಣ್ಯ ಉತ್ಪನ್ನಕ್ಕಾಗಿ ಅಥವಾ ಅದರ ಸಂಬಂಧದಲ್ಲಿ ಸಂದಾಯವಾಗಬೇಕಾದಾಗ, ಆ ಸಂಬಂಧದಲ್ಲಿನ ಮೊಬಲಗು ಅಂಥ ಉತ್ಪನ್ನದ ಮೇಲೆ – ಪ್ರಥಮ ಋಣಭಾರವಾಗಿರತಕ್ಕದ್ದು ಮತ್ತು ಅಂಥ ಉತ್ಪನ್ನವನ್ನು ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಲಾದ ಅರಣ್ಯ ಅಧಿಕಾರಿಯು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅಂತಹ ಮೊಬಲಗು ಸಂದಾಯವಾಗುವವರೆಗೆ ಅವನು ಅದನ್ನು ತನ್ನ ವಶದಲ್ಲಿಟ್ಟುಕೊಂಡಿರಬಹುದು.

(2) ಅಂಥ ಮೊಬಲಗು, ಅದು ಸಂದಾಯವಾಗಬೇಕಾದಾಗ ಪಾವತಿಯಾಗದಿದ್ದರೆ, ಅರಣ್ಯ ಅಧಿಕಾರಿಯು ಅಂಥ ಉತ್ಪನ್ನವನ್ನು ಬಹಿರಂಗ ಹರಾಜಿನ ಮೂಲಕ ಮಾರಬಹುದು ಮತ್ತು ಮಾರಾಟದಿಂದ ಬಂದ ಉತ್ಪನ್ನವನ್ನು ಅಂಥ ಮೊಬಲಗಿನ ಪಾವತಿಯ ಬಗ್ಗೆ ಮೊದಲು ವಿನಿಯೋಗಿಸತಕ್ಕದ್ದು.

(3) ಹೆಚ್ಚುವರಿ ಏನಾದರೂ ಇದ್ದಲ್ಲಿ, ಅದನ್ನು ಅದಕ್ಕೆ ಹಕ್ಕುಳ್ಳ ವ್ಯಕ್ತಿಯು, ಮಾರಾಟದ ದಿನಾಂಕದಿಂದ ಅರವತ್ತು ದಿನಗಳೊಳಗೆ ಕ್ಲೇಮು ಮಾಡದಿದ್ದರೆ, ಅದು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದು.

**111. ಈ ಅಧಿನಿಯಮದ ಅಡಿಯಲ್ಲಿ ಅಗತ್ಯವಿರುವ ಭೂಮಿಯು ಭೂ-ಅರ್ಜನೆ ಅಧಿನಿಯಮದ ಆಡಿಯಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಆವಶ್ಯಕವಿರುವ ಭೂಮಿಯೆಂದು ಭಾವಿಸುವುದು.-** ಈ ಅಧಿನಿಯಮದ ಯಾವುದೇ ಉದ್ದೇಶಗಳಿಗಾಗಿ, ಯಾವುದೇ ಭೂಮಿಯು, ಭೂ-ಅರ್ಜನೆ ಅಧಿನಿಯಮ, 1894ರ 4ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಅವಶ್ಯಕವಿದೆಯೆಂದು ಭಾವಿಸತಕ್ಕದ್ದು.

**112. ಮುಚ್ಚಳಿಕೆ ಅಡಿಯಲ್ಲಿ ಬರಬೇಕಾದ ದಂಡಗಳ ವಸೂಲಿ.-** (1) ಈ ಅಧಿನಿಯಮದ ಯಾವುದೇ ಉಪಬಂಧದನುಸಾರವಾಗಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮದ ಪಾಲನೆಗಾಗಿ, ಯಾರೇ ವ್ಯಕ್ತಿಯು ಯಾವುದೇ ಮುಚ್ಚಳಿಕೆ ಅಥವಾ

ಲಿಖಿತದ ಮೂಲ ಯಾವುದೇ ಕರ್ತವ್ಯ ಅಥವಾ ಕಾರ್ಯವನ್ನು ನೆರವೇರಿಸಲು ತನ್ನನ್ನು ಬದ್ಧನನ್ನಾಗಿ ಮಾಡಿಕೊಂಡರೆ ಅಥವಾ ಯಾವುದೇ ಮುಚ್ಚಳಿಕೆ ಅಥವಾ ಲಿಖಿತದ ಮೂಲಕ ತಾನು ಮತ್ತು ತನ್ನ ಸೇವಕರು ಮತ್ತು ಏಜೆಂಟರು ಯಾವುದೇ ಕಾರ್ಯವನ್ನು ಮಾಡುವುದಿಲ್ಲವೆಂಬ ಒಡಂಬಡಿಕೆ ಮಾಡಿಕೊಂಡರೆ ಅದರಲ್ಲಿಯ ಷರತ್ತುಗಳ ಉಲ್ಲಂಘನೆಯ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ಮತ್ತು ಅಂಥ ಮುಚ್ಚಳಿಕೆಯಲ್ಲಿ ಅಥವಾ ಲಿಖಿತದಲ್ಲಿ ನಮೂದಿಸಲಾದ ಪೂರ್ಣ ಮೊಬಲಗನ್ನು ಭಾರತದ ಕರಾರು ಅಧಿನಿಯಮ, 1872ರ 74ನೇ ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಉಲ್ಲಂಘನೆಯ ಸಂದರ್ಭದಲ್ಲಿ ಅವನಿಂದ ಅದು ಭೂ ಕಂದಾಯದ ಬಾಕಿ ಎಂಬಂತೆ ವಸೂಲು ಮಾಡಬಹುದು.

(2) ಯಾವುದೇ ಪ್ರಶ್ನೆಯು -

(ಎ) ಅಂಥ ಮುಚ್ಚಳಿಕೆ ಅಥವಾ ಲಿಖಿತದ ಷರತ್ತುಗಳಲ್ಲಿ ಯಾವುದಾದರೂ ಉಲ್ಲಂಘನೆಯಾಗಿದೆಯೇ ಎಂಬುದರ ಬಗ್ಗೆ;

(ಬಿ) ಅಂಥ ಉಲ್ಲಂಘನೆಗಾಗಿ ಸಂದಾಯ ಮಾಡಬೇಕಾದ ಮೊಬಲಗಿನ ಬಗ್ಗೆ;

(ಸಿ) ಅಂಥ ಮೊಬಲಗನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಬಗ್ಗೆ,

-ಉದ್ಭವಿಸಿದರೆ ಆ ಪ್ರಶ್ನೆಯನ್ನು (ಸಂಬಂಧಪಟ್ಟ ವ್ಯಕ್ತಿಗೆ ನೋಟೀಸು ಕೊಟ್ಟ ತರುವಾಯ

- ಮತ್ತು ಅವನ ಆಕ್ಷೇಪಣೆಗಳೇನಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ) ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತಗೊಳಿಸಲಾದ, [1][ಉಪ ಅರಣ್ಯ ಸಂರಕ್ಷಣಾಧಿಕಾರಿಯ][1] ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅರಣ್ಯ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಅವನು ಅದನ್ನು ತೀರ್ಮಾನಿಸತಕ್ಕದ್ದು, ಅಂಥ ಅಧಿಕಾರಿಯ ತೀರ್ಮಾನದಿಂದ ಬಾಧಿತನಾದ ವ್ಯಕ್ತಿಯು, ಅಂಥ - ತೀರ್ಮಾನದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದಾದ ಅಪೀಲು ಪ್ರಾಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು. ಅಂಥ ಅಧಿಕಾರಿಯ ತೀರ್ಮಾನವು, ಆಪೀಲು ಪ್ರಾಧಿಕಾರಿಗೆ ಸಲ್ಲಿಸುವ ಅಪೀಲಿಗೆ ಮತ್ತು ಅಂಥ ಅಪೀಲಿನಲ್ಲಿ ಅಪೀಲು ಪ್ರಾಧಿಕಾರಿಯ ತೀರ್ಮಾನಕ್ಕೊಳಪಟ್ಟು, ಅಂತಿಮವಾಗಿರತಕ್ಕದ್ದು.

1. 2001ರ ಅಧಿನಿಯಮ 20ರ ಮೂಲಕ 05.09.2002 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**113. ಅರಣ್ಯ ಅಧಿಕಾರಿಗಳನ್ನು ಸಾರ್ವಜನಿಕ ನೌಕರರೆಂದು ಭಾವಿಸುವುದು.-** ಎಲ್ಲಾ ಅರಣ್ಯ ಅಧಿಕಾರಿಗಳನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.

**114. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಥವಾ ಮಾಡಿದ ಆದೇಶಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯ ಅಥವಾ ಕಾರ್ಯಲೋಪಕ್ಕಾಗಿ ಯಾರೇ ಅರಣ್ಯ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ನು ಅಥವಾ ಇತರ ಕಾನೂನು ವ್ಯವಹರಣೆಯು ನಡೆಯತಕ್ಕದ್ದಲ್ಲ.

[1]**[114ಎ. ಕರ್ತವ್ಯವೆಂಬ ಸೋಗಿನಲ್ಲಿ ಮಾಡಲಾದ ಕೃತ್ಯಗಳ ಸಂಬಂಧದಲ್ಲಿ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನನ್ನು ರಾಜ್ಯ ಸರ್ಕಾರದ ಮಂಜೂರಾತಿಯಿಲ್ಲದೇ ಪುರಸ್ಕರಿಸತಕ್ಕದ್ದಲ್ಲ.-** (1) ಯಾರೇ ಅರಣ್ಯ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಕರ್ತವ್ಯದ ಅಥವಾ ಅಧಿಕಾರದ ಸೋಗಿನಲ್ಲಿ ಅಥವಾ ಅದನ್ನು ಮೀರಿ ಯಾವುದೇ ಕೃತ್ಯದ ಮೂಲಕ ಅಪರಾಧ ಮಾಡಿರುವುದಾಗಿ ಅಥವಾ ತಪ್ಪು ಮಾಡಿರುವುದಾಗಿ ಆರೋಪಿಸಿದ ಯಾವುದೇ ಸಂದರ್ಭದಲ್ಲಿ ಅಥವಾ ಅಂಥ ಅಪರಾಧವನ್ನು ಮಾಡಿದ್ದಲ್ಲಿ ಅದು ಮೇಲೆ ಹೇಳಿದ ಸ್ವರೂಪದ್ದೆಂದು ನ್ಯಾಯಾಲಯಕ್ಕೆ ಕಂಡು ಬಂದಲ್ಲಿ, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದ ಪ್ರಾಸಿಕ್ಯೂಷನ್ ಅಥವಾ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

(2) ಮೇಲೆ ಹೇಳಲಾದಂಥ ತಪ್ಪಿನ ಕಾರಣದಿಂದಾಗಿ ಉದ್ದೇಶಿತವಾದ ದಾವೆಯ ಸಂದರ್ಭದಲ್ಲಿ, ದಾವೆ ಹೂಡಲು ಉದ್ದೇಶಿಸುವ ವ್ಯಕ್ತಿಯು, ಯಾವ ತಪ್ಪಿನ ಬಗ್ಗೆ ದೂರು ನೀಡಲಾಗಿದೆಯೋ ಆ ಬಗ್ಗೆ ಸಾಕಷ್ಟು ವಿವರಣೆಯೊಂದಿಗೆ ಉದ್ದೇಶಿತ ದಾವೆಯ ಬಗ್ಗೆ ಕಡೆಪಕ್ಷ ಒಂದು ತಿಂಗಳ ನೋಟೀಸನ್ನು, ಆರೋಪಿತ ತಪ್ಪು ಮಾಡಿದವನಿಗೆ ನೀಡಲು ಬದ್ಧನಾಗಿರತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಅಂಥ ದಾವೆಯನ್ನು ವಜಾ ಮಾಡತಕ್ಕದ್ದು.

(3) ವಾದಪತ್ರದಲ್ಲಿ ಪ್ರತಿವಾದಿಗೆ ಮೇಲೆ ಹೇಳಲಾದಂತೆ ನೋಟೀಸನ್ನು ಜಾರಿಗೊಳಿಸಲಾಗಿದೆ ಎಂಬುದನ್ನು ಮತ್ತು ಅಂಥ ಜಾರಿಯ ದಿನಾಂಕವನ್ನು ತಿಳಿಸತಕ್ಕದ್ದು ಮತ್ತು ಪ್ರತಿವಾದಿಯು, ಸಾಕಷ್ಟು ಪರಿಹಾರ ನೀಡಿಕೆ ಯಾವುದಾದರೂ ಇದ್ದರೆ ಅದನ್ನು ನೀಡಿದ್ದಾನೆಯೇ ಮತ್ತು ಹಾಗೆ ನೀಡಿದ್ದರೆ ಎಷ್ಟು ಪರಿಹಾರವನ್ನು ನೀಡಿದ್ದಾನೆ ಎಂಬುದನ್ನು

ತಿಳಿಸತಕ್ಕದ್ದು. ಸದರಿ ನೋಟೀಸಿನ ಒಂದು ಪ್ರತಿಯನ್ನು ಅದನ್ನು ಜಾರಿ ಮಾಡಿದ ಸಮಯ ಮತ್ತು ವಿಧಾನದ ಬಗ್ಗೆ ಘೋಷಣಾ ಪತ್ರವನ್ನು ವಾದಪತ್ರಕ್ಕೆ ಹಿಂಬರಹ ಮಾಡಿ ವಾದಿಯು ವಾದಪತ್ರಕ್ಕೆ ಲಗತ್ತಿಸತಕ್ಕದ್ದು.][1]

1. 2000ದ ಅಧಿನಿಯಮ 20ರ ಮೂಲಕ 04.10.2000 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**115. ಅರಣ್ಯ ಅಧಿಕಾರಿಯು ವ್ಯಾಪಾರ ಮಾಡಕೂಡದು.-** (1) ಯಾರೇ ಅರಣ್ಯ ಅಧಿಕಾರಿಯು, ಮುಖ್ಯಸ್ಥ ಅಥವಾ ಏಜೆಂಟಿನಂತೆ ಅಥವಾ ಇತರ ಯಾವುದೇ ಅಧಿಕಾರದಲ್ಲಿ ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನದ ವ್ಯಾಪಾರ ಮಾಡತಕ್ಕದ್ದಲ್ಲ. ಅಥವಾ ಅರಣ್ಯದ ಯಾವುದೇ ಗುತ್ತಿಗೆ ಅಥವಾ ಅಡಮಾನದಲ್ಲಿ ಅಥವಾ [1][ಕರ್ನಾಟಕ ರಾಜ್ಯದೊಳಗೆ][1] ಅಥವಾ ಹೊರಗೆ ಇರುವ ಯಾವುದೇ ಅರಣ್ಯದಿಂದ ಉಪಯೋಗ ಪಡೆಯುವ ಯಾವುದೇ ಕರಾರಿನಲ್ಲಿ ಹಿತಾಸಕ್ತಿ ಹೊಂದಿರತಕ್ಕದ್ದಲ್ಲ.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಎರಡು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**116. 1957ರ ಕೇಂದ್ರ ಅಧಿನಿಯನ್ನು 67 ಪ್ರಭಾವವುಳ್ಳದ್ದಾಗಿರತಕ್ಕದ್ದು.-** ಈ ಅಧಿನಿಯಮದಲ್ಲಿರುವುದು ಯಾವುದೂ, ಖನಿಜಗಳ (ವಿನಿಯಮನ ಮತ್ತು ಅಭಿವೃದ್ಧಿ) ಅಧಿನಿಯಮ, 1957 (1957ರ ಕೇಂದ್ರ ಅಧಿನಿಯಮ 67) ಮತ್ತು ಆದರೆ ಅಡಿಯಲ್ಲಿ ರಚಿಸಲಾದ ನಿಯಮಗಳ ಪ್ರವರ್ತನೆಯನ್ನು ಭಾಧಿಸುವುದೆಂದು ಭಾವಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಉಪಬಂಧಗಳು, ಸದರಿ ಗಣಿಗಳ ಮತ್ತು ಖನಿಜಗಳ (ವಿನಿಯಮನ ಮತ್ತು ಅಭಿವೃದ್ಧಿ) ಅಧಿನಿಯಮ, 1957ರ ಉಪಬಂಧಗಳ ಜೊತೆಗೆ ಮತ್ತು ಅದನ್ನು ಅಲ್ಪೀಕರಿಸದೆ ಇರತಕ್ಕದ್ದು.

**117. ನಿರಸನ ಮತ್ತು ಉಳಿಸುವಿಕೆಗಳು.-** [1][ಬೆಳಗಾಂ ಪ್ರದೇಶದಲ್ಲಿ][1] ಜಾರಿಯಲ್ಲಿರುವಂತಹ ಭಾರತ ಅರಣ್ಯ ಅಧಿನಿಯಮ, 1927 (1927 ರ ಕೇಂದ್ರ ಅಧಿನಿಯಮ, XVI), ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವಂತಹ ಭಾರತ ಅರಣ್ಯ ಅಧಿನಿಯಮ, 1927 (1927ರ ಕೇಂದ್ರ ಅಧಿನಿಯಮ, XVI), ಗುಲ್ಬರ್ಗಾ ಪ್ರದೇಶದಲ್ಲಿ ಜಾರಿಯಲ್ಲಿರುವಂತಹ

ಹೈದರಾಬಾದ್ ಅರಣ್ಯ ಅಧಿನಿಯಮ, 1355-ಫಾಸ್ಸಲಿ (1355ರ ಫಾಸ್ಸಲಿ ಹೈದರಾಬಾದ್ ಅಧಿನಿಯಮ, 11), [1][ಮಂಗಳೂರು ಮತ್ತು ಕೊಳ್ಳೆಗಾಲ ಪ್ರದೇಶದಲ್ಲಿ][1] ಜಾರಿಯಲ್ಲಿರುವಂತಹ ಮದ್ರಾಸ್ ಅರಣ್ಯ ಅಧಿನಿಯಮ, 1882 (1882ರ, ಮದ್ರಾಸ್ ಅಧಿನಿಯಮ V), ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತಹ ಮೈಸೂರು ಅರಣ್ಯ ಅಧಿಯಮ, 1900 (1900ರ ಮೈಸೂರು ಅಧಿನಿಯಮ X) ಮತ್ತು [1][ಕರ್ನಾಟಕ][1] ಖಾಸಗಿ ಆರಣ್ಯಗಳ ಸಂರಕ್ಷಣೆ ಅಧಿನಿಯಮ, 1962 (1962ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 19) -ಇವುಗಳನ್ನು ಈ ಮೂಲಕ ನೀರಸನಗೊಳಿಸಲಾಗಿದೆ:

ಪರಂತು, ಈ ನಿರಸನವು -

(ಎ) ಹಾಗೆ ನಿರಸಿತವಾದ ಯಾವುದೇ ಕಾನೂನಿನ ಪೂರ್ವ ಪ್ರವರ್ತನೆ ಅಥವಾ ಅದರ ಅಡಿಯಲ್ಲಿ ಕ್ರಮಬದ್ಧವಾಗಿ ಮಾಡಲಾದ ಯಾವುದೇ ಕಾರ್ಯ ಅಥವಾ ಅದರಡಿಯಲ್ಲಿ ಅನುಭವಿಸಿದ ಏನನ್ನಾದರೂ; ಅಥವಾ

(ಬಿ) ಹಾಗೆ ನಿರಸಿತವಾದ ಯಾವುದೇ ಕಾನೂನಿನ ಅಡಿಯಲ್ಲಿ ಅರ್ಜಿಸಿದ, ಒದಗಿ ಬಂದ ಅಥವಾ ಹೊಂದಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆ; ಅಥವಾ

(ಸಿ) ಹಾಗೆ ನಿರಸಿತವಾದ ಯಾವುದೇ ಕಾನೂನಿಗೆ ವಿರುದ್ಧವಾಗಿ ಮಾಡಲಾದ ಯಾವುದೇ ಆಪರಾಧದ ಸಂಬಂಧದಲ್ಲಿ ಗುರಿಯಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆ ; ಅಥವಾ

(ಡಿ) ಮೇಲೆ ಹೇಳಿದಂತಹ ಹಕ್ಕು ವಿಶೇಷಾಧಿಕಾರ, ಬಾದ್ಯತೆ, ಹೊಣೆ, ದಂಡ, ಮುಟ್ಟುಗೋಲು ಅಥವಾ ದಂಡನೆಗಳ ಸಂಬಂಧದಲ್ಲಿಯು ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಕ್ರಮೋಪಾಯ;

-ಇವುಗಳ ಮೇಲೆ ಯಾವ ಪರಿಣಾಮವನ್ನು ಉಂಟುಮಾಡತಕ್ಕದ್ದಲ್ಲ ಮತ್ತು ಈ ಅಧಿನಿಯಮವು ಅನುಮೋದಿತವಾಗಿರಲಿಲ್ಲವೆಂಬಂತೆ ಅಂತಹ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಕ್ರಮೋಪಾಯವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೆ ತರಬಹುದು ಮತ್ತು ಅಂತಹ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು:

ಮತ್ತು ಪರಂತು, ಈ ಹಿಂದಿನ ಉಪಬಂಧಗಳಿಗೊಳಪಟ್ಟು ಅಂತಹ ಯಾವುದೇ ಕಾನೂನಿನ ಮೇರೆಗೆ (ಮಾಡಲಾದ ಯಾವುದೇ ನೇಮಕ ಅಥವಾ ಪ್ರತಿಯೋಜನೆ, ಹೊರಡಿಸಲಾದ ಯಾವುದೇ ಅಧಿಸೂಚನೆ, ಆದೇಶ, ಅನುದೇಶ ಅಥವಾ ನಿರ್ದೇಶನ, ರಚಿಸಲಾದ ನಿಯಮ, ವಿನಿಯಮ, ಪ್ರಪತ್ರ ಅಥವಾ ಯೋಜನೆ, ಪಡೆದ ಪ್ರಮಾಣಪತ್ರ, ಕೊಟ್ಟ ರಹದಾರಿ ಅಥವಾ ಲೈಸೆನ್ಸು ಅಥವಾ ಮಾಡಲಾದ ನೋಂದಣಿ - ಇವುಗಳೂ ಸೇರಿ) ಮಾಡಲಾದ ಯಾವುದೇ ಕಾರ್ಯವು ಅಥವಾ ಕೈಗೊಂಡ ಕ್ರಮವು ಈ ಅಧಿನಿಯಮದ ತತ್

ಸಂವಾದಿಯಾದ ಉಪಬಂಧಗಳ ಅಡಿಯಲ್ಲಿ ಮಾಡಲಾದವುಗಳು ಅಥವಾ ಕೈಗೊಳ್ಳಲಾಗವುಗಳೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮದಿಂದ ರದ್ದುಗೊಳಿಸಲಾಗುವ ಹೊರತು ಮತ್ತು ರದ್ದುಗೊಳಿಸುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

**118. ತೊಂದರೆಗಳನ್ನು ನಿವಾರಿಸುವ ಅಧಿಕಾರ**.- ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು, ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಅಧಿನಿಯಮಗಳ ಉಪಬಂಧಗಳಿಂದ ಸದರಿ ಉಪಬಂಧಗಳಿಗೆ ಪರಿವರ್ತನ ಹೊಂದಿದರ ಪರಿಣಾಮವಾಗಿ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಂಥ ತೊಂದರೆಗಳನ್ನು ನಿವಾರಿಸಲು, ತಾನು ಅವಶ್ಯಕವೆಂದು ಅಥವಾ ಯುಕ್ತವೆಂದು ಕಂಡು ಬರುವಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

****

The above translation of the Karnataka Forest Act, 1963 (Karnataka Act 5 of 1964) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

GOVERNOR OF KARNATAKA

## ಅಧಿಸೂಚನೆಗಳು

**I**

**ಬೆಂಗಳೂರು, 1ನೇ ಮಾರ್ಚ್ 1969** [**ಸಂ.ಎಎಫ್‌ಡಿ 2 ಎಫ್ ಎ ಡಿ69**]

**ಎಸ್.ಓ.491.-** ಮೈಸೂರು ಅರಣ್ಯ ಅಧಿನಿಯಮ, 1963ರ (1964ರ ಮೈಸೂರು ಅಧಿನಿಯಮ 5) 1ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೈಸೂರು ಸರ್ಕಾರವು ಈ ಮೂಲಕ ನೇಮಿಸಿದ 1969ರ ಜೂನ್ 1ನೇ ದಿನಾಂಕದಂದು ಸದರಿ ಅಧಿನಿಯಮವು ಜಾರಿಗೆ ಬರತಕ್ಕದ್ದು.

ಮೈಸೂರು ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಬಾಲಸುಬ್ರಮಣ್ಯನ್)
ಅಧೀನ ಕಾರ್ಯದರ್ಶಿ

(ಕರ್ನಾಟಕ ಸರ್ಕಾರಿ ರಾಜ್ಯಪತ್ರ ಭಾಗIV-2c(ii) ದಿನಾಂಕ: 13.3.1969ರಂದು ಪ್ರಕಟಿಸಲಾಗಿದೆ.)

**II**

**ಬೆಂಗಳೂರು, 4ನೇ ಸೆಪ್ಟಂಬರ್ 1974** [**ಸಂ.ಎಎಫ್‌ಡಿ 130 ಎಫ್ ಡಿ ಪಿ 74(I)**]

**ಜಿ.ಎಸ್.ಆರ್.256.-** ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 1974ರ (1974ರ ಕರ್ನಾಟಕ ಅಧಿನಿಯಮ 23)ರ 1ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನೇಮಿಸಿದ 1974ರ ಸೆಪ್ಟಂಬರ್ 16ನೇ ದಿನಾಂಕದಂದು ಸದರಿ ಅಧಿನಿಯಮವು ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಶ್ಯಾಮ್ ಸುಂದರ್)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಕೃಷಿ ಮತ್ತು ಅರಣ್ಯ ಇಲಾಖೆ.

(ಕರ್ನಾಟಕ ಸರ್ಕಾರಿ ರಾಜ್ಯಪತ್ರ ಭಾಗIV-2c(ii) ದಿನಾಂಕ: 12.9.1974ರಂದು ಪು. 963ರಲ್ಲಿ ಪ್ರಕಟಿಸಲಾಗಿದೆ.)

## III

## ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

## ಅಧಿಸೂಚನೆ

**ಸಂ.ಎಫ್‌ಇಇ 16 ಎಫ್ ಎಸ್ ಡಬ್ಲ್ಯೂ 2001 ಬೆಂಗಳೂರು, ದಿನಾಂಕ: 5ನೇ ಸೆಪ್ಟಂಬರ್ 2002**

ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 2001ರ (2001ರ ಕರ್ನಾಟಕ ಅಧಿನಿಯಮ 20)ರ 1ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನೇಮಿಸಿದ 2002ರ ಸೆಪ್ಟಂಬರ್ 05ನೇ ದಿನಾಂಕದಂದು ಸದರಿ ಅಧಿನಿಯಮವು ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ವಿ.ಜಯಲಕ್ಷ್ಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ
ಇಲಾಖೆ.

******

## 2015ರ ಕರ್ನಾಟಕ ಅಧಿನಿಯಮ 41

*(2015ರ ಡಿಸೆಂಬರ್ ಇಪ್ಪತ್ತೊಂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದಲ್ಲಿ (ವಿಶೇಷ) ಮೊದಲು ಪ್ರಕಟಿಸಲಾಗಿದೆ.)*

## ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2015

*(2015ರ ಡಿಸೆಂಬರ್ ಇಪ್ಪತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ.)*

ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 5) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಮೂಲ ಅಧಿನಿಯಮದಲ್ಲಿ 98ಎ, 98ಬಿ ಪ್ರಕರಣದಲ್ಲಿ ಸೇರಿಸಲಾಗಿದೆ.

## 2016ರ ಕರ್ನಾಟಕ ಅಧಿನಿಯಮ 23

*(2016ರ ಜುಲೈ ಇಪ್ಪತ್ತೇಳನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದಲ್ಲಿ (ವಿಶೇಷ) ಮೊದಲು ಪ್ರಕಟಿಸಲಾಗಿದೆ.)*

## ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2016

*(2016ರ ಜುಲೈ ಇಪ್ಪತ್ತಾರನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ.)*

ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 5) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಮೂಲ ಅಧಿನಿಯಮದಲ್ಲಿ 2ನೇ ಪ್ರಕರಣ, ಅಧ್ಯಾಯ XIಎ ಮತ್ತು 98ಸಿ ರಲ್ಲಿ ಸೇರಿಸಲಾಗಿದೆ.